

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಮೇ 7 ಮಂಗಳವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 21 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಅಭಿವೃದ್ಧಿಗೊಂಡ ಮೈಸೂರು ಹೆಬ್ಬಾಳು ಕೆರೆಗೆ ನಿರಂತರವಾಗಿ ಸೇರುತ್ತಿದೆ ರಾಸಾಯನಿಕ ನೀರು;

ಸತ್ತು ತೇಲುತ್ತಿವೆ ಅಪಾರ ಮೀನುಗಳು



● ಎಲ್ಲಿ ಹೋದರೋ ಪರಿಸರ ಪ್ರೇಮಿಗಳು! ● ಕನಿಷ್ಠ ಕಳಕಳಿ ಇಲ್ಲದ ಪರಿಸರ ಅಧಿಕಾರಿ ವರ್ಗ

ಮೈಸೂರು, ಮೇ 6(ಎಸ್‌ಬಿಡಿ)– ನಮ್ಮ ಮೈಸೂರು ಸ್ಥಳೀಯ ಆಡಳಿತ ವ್ಯವಸ್ಥೆಯ ನಿರ್ಲಕ್ಷ್ಯದಿಂದ ಮೈಸೂರಿನ ಪುರಾತನ ಹೆಬ್ಬಾಳು ಕೆರೆಯಲ್ಲಿ ಮತ್ತೆ ಲಕ್ಷಾಂತರ ಮೀನುಗಳ ಮಾರಣಹೋಮವಾಗಿವೆ. ಅಪಾರ ಸಂಖ್ಯೆಯ ಇನ್ನಿತರ ಜಲಚರಗಳು ಅಸುನೀಗಿವೆ.

ಮೈಸೂರಿನ ಹಲವು ಬಡಾವಣೆಗಳ ಕೊಳಚೆ ಹಾಗೂ ಹೆಬ್ಬಾಳು–ಹೂಟಗಳ್ಳಿ ಕೈಗಾರಿಕಾ ಪ್ರದೇಶದಿಂದ ಹರಿದು ಬರುವ ರಾಸಾಯನಿಕಯುಕ್ತ ನೀರು ಹೆಬ್ಬಾಳು ಕೆರೆ ಒಡಲು ಸೇರುತ್ತಿರುವ ಪರಿಣಾಮ ದೊಡ್ಡ ಗಾತ್ರದ ಲಕ್ಷಾಂತರ ಮೀನುಗಳು ಹಾಗೂ ಅಪಾರ ಜಲಚರಗಳು ಸತ್ತಿವೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಇಲ್ಲಿನ ತ್ಯಾಜ್ಯ ನೀರು ಸಂಸ್ಕರಣಾ ಘಟಕವಿರುವ ಭಾಗದಲ್ಲಿ ಸತ್ತ ಮೀನುಗಳ ರಾಶಿ ಕಣ್ಣಿಗೆ ರಾಚುತ್ತದೆ. ಅಲ್ಲದೆ ಹಲವು ಕಡೆ ಕೆರೆ ಅಂಚಿನಲ್ಲಿ ಸತ್ತ ಮೀನುಗಳು ತೇಲುತ್ತಿವೆ. ಇಲ್ಲಿಂದ ದುರ್ವಾಸನೆ ಬೀರುತ್ತಿರುವುದರಿಂದ ವಾಯು ವಿಹಾರಿಗಳು ಮೂಗು ಮುಚ್ಚಿಕೊಂಡು ಓಡಾಡುವಂತಾಗಿದೆ. ಸಮೀಪದ ವಸತಿ ಪ್ರದೇಶಕ್ಕೂ ಸತ್ತ ಮೀನುಗಳ ಕೆಟ್ಟ ವಾಸನೆ ವ್ಯಾಪಿಸಿದೆ. ಬಿರು ಬಿಸಿಲಿನ ನಡುವೆ ಸಾಂಕ್ರಾಮಿಕ ರೋಗ ಹರಡುವ ಭೀತಿ ಎದುರಾಗಿದೆ.

ಮಳೆ ಬಂದಾಗಲೆಲ್ಲಾ ಬಲಿ: ಕೆರೆ ಅಭಿವೃದ್ಧಿಪಡಿಸಿ, ಸಂರಕ್ಷಿಸುವ ಯೋಗ್ಯತೆ ಇಲ್ಲದ ಆಡಳಿತ ವ್ಯವಸ್ಥೆಗೆ, ಕನಿಷ್ಠ ನಿರ್ವಹಣೆ ಮಾಡು ವಷ್ಟು ಶಕ್ತಿಯೂ ಇಲ್ಲದಿರುವುದು ದೊಡ್ಡ ದುರಂತ. ಲಕ್ಷಾಂತರ ವಿಧದ ಜಲಚರಗಳಿಗೆ ಆಸರೆಯಾಗಿರುವ ● 6ನೇ ಪುಟಕ್ಕೆ

105 ಕೋಟಿ ರೂ. ವೆಚ್ಚದ ಅಭಿವೃದ್ಧಿಯ ಫಲವೇನು?



ಮೈಸೂರಿನ ಪುರಾತನ ಹಾಗೂ ವಿಶಾಲವಾಗಿದ್ದ ಕೆರೆಗಳಲ್ಲಿ ಹೆಬ್ಬಾಳು ಕೆರೆಯೂ ಒಂದು. ಅತಿಕ್ರಮಣ ಹಾಗೂ ಒತ್ತುವರಿಯಿಂದ ದಿನೇ ದಿನೇ ಮರೆಯಾಗುತ್ತಿದ್ದ ಹೆಬ್ಬಾಳು ಕೆರೆ ಪುನರ್ಜನ್ಮ ಪಡೆದಿದ್ದು ಇನ್ಫೋಸಿಸ್ ಫೌಂಡೇಷನ್ ನೆರವಿನಿಂದ. ಅದರಲ್ಲೂ ಫೌಂಡೇಷನ್ ಅಧ್ಯಕ್ಷರಾಗಿದ್ದ ಹಾಲಿ ರಾಜ್ಯಸಭಾ ಸದಸ್ಯೆ ಡಾ.ಸುಧಾ ಮೂರ್ತಿ ಅವರ ಅತೀವ ಆಸಕ್ತಿಯೇ ಹೆಬ್ಬಾಳು ಕೆರೆ ಸಂರಕ್ಷಣೆ ಹಾಗೂ ಅಭಿವೃದ್ಧಿಗೆ ಮೂಲ ಕಾರಣ. ಮೈಸೂರು ಜಿಲ್ಲಾಡಳಿತದ ಸಹಯೋಗದಲ್ಲಿ ಇನ್ಫೋಸಿಸ್ ಫೌಂಡೇಷನ್ ವತಿಯಿಂದ ಪಿಪಿಪಿ ಮಾದರಿಯಲ್ಲಿ ಕೆರೆ ಅಭಿವೃದ್ಧಿಪಡಿಸಲಾಗಿದೆ. ಸುಮಾರು 36 ಎಕರೆ ಪ್ರದೇಶವುಳ್ಳ ವಿಶಾಲವಾದ ಕೆರೆಗೆ 2017ರಲ್ಲಿ ಹೊಸ ರೂಪ ನೀಡಲಾಯಿತು. ರಾಜ್ಯದಲ್ಲೇ ಅತೀ ದೊಡ್ಡ ಕೆರೆ ಸಂರಕ್ಷಣೆ ಯೋಜನೆ ಇದಾಗಿತ್ತು. ಬೃಹತ್ ಎಸ್‌ಟಿಪಿ ಘಟಕ, ಕೆರೆ ಏರಿಗೆ ನವೀನ ರೂಪ, ಸುತ್ತಲೂ ಸುರಕ್ಷಿತ ಗ್ರಿಲ್, ವಿದ್ಯುತ್ ದೀಪ, ಹಸಿರೀಕರಣ ಸೇರಿದಂತೆ ಸುಮಾರು 105 ಕೋಟಿ ರೂ. ವೆಚ್ಚದಲ್ಲಿ ಹೆಬ್ಬಾಳು ಕೆರೆಯ ಸಮಗ್ರ ಅಭಿವೃದ್ಧಿ ಮಾಡಲಾಯಿತು. ● 9ನೇ ಪುಟಕ್ಕೆ



DGF JEWELLERS
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಹಣಕೊಟ್ಟು ಬಿಡಿಸಿ ಉಳಿದ ಹಣ ತಕ್ಷಣ ಕೊಡುತ್ತೇವೆ. (T&C)
ಒಂದು ಗ್ರಾಂ ಚಿನ್ನಕ್ಕೆ 7000
8884171888

ಬೇಕಾಗಿದ್ದಾರೆ
ಮೈಸೂರಿನ ಖಾಸಗಿ ಕಂಪನಿಗೆ, Fortuner ಮತ್ತು Automatic ಕಾರು ಓಡಿಸುವ ಡ್ರೈವರ್‌ಗಳು ಬೇಕಾಗಿದ್ದಾರೆ.
ಸಂಬಳ: 20,000
ಮತ್ತು ಟೆಲಿಕಾಲಿಂಗ್ ಕಛೇರಿಯ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ.
8884304444



ಹಾಸನ ಪೆನ್‌ಡ್ರೈವ್ ಬಿಡುಗಡೆ ಪ್ರಕರಣ

ಡಿ.ಕೆ.ಶಿವಕುಮಾರ್ ಕಥಾನಾಯಕ

● ವಕೀಲ ದೇವರಾಜೇಗೌಡ ಗಂಭೀರ ಆರೋಪ; ನಾನು ಶಾಮೀಲಾದರೆ ಸಂಪುಟದರ್ಜೆ ಹುದ್ದೆ ಕೊಡಿಸುವುದಾಗಿ ಆಫರ್ ಕೊಟ್ಟಿದ್ದ ಡಿಸಿಎಂ ● ನಾಗಮಂಗಲದ ಎಲ್.ಆರ್.ಶಿವರಾಮೇಗೌಡರಿಂದ ಮಧ್ಯವರ್ತಿ ಕೆಲಸ; ಮೊಬೈಲ್ ಸಂಭಾಷಣೆ ಆಡಿಯೋ ಬಿಡುಗಡೆ ● ವಿಶೇಷ ತನಿಖಾ ದಳದಿಂದ ಸತ್ಯಾಂಶ ಹೊರಬರಲು ಸಾಧ್ಯವೇ ಇಲ್ಲ: ಇಡೀ ಪ್ರಕರಣ ಸಿಬಿಐಗೆ ಒಪ್ಪಿಸಲು ಆಗ್ರಹ ● ಪ್ರಧಾನಿ ಮೋದಿಗೆ ಕೆಟ್ಟ ಹೆಸರು ತರಲು, ಬಿಜೆಪಿ–ಜೆಡಿಎಸ್ ಮೈತ್ರಿ ಮುರಿದು ಹಾಕಲು ಕಾಂಗ್ರೆಸ್, ಡಿಕೆಶಿ ಮಹಿಳೆಯ ಮಾನ ದುರ್ಬಳಕೆ ಮಾಡಿಕೊಂಡಿದ್ದಾರೆ ● ಈ ನಿಟ್ಟಿನಲ್ಲಿ ಉನ್ನತ ಪೊಲೀಸ್ ಅಧಿಕಾರಿಗಳು, ಎಸ್‌ಐಟಿ ಮೇಲೆ ಭಾರೀ ಒತ್ತಡವಿದೆ; ದೇವರಾಜೇಗೌಡ ಸ್ಫೋಟಕ ಹೇಳಿಕೆ

ಬೆಂಗಳೂರು: ಹಾಸನ ಪೆನ್‌ಡ್ರೈವ್ ಪ್ರಕರಣದಲ್ಲಿ ನೊಂದ ಮಹಿಳೆಯರ ಅಶ್ಲೀಲ ವಿಡಿಯೋಗಳನ್ನು ಹರಿಯಬಿಟ್ಟ ಪ್ರಕರಣದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೇ ಕಥಾನಾಯಕ ಎಂದು ವಕೀಲ, ಬಿಜೆಪಿ ಮುಖಂಡ ದೇವರಾಜೇಗೌಡ ಗಂಭೀರ ಆರೋಪ ಮಾಡಿದ್ದಾರೆ.

ಬೆಂಗಳೂರಿನಲ್ಲಿ ಸೋಮವಾರ ಸಂಜೆ ತಮ್ಮ ಸಂಗಡಿಗ ವಕೀಲರ ಜತೆಗೂಡಿ ಮಾಧ್ಯಮಗೋಷ್ಠಿ ನಡೆಸಿದ ಅವರು; ವಿಡಿಯೋಗಳನ್ನು ಲೀಕ್ ಮಾಡಿರುವ ಪ್ರಕರಣದಲ್ಲಿ ರಾಜ್ಯ ಕಾಂಗ್ರೆಸ್ ಸರಕಾರವೇ ಶಾಮೀಲಾಗಿದೆ. ಸ್ವತಃ ಉಪ ಮುಖ್ಯಮಂತ್ರಿಯೇ ನೇರ ಪಾತ್ರ ವಹಿಸಿದ್ದಾರೆ. ಹೀಗಾಗಿ ವಿಶೇಷ ತನಿಖಾದಳ –ಎಸ್‌ಐಟಿಯಿಂದ ಸತ್ಯಾಂಶ ಹೊರಬರಲು ಸಾಧ್ಯವಿಲ್ಲ. ಆದ್ದರಿಂದ ಇಡೀ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು ಎಂದು ದೇವರಾಜೇಗೌಡ ಒತ್ತಾಯಿಸಿದರು. ನಾಗಮಂಗಲದ ಮಾಜಿ ಶಾಸಕ ಎಲ್.ಆರ್. ಶಿವರಾಮೇಗೌಡ ಅವರನ್ನು ಹತ್ತು ಬಾರಿ ನನ್ನ ಬಳಿಗೆ ಸಂಧಾನಕ್ಕೆ ಕಳಿಸಿ ಮಹಿಳೆಯರ ವಿಡಿಯೋಗಳ ಬಿಡುಗಡೆ ಮಾಡಿ ಜೆಡಿಎಸ್–ಬಿಜೆಪಿ ಮೈತ್ರಿ ಹಾಳುಗೆಡವಲು ಕೈಜೋಡಿಸುವಂತೆ ಕೇಳಿದ್ದರು. ಸ್ವತಃ ಡಿ.ಕೆ. ಶಿವಕುಮಾರ್ ಅವರೇ ಮೊಬೈಲ್ ಕರೆ ಮಾಡಿ ನನಗೆ ಸರಕಾರದಲ್ಲಿ ಸಂಪುಟ ದರ್ಜೆ ಹುದ್ದೆಯ ಆಮಿಷ ಒಡ್ಡಿದರು ಎಂದು ಆರೋಪ ಮಾಡಿದರು. ಅದಕ್ಕೆ ಪೂರಕವಾದ ಆಡಿಯೋ ಕ್ಲಿಪ್ ಅನ್ನು ಕೂಡ ಅವರು ಮಾಧ್ಯಮಗೋಷ್ಠಿಯಲ್ಲಿ ಬಿಡುಗಡೆ ಮಾಡಿದರು. ಪ್ರಧಾನಿ ಮೋದಿ ಅವರಿಗೆ ಕೆಟ್ಟ ಹೆಸರು ತರಲು, ಬಿಜೆಪಿ–ಜೆಡಿಎಸ್ ಮೈತ್ರಿ ಮುರಿದು ಹೋಗುವಂತೆ ಮಾಡಲು ಕಾಂಗ್ರೆಸ್ ಪಕ್ಷ ಹಾಗೂ ಡಿ.ಕೆ.ಶಿವಕುಮಾರ್ ಮಹಿಳೆಯ ಮಾನ ವನ್ನು ದುರ್ಬಳಕೆ ಮಾಡಿಕೊಳ್ಳುವ ದುಸ್ಸಾಹ ಸಕ್ಕೆ ಕೈಹಾಕಿದ್ದಾರೆ. ಇದಕ್ಕೆ ಪೊಲೀಸ್ ಇಲಾಖೆಯ ಉನ್ನತ ಅಧಿಕಾರಿಗಳು, ಎಸ್‌ಐಟಿ ಅಧಿಕಾರಿಗಳ ಮೇಲೆ ಭಾರಿ ಒತ್ತಡವಿದೆ ಎಂದು ಅವರು ದೂರಿದರು. ● 6ನೇ ಪುಟಕ್ಕೆ



ದೇವರಾಜೇಗೌಡ

ದೇವರಾಜೇಗೌಡರದ್ದು ಅಪ್ಪಟ ಸುಳ್ಳು; ಡಿಕೆಶಿ



ಮೈಸೂರು: ಬಿಜೆಪಿ ಮುಖಂಡ ದೇವರಾಜೇಗೌಡ ಅವರು ಪತ್ರಿಕಾಗೋಷ್ಠಿಯಲ್ಲಿ ಅಪ್ಪಟ ಸುಳ್ಳಿನ ಹೇಳಿಕೆ ನೀಡಿದ್ದು, ಈ ಸಂಬಂಧ ತಾವು ನಾಳೆ (ಮೇ 7) ಸುದ್ದಿಗೋಷ್ಠಿ ನಡೆಸಿ ಎಲ್ಲಾ ವಿಚಾರಗಳನ್ನು ಹೇಳಲಿರುವುದಾಗಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ. ಈ ಸಂಬಂಧ ವಿಡಿಯೋ ಸಂದೇಶ ರವಾನಿಸಿರುವ ಅವರು, ಪ್ರಸ್ತುತ ತಾವು ಊರಲ್ಲಿ ಇಲ್ಲದ ಕಾರಣ ನಾಳೆ ಬೆಂಗಳೂರಿಗೆ ಬಂದು ಸುದ್ದಿಗೋಷ್ಠಿ ನಡೆಸುವುದಾಗಿ ತಿಳಿಸಿದ್ದಾರೆ. ದೇವರಾಜೇಗೌಡರು, ಪೆನ್‌ಡ್ರೈವ್ ಮತ್ತು ಬಿಜೆಪಿಯ ಆಂತರಿಕ ವಿಚಾರಗಳ ಬಗ್ಗೆ ಮಾತನಾಡಲು ನನ್ನ ಬಳಿ ಪ್ರಯತ್ನಿಸಿದ್ದರು. ಆದರೆ ನನಗೆ ಸಮಯ ಸಿಕ್ಕಿಲ್ಲ. ಅವರು ನನ್ನೊಂದಿಗೆ ಏನೇನು ಚರ್ಚೆ ನಡೆಸಿದ್ದಾರೆ ಎಂಬುದು ಸೇರಿದಂತೆ ಅನೇಕ ವಿಚಾರಗಳನ್ನು ತಿಳಿಸುತ್ತೇನೆ. ಆದರೆ ನನಗೂ ಆತನಿಗೂ ಯಾವುದೇ ಸಂಬಂಧವಿಲ್ಲ. ಸುದ್ದಿಗೋಷ್ಠಿಯಲ್ಲಿ ಅವರು ಹೇಳಿರುವುದೆಲ್ಲಾ ಸತ್ಯಕ್ಕೆ ದೂರ. ಬಿಜೆಪಿ ಮತ್ತು ಜೆಡಿಎಸ್‌ನವರು ದೊಡ್ಡ ರಾಜಕೀಯ ಷಡ್ಯಂತ್ರ ಮಾಡುತ್ತಿದ್ದಾರೆ. ಅವರು ಏನಾದರೂ ಮಾಡಿಕೊಳ್ಳಲಿ. ದೇವರಾಜೇಗೌಡ ಈ ಹಿಂದೆ ಮಾಧ್ಯಮಗಳ ಮುಂದೆ ಏನೆಲ್ಲಾ ತಿಳಿಸಿದರು ಎಂಬುದರ ಬಗ್ಗೆ ನೋಡಿ ತಿಳಿದುಕೊಂಡು ಪ್ರಕಟಿಸಿದರೆ ಸಾಕು ಎಂದು ತಾವು ಬಯಸುತ್ತಿರುವುದಾಗಿ ಡಿ.ಕೆ.ಶಿವಕುಮಾರ್ ಮಾಧ್ಯಮದವರನ್ನು ಉದ್ದೇಶಿಸಿ ವಿಡಿಯೋ ಸಂದೇಶ ರವಾನಿಸಿದ್ದಾರೆ.

ಪ್ರಜ್ವಲ್, ಹೆಚ್.ಡಿ.ರೇವಣ್ಣ ಪ್ರಕರಣದಲ್ಲಿ ದೇವೇಗೌಡರು, ಕುಮಾರಸ್ವಾಮಿ ಹೆಸರು ಬಳಸದಂತೆ ತಡೆಯಾಜ್ಞೆ



ಬೆಂಗಳೂರು, ಮೇ 6(ಕೆಎಂಶಿ)– ಪ್ರಜ್ವಲ್ ರೇವಣ್ಣ ಹಾಗೂ ಎಚ್.ಡಿ. ರೇವಣ್ಣ ಪ್ರಕರಣದಲ್ಲಿ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಮತ್ತು ಎಚ್.ಡಿ. ಕುಮಾರಸ್ವಾಮಿ ಅವರುಗಳ ಹೆಸರನ್ನು ಬಳಸದಂತೆ ನ್ಯಾಯಾಲಯ ತಡೆಯಾಜ್ಞೆ ನೀಡಿದೆ. ಪ್ರಕರಣಗಳಿಗೆ ಸಂಬಂಧಿಸಿದಂತೆ ದೇವೇಗೌಡರ ಕುಟುಂಬದವರ ಹೆಸರುಗಳನ್ನು ಮಾಧ್ಯಮಗಳು ಹಾಗೂ ಕೆಲವರು ಪ್ರಸ್ತಾಪ ಮಾಡುತ್ತಿದ್ದು, ಇನ್ನು ಮುಂದೆ ಹೆಸರುಗಳನ್ನು ಬಳಸದಂತೆ ತಡೆಯಾಜ್ಞೆ ನೀಡಬೇಕೆಂದು ಕೋರಿ ಇಬ್ಬರೂ ನಾಯಕರು ನ್ಯಾಯಾಲಯದ ಮೊರೆ ಹೋಗಿದ್ದರು.

ನಮ್ಮ ಕುಟುಂಬದವರ ಹೆಸರುಗಳನ್ನು ಪ್ರಸ್ತಾಪ ಮಾಡುತ್ತಿರುವುದರಿಂದ ತೀವ್ರ ಮುಜುಗರ ಎದುರಿಸುವಂತಾಗಿದೆ, ಪ್ರಕರಣಕ್ಕೂ ನಮಗೂ ಸಂಬಂಧ ಇಲ್ಲದಿದ್ದರೂ ಕೆಲವರು ಇದನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆಂದು ಉಭಯ ನಾಯಕರು ನ್ಯಾಯಾಲಯಕ್ಕೆ ಮನವಿ ಮಾಡಿಕೊಂಡಿದ್ದರು.

ರಾಜ್ಯದಲ್ಲಿ ಇಂದು 2ನೇ ಹಂತದ ಮತದಾನ

■ ಬಾಕಿ 14 ಲೋಕಸಭಾ ಕ್ಷೇತ್ರಗಳಲ್ಲಿ ಮತದಾನಕ್ಕೆ ಸಕಲ ವ್ಯವಸ್ಥೆ ■ ಎಲ್ಲೆಡೆ ಬಿಜೆಪಿ–ಕಾಂಗ್ರೆಸ್ ನೇರ ಹಣಾಹಣಿ





ಪ್ರಹ್ಲಾದ್ ಜೋಶಿ ಭಗವಂತ ಖೂಬಾ ಜಗದೀಶ್‌ಶೆಟ್ಟರ್ ಬಸವರಾಜ ಬೊಮ್ಮಾಯಿ



ಬೆಂಗಳೂರು, ಮೇ 6(ಕೆಎಂಶಿ)– ಕೇಂದ್ರದ ಸಚಿವರು, ಮಾಜಿ ಮುಖ್ಯಮಂತ್ರಿಗಳು, ಸಚಿವರ ಕುಟುಂಬದ ಸದಸ್ಯರು ಕಣದಲ್ಲಿರುವ ರಾಜ್ಯದ 14 ಲೋಕಸಭಾ ಕ್ಷೇತ್ರಗಳಿಗೆ ಎರಡನೇ ಹಾಗೂ ಅಂತಿಮ ಹಂತದ ಮತದಾನ ಮಂಗಳವಾರ (ಮೇ 7) ಜರುಗಲಿದೆ.

ಮುಕ್ತ, ನ್ಯಾಯಸಮ್ಮತ ಹಾಗೂ ಶಾಂತಿಯುತ ಮತದಾನಕ್ಕೆ ಕೇಂದ್ರದ ಚುನಾವಣಾ ಆಯೋಗ ಸಕಲ ಸಿದ್ಧತೆ ನಡೆಸಿದ್ದು, ಹಳೆ ಮೈಸೂರು ಭಾಗದಲ್ಲಿ ಬೀಡು ಬಿಟ್ಟಿದ್ದ ಅರೆಸೇನಾ ಪಡೆ ಹಾಗೂ ಹೊರ ರಾಜ್ಯದ ಪೊಲೀಸ್ ಸಿಬ್ಬಂದಿಯನ್ನು ಮಂಗಳವಾರ ನಡೆಯಲಿರುವ ಲೋಕ ಸಭಾ ಕ್ಷೇತ್ರಗಳಿಗೆ ಸ್ಥಳಾಂತರಿಸಿದೆ. ದಾವಣಗೆರೆ, ಶಿವಮೊಗ್ಗ, ಉತ್ತರ ಕನ್ನಡ, ಧಾರವಾಡ, ಹಾವೇರಿ, ಬೆಳಗಾವಿ, ಚಿಕ್ಕೋಡಿ, ವಿಜಾಪುರ, ಬಾಗಲಕೋಟೆ, ಗುಲ್ಬರ್ಗಾ, ಬೀದರ್, ರಾಯಚೂರು, ಕೊಪ್ಪಳ ಹಾಗೂ ಬಳ್ಳಾರಿ ಲೋಕಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಬೆಳಗ್ಗೆ 7ರಿಂದ ಸಂಜೆ 6 ಗಂಟೆವರೆಗೆ ಮತದಾನ ನಡೆಯಲಿದೆ. ಮಲೆನಾಡು ಮತ್ತು ಕರಾವಳಿ ತೀರದ ಎರಡು–ಮೂರು ಕ್ಷೇತ್ರಗಳನ್ನು ಹೊರತುಪಡಿಸಿ ಉಳಿದೆಲ್ಲಾ ಕ್ಷೇತ್ರಗಳು ಅತೀ ತಾಪಮಾನ ಹೊಂದಿರುವ ಕ್ಷೇತ್ರಗಳಾಗಿವೆ. ತಾಪಮಾನದ ಭಯ ಆಯೋಗಕ್ಕೂ ಕಾಡಿದೆ, ಮತದಾರರ ಅನುಕೂಲಕ್ಕಾಗಿ ಮತದಾನ ಸಮಯವನ್ನು ಒಂದು ಗಂಟೆ ವಿಸ್ತರಿಸಿ ಅನುಕೂಲ ಮಾಡಿಕೊಡಬೇಕೆಂಬ ಚಿಂತನೆಯಲ್ಲಿದೆ, ಆದರೆ ಇನ್ನೂ ನಿರ್ಧಾರವಾಗಿಲ್ಲ. ಹಳೆ ಮೈಸೂರು ಭಾಗದ 14 ಲೋಕಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಏಪ್ರಿಲ್ 26 ರಂದು ಮತ ದಾನ ಮುಗಿಯುತ್ತಿದ್ದಂತೆ ರಾಜಕೀಯ ಪಕ್ಷಗಳ ಮುಖಂಡರು ತಮ್ಮ ಅಭ್ಯರ್ಥಿಗಳ ಗೆಲುವಿಗೆ ಇತ್ತ ಗಮನ ಹರಿಸಿದರು. ಈ ಎಲ್ಲಾ ಕ್ಷೇತ್ರಗಳಲ್ಲೂ ಬಿಜೆಪಿ ಮತ್ತು ಆಡಳಿತಾರೂಢ ಕಾಂಗ್ರೆಸ್ ನಡುವೆ ನೇರ ಹಣಾಹಣಿ ನಡೆದಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಮಾಡಿರುವ ಅಭಿವೃದ್ಧಿ ಹಾಗೂ ಹಿಂದುತ್ವ ಮುಂದಿಟ್ಟು ಕೊಂಡು ಬಿಜೆಪಿ ಬಿರುಸಿನ ಪ್ರಚಾರ ಮಾಡಿ ಮತದಾರರ ಓಲೈಕೆಗೆ ಮುಂದಾಗಿದ್ದರೆ, ರಾಜ್ಯದಲ್ಲಿನ ಆಡಳಿತಾರೂಢ ಕಾಂಗ್ರೆಸ್ ತಮ್ಮ ಐದು ಗ್ಯಾರಂಟಿಗಳನ್ನು ಬದಿಗಿಟ್ಟು ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಹಗರಣ ಹಾಗೂ ಪ್ರಧಾನಿ ● 9ನೇ ಪುಟಕ್ಕೆ

ಆರೋಗ್ಯ ಇಲಾಖೆ ವಸತಿ ಗೃಹದಲ್ಲಿ ಅದೂ ಇಲಾಖೆಯ ಸಿಬ್ಬಂದಿಯಿಂದಲೇ

ಹೆಣ್ಣು ಭ್ರೂಣ ಹತ್ಯೆ

● ಪಾಂಡವಪುರದಲ್ಲಿ ವ್ಯವಸ್ಥಿತವಾಗಿ ನಡೆಯುತ್ತಿದ್ದ ಘೋರ ಕೃತ್ಯ
● ಆಂಬುಲೆನ್ಸ್ ಚಾಲಕ, ಅವನ ಪತ್ನಿ, ಆಕೆಯ ತಾಯಿ/ಆಸ್ಪತ್ರೆ ನರ್ಸ್ ಬಂಧನ



ಅಶ್ವಿನಿ ಆನಂದ್

ಪಾಂಡವಪುರ, ಮೇ 6–ರೋಗಿಗಳ ಆರೋಗ್ಯ ಕಾಪಾಡುವ ಮಹತ್ವದ ಹೊಣೆ ಹೊತ್ತ ಆರೋಗ್ಯ ಇಲಾಖೆ ಸಿಬ್ಬಂದಿಯೇ ಹೆಣ್ಣು ಭ್ರೂಣ ಹತ್ಯೆ ನಡೆಸಿದ ಪ್ರಕರಣ ಪಾಂಡವಪುರದ ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ ಹಿಂಭಾಗದಲ್ಲಿರುವ ಆರೋಗ್ಯ ಇಲಾಖೆ ವಸತಿ ಗೃಹದಲ್ಲಿ ನಡೆದಿದೆ. ಈ ಸಂಬಂಧ ಇಲಾಖೆಯ ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ.

ವಿವರ: ಇಲ್ಲಿನ ಸರ್ಕಾರಿ ಆಸ್ಪತ್ರೆಯ ಆಂಬುಲೆನ್ಸ್ ಚಾಲಕ ಆನಂದ್, ಆತನ ಪತ್ನಿ, ಆಸ್ಪತ್ರೆಯ ಡಿ ಗ್ರೂಪ್ ನೌಕರಳಾದ ಅಶ್ವಿನಿ, ಆಕೆಯ ತಾಯಿ ಶಶಿಕಲಾ ಮತ್ತು ಆಸ್ಪತ್ರೆಯ ನರ್ಸ್ ಗಿರಿಜಾಂಬ ಬಂಧಿತರಾಗಿದ್ದು, ಇಲಾಖೆಯಿಂದ ಆನಂದ್‌ಗೆ ನೀಡಲಾಗಿದ್ದ ವಸತಿ ಗೃಹದಲ್ಲೇ ಮೈಸೂರು ಮೂಲದ ಗರ್ಭಿಣಿಯೋರ್ವರಿಗೆ ಗರ್ಭಪಾತ ಮಾಡುತ್ತಿದ್ದ ವೇಳೆ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಪಾಂಡವಪುರ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಉಮೇಶ್ ನೇತೃತ್ವದ ಪೊಲೀಸರು ಈ ನಾಲ್ವರನ್ನೂ ಬಂಧಿಸಿದ್ದಾರೆ. ಆನಂದ್ ವಾಸವಿದ್ದ ವಸತಿ ಗೃಹದಲ್ಲಿ ಭ್ರೂಣ ಹತ್ಯೆ ನಡೆಯುತ್ತಿದೆ ಎಂಬ ಗುಸುಗುಸು ಹಲ ವಾರು ತಿಂಗಳುಗಳಿಂದ ಕೇಳಿ ಬಂದಿತ್ತು. ಭಾನುವಾರ ರಾತ್ರಿ 11.30ರ ಸುಮಾರಿನಲ್ಲಿ ಸಬ್ ಇನ್ಸ್‌ಪೆಕ್ಟರ್ ಅವರಿಗೆ ಕರೆ ಮಾಡಿದ ಅನಾಮಧೇಯ ವ್ಯಕ್ತಿ ಮಾಹಿತಿ ನೀಡಿದ ಮೇರೆಗೆ ಅವರು ತಮ್ಮ ಸಿಬ್ಬಂದಿಯೊಂದಿಗೆ ಆನಂದನ ವಸತಿ ಗೃಹದ ಮೇಲೆ ರಾತ್ರಿ 12ಗಂಟೆ ಸುಮಾರಿಗೆ ದಾಳಿ ನಡೆಸಿದಾಗ ಮೈಸೂರು ಮೂಲದ ಗರ್ಭಿಣಿಗೆ ನರ್ಸ್ ಗಿರಿಜಾಂಬ ಅವರು ಗರ್ಭಪಾತ ಮಾಡು ತ್ತಿದ್ದದ್ದು ಬೆಳಕಿಗೆ ಬಂದಿದೆ. ತಕ್ಷಣವೇ ಅವರು ನಾಲ್ವರನ್ನು ಬಂಧಿಸಿದ್ದಲ್ಲದೆ ತಾಲೂಕು ಆರೋಗ್ಯಾಧಿಕಾರಿಗಳಿಗೆ ಪರಿಸ್ಥಿತಿಯ ಬಗ್ಗೆ ಮಾಹಿತಿ ನೀಡಿ ಬಾಗಶಃ ಗರ್ಭಪಾತವಾಗಿದ್ದ ಮಹಿಳೆಯನ್ನು ತಕ್ಷಣವೇ ಸರ್ಕಾರಿ ಆಸ್ಪತ್ರೆಗೆ ರವಾನಿಸಿದ್ದಾರೆ. ಮಹಿಳೆಗೆ ಆಸ್ಪತ್ರೆಯಲ್ಲಿ ಆರೋಗ್ಯಾಧಿಕಾರಿ ನೇತೃತ್ವದ ತಂಡ ಗರ್ಭಪಾತ ಮಾಡುವ ಮೂಲಕ ಆಕೆಯ ಪ್ರಾಣ ಉಳಿಸಿದ್ದಾರೆ. ● 9ನೇ ಪುಟಕ್ಕೆ



ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ್, ಇನ್ನಿತರ ಅಧಿಕಾರಿಗಳು ಪರಿಶೀಲನೆ ನಡೆಸಿದರು.

ಅಬ್ದುಲ್ ಕಲಾಂ ವರ್ಲ್ಡ್ ರೆಕಾರ್ಡ್‌ಗೆ ಎ.ಚಿರಸ್ವಿ ಪ್ರವೇಶ

ಮೈಸೂರು, ಮೇ 6– ಮೈಸೂರಿನ ಕುವೆಂಪುನಗರದ ಪ್ರಮತಿ ಹಿಲ್ ವ್ಯೂ ಅಕಾಡೆಮಿಯ 1ನೇ ತರಗತಿ ವಿದ್ಯಾರ್ಥಿ ಚಿರಸ್ವಿ ಬಾಲಸುಬ್ರಮಣಿಯನ್ ಅವರ ಗಮನಾರ್ಹವಾದ ಉಭಯಕುಶಲೋಪರಿ ಬರೆಯುವ ಕೌಶಲ್ಯದಿಂದ (Ambidextrous writing skills) ಕಲಾಮ್ಸ್ ವರ್ಲ್ಡ್ ರೆಕಾರ್ಡ್ಸ್‌ಗೆ ಪ್ರವೇಶ ಪಡೆದಿದ್ದಾರೆ.



ಜನವರಿ 24, 2018ರಂದು ಜನಿಸಿದ ಚಿರಸ್ವಿ ಅವರು 18.4.2024ರಂದು 100 Ambi dextrous English words 14 ನಿಮಿಷದಲ್ಲಿ ಮತ್ತು 6 ವರ್ಷ 3 ತಿಂಗಳು ವಯಸ್ಸಿನಲ್ಲಿ 15 ನಿಮಿಷದಲ್ಲಿ ಬರೆಯುವ ಮೂಲಕ ನೂತನ ವರ್ಲ್ಡ್ ರೆಕಾರ್ಡ್ ಸ್ಥಾಪಿಸಿದ್ದರು. ಈಕೆ ದೇವರಾಜ ಮೊಹಲ್ಲಾ ನಿವಾಸಿ ಎ.ವಿ. ಬಾಲಸುಬ್ರಮಣಿಯನ್ ಮತ್ತು ಕೆ.ಆರ್.ಕವಿತಾ ದಂಪತಿ ಪುತ್ರಿ.

ಅವಳು, ಎ ಟು ಜಡ್ ಇಂಗ್ಲಿಷ್ ದಪ್ಪ ಅಕ್ಷರ (1 ನಿಮಿಷ 3 ಸೆಕೆಂಡ್ಸ್), ಇಂಗ್ಲಿಷ್ ಅಲ್ಫಾಬೆಟ್ ಎ ಟು ಜಡ್ ಸಣ್ಣ ಅಕ್ಷರ (1 ನಿಮಿಷ), ಅಲ್ಫಾಬೆಟ್ ಇಂಡಿಯನ್ ರೀಜನಲ್ ಲಾಂಗ್ವೇಜ್ ಕನ್ನಡ (1 ನಿಮಿಷ), 50 ರಿಂದ 1 ರವರೆಗೆ ರಿವರ್ಸ್ ಆರ್ಡರ್ ನಂಬರ್ (1 ನಿಮಿಷ 26 ಸೆಕೆಂಡ್ಸ್) ಬರೆಯುತ್ತಾರೆ. ಅಲ್ಲದೆ ಹಟ್, ಬರ್ಡ್, ಲೋಟಸ್ ರೇಖಾಚಿತ್ರಗಳನ್ನು (36 ಸೆಕೆಂಡ್) ಏಕಕಾಲದಲ್ಲಿ ಎರಡು ಕೈಗಳಿಂದ ಬರೆಯುತ್ತಾಳೆ. ಅಲ್ಲದೆ ಕನ್ನಡ ಪದಗಳನ್ನೂ ಬರೆಯುತ್ತಾಳೆ.

ರೈಲ್ವೆ ಕಾರ್ಯಾಗಾರದಿಂದ ಸಂಸದ ಶ್ರೀನಿವಾಸ ಪ್ರಸಾದ್‌ರಿಗೆ ಶ್ರದ್ಧಾಂಜಲಿ



ಮೈಸೂರು, ಮೇ 6–ವಿ.ಶ್ರೀನಿವಾಸ್ ಪ್ರಸಾದ್ ಅಭಿಮಾನಿ ಬಳಗ, ಮೈಸೂರು ರೈಲ್ವೆ ಕಾರ್ಯಾಗಾರದ ಸಂಯುಕ್ತಾಶ್ರಯದಲ್ಲಿ ಸೌತ್ ವೆಸ್ಟರ್ನ್ ಕೇಂದ್ರೀಯ ರೈಲ್ವೆ ಕಾರ್ಯಾಗಾರದ ಆವರಣದಲ್ಲಿ ವಿ.ಶ್ರೀನಿವಾಸ್ ಪ್ರಸಾದ್‌ರಿಗೆ ಶ್ರದ್ಧಾಂಜಲಿ ಸಭೆ ಆಯೋಜಿಸಲಾಗಿತ್ತು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಶ್ರೀನಿವಾಸ ಪ್ರಸಾದ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಈ ವೇಳೆ ಶ್ರೀನಿವಾಸ್ ಪ್ರಸಾದ್ ಅಭಿಮಾನಿಗಳ ಬಳಗದ ಸಂಸ್ಥಾಪಕ ಅಧ್ಯಕ್ಷ ಎಂ.ರಾಜ್‌ಕುಮಾರ್, ಟ್ರೇಡ್ ಯೂನಿಯನ್ ಅಧ್ಯಕ್ಷ ಮಂಜುನಾಥ್, ಕಾರ್ಯದರ್ಶಿ ಯತಿರಾಜ್, ಎಸ್ಸಿ ಎಸ್ಟಿ ಅಸೋಸಿಯೇಷನ್ ಅಧ್ಯಕ್ಷ ಚಂದ್ರಶೇಖರ್, ಕಾರ್ಯದರ್ಶಿ ಮಧುಸೂದನ್, ಎನ್‌ಆರ್‌ಎಂಎಸ್ ಅಧ್ಯಕ್ಷ ನಂದಕುಮಾರ್, ಕಾರ್ಯದರ್ಶಿ ಶಿವಕುಮಾರ್, ಎಸ್‌ಡಬ್ಲ್ಯೂಆರ್‌ಎಸ್ ಅಧ್ಯಕ್ಷ ತ್ರಿಮೂರ್ತಿ, ಕಾರ್ಯದರ್ಶಿ ರಾಮಕೃಷ್ಣ, ಮಹಾಜನ್, ರಾಘವೇಂದ್ರ ಮತ್ತಿತರರು ಉಪಸ್ಥಿತರಿದ್ದರು.

ಬಳಿಕ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಶ್ರೀನಿವಾಸ ಪ್ರಸಾದ್ ಅವರು ಸಿದ್ಧಾಂತದಲ್ಲಿ ಸದಾ ಬದ್ಧರಾಗಿದ್ದರು. ಕಾರಣಾಂತರಗಳಿಂದ ಒಂದು ಪಕ್ಷವನ್ನು ತೊರೆದು ಮತ್ತೊಂದು ಪಕ್ಷವನ್ನು ಸೇರಿದರೂ ಸಾಮಾಜಿಕ ಬದ್ಧತೆಗಾಗಿ ನನ್ನ ಕೊನೆಯುಸಿರಿನ ತನಕವೂ ಬದುಕುತ್ತೇನೆ ಹೊರತು ತನ್ನ ಸ್ವಾಭಿಮಾನ ಮತ್ತು ಸಾಮಾಜಿಕ ಬದ್ಧತೆ, ಸಿದ್ಧಾಂತದಲ್ಲಿ ನಾನೆಂದು ರಾಜಿಯಾಗುವುದಿಲ್ಲ ಎಂದು ತಿಳಿಸಿದ್ದರು.

> ಕೇಂದ್ರ, ರಾಜ್ಯ ಸಚಿವ ಸ್ಥಾನವನ್ನು ಅಲಂಕರಿಸಿದ್ದ ಸಂಸದ ವಿ.ಶ್ರೀನಿವಾಸಪ್ರಸಾದ್ ಅವರು ಹಣ, ಆಸ್ತಿ ಐಷಾರಾಮಿ ಬದುಕಿಗೆ ಆಸಕ್ತಿ ತೋರದೆ ತಮ್ಮ ಸರಳತೆ, ಸಜ್ಜನಿಕೆಯಿಂದಲೇ ಎಲ್ಲರಿಗೂ ಮಾದರಿ ಮತ್ತು ಆದರ್ಶವಾಗಿದ್ದರು. ಅವರು ಬುದ್ಧ, ಬಸವ ಅಂಬೇಡ್ಕರ್ ತತ್ವ–ಆದರ್ಶಗಳಲ್ಲಿ ನಂಬಿಕೆಯಿಟ್ಟು ಬೌದ್ಧ ಚಿಂತನೆಗಳನ್ನು ಅಳವಡಿಸಿಕೊಂಡು ರಾಜ್ಯದ ಅಭಿವೃದ್ಧಿಗೆ ಶ್ರಮಿಸಿದ್ದರು. –ಎಂ.ಕೆ.ಸೋಮಶೇಖರ್

ಅದೇ ರೀತಿ ನಡೆದುಕೊಂಡಂತಹ ಧೀಮಂತ ವ್ಯಕ್ತಿತ್ವ ಪ್ರಸಾದ್ ಅವರದು. ಎಸ್ಸಿ, ಎಸ್ಟಿ ಮೀಸಲಾತಿಯಿಂದ ಆಯ್ಕೆಯಾಗಿ ಬರುತ್ತಿದ್ದ ಅವರು ಸರ್ವಹಿತ ಕಾಯುತ್ತಿದ್ದದ್ದು ನಿಜಕ್ಕೂ ಇತರರಿಗೆ ಮಾದರಿಯಾಗಿತ್ತು. ಅವರ ರಾಜಕೀಯ ಜೀವನದಲ್ಲಿ ಎಂದೂ ಹಣದ ಹಿಂದೆ ಬೀಳದೆ ಶುದ್ಧಹಸ್ತರಾಗಿದ್ದವರು. ಸಂವಿಧಾನದ ವಿಷಯದಲ್ಲಿ, ಅಂಬೇಡ್ಕರ್ ಆಶಯಕ್ಕೆ ಧಕ್ಕೆ ಬಂದಾಗ ನೇರವಾಗಿ ಅದನ್ನು ಖಂಡಿಸಿ ಹೋರಾಟ ಮಾಡುತ್ತಿದ್ದರು. ವಿದ್ಯಾರ್ಥಿದೆಸೆಯಿಂದಲೇ ಪ್ರಾರಂಭವಾದ ಅವರ ಹೋರಾಟ ಹಲವಾರು ಸೋಲು–ಗೆಲುವುಗಳನ್ನು ಕಂಡರೂ ಜಗ್ಗದೆ ದಲಿತ ದಮನಿತರ ಗಟ್ಟಿ ಧ್ವನಿಯಾಗಿ ಕೆಲಸ ಮಾಡಿದ್ದರು. ಅವರ ಆದರ್ಶಗಳನ್ನು ನಾವೆಲ್ಲರೂ ನೆನೆಯೋಣ, ಅನುಸರಿಸೋಣ ಎಂದು ತಿಳಿಸಿದರು.

ಗ್ರಾಹಕರ ಸಮಸ್ಯೆಗಳ ಪರಿಹಾರದ ಬಗ್ಗೆ ಉಪನ್ಯಾಸ



ಮೈಸೂರು ಮಹಾರಾಜ ಕಾಲೇಜಿನ ಕುಟುಂಬ ಸಂಪನ್ಮೂಲ ನಿರ್ವಹಣೆ ವಿಭಾಗವು ಸೋಮವಾರ ಕಾಲೇಜಿನ ಜೂನಿಯರ್ ಬಿಎ ಹಾಲ್‌ನಲ್ಲಿ ಆಯೋಜಿಸಿದ್ದ ಗ್ರಾಹಕರ ಸಮಸ್ಯೆಗಳ ಪರಿಹಾರ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷೆ ಎ.ಕೆ.ನವೀನಕುಮಾರಿ ಮಾತನಾಡಿದರು.

ಮೈಸೂರು,ಮೇ 6(ಜಿಎ)–ಗ್ರಾಹಕರು ಎಂದರೆ ಖರೀದಿದಾರರು ಮಾತ್ರವಲ್ಲ. ಹುಟ್ಟಿನಿಂದಲೂ ಪ್ರತಿಯೊಬ್ಬರೂ ಗ್ರಾಹಕರೆ ಎಂದು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷೆ ಎ.ಕೆ.ನವೀನಕುಮಾರಿ ತಿಳಿಸಿದರು.

ಮೈಸೂರು ಮಹಾರಾಜ ಕಾಲೇಜಿನ ಕುಟುಂಬ ಸಂಪನ್ಮೂಲ ನಿರ್ವಹಣೆ ವಿಭಾಗವು ಕಾಲೇಜಿನ ಜೂನಿಯರ್ ಬಿಎ ಹಾಲ್‌ನಲ್ಲಿ ಆಯೋಜಿಸಿದ್ದ ಗ್ರಾಹಕರ ಸಮಸ್ಯೆಗಳ ಪರಿಹಾರ ವಿಶೇಷ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ತಾಯಿಯ ಗರ್ಭದಲ್ಲಿರುವಾಗಲೂ ಗ್ರಾಹಕರಾಗಿಯೇ ಇರುತ್ತಾರೆ. ಮಗುವಿನ ಲಿಂಗವನ್ನು ಹೊರತುಪಡಿಸಿ, ಮಗುವಿನ ಬೆಳವಣಿಗೆಯಲ್ಲಿನ ವ್ಯತ್ಯಾಸವನ್ನು ತಿಳಿಸಬೇಕು. ಬೆಳವಣಿಗೆ ಕುಂಠಿತವಾಗಿದ್ದರೆ ಅದನ್ನು ಮೊದಲು ತಿಳಿಸಿ ಚಿಕಿತ್ಸೆ ಕೊಡಬೇಕು. ಇಲ್ಲವಾದರೆ ವೈದ್ಯರ ನಿರ್ಲಕ್ಷ್ಯದ ಆರೋಪ ಸಾಬೀತಾಗುತ್ತದೆ. ಗರ್ಭದಲ್ಲಿನ ಮಗುವಿನ ಬೆಳವಣಿಗೆ ಕುಂಠಿತವಾಗಿರುವುದನ್ನು ವೈದ್ಯರು ತಿಳಿಸದಿದ್ದರೆ ಕೂಡ ಗ್ರಾಹಕರ ವ್ಯಾಜ್ಯಗಳ ಪರಿಹಾರ ಪಡೆಯಬಹುದು ಎಂದರು.

> ಗ್ರಾಹಕರ ಅನುಕೂಲಕ್ಕೆ ಆಯೋಗ ರಚಿಸಲಾಗಿದೆ. ಪ್ರತಿ ಜಿಲ್ಲೆಯಲ್ಲೂ ಜಿಲ್ಲಾ ಆಯೋಗವಿದೆ. ಮೂರು ತಿಂಗಳಲ್ಲೆ ವ್ಯಾಜ್ಯ ಇತ್ಯರ್ಥವಾಗಬೇಕು ಎಂಬುದಿದೆ. ಆದರೆ ಅರ್ಜಿದಾರರಿಂದಲೇ ತಡವಾಗುತ್ತಿದೆ. ದೂರು ದಾಖಲಿಸಲು ನಿಮ್ಮ ಹೆಸರು ವಿಳಾಸ, ಆರೋಪಿತರ ಪೂರ್ಣ ವಿಳಾಸದ ಮೂಲಕ ದೂರು ಸಲ್ಲಿಸಬೇಕು. ವಕೀಲರ ಅಗತ್ಯ ಇರುವುದಿಲ್ಲ. –ಎ.ಕೆ.ನವೀನಕುಮಾರಿ.

50 ಲಕ್ಷ ಮೊತ್ತದ ಪ್ರಕರಣಕ್ಕೆ ಜಿಲ್ಲಾ ನ್ಯಾಯಾಲಯ, 2 ಕೋಟಿವರೆಗಿನ ವ್ಯಾಜ್ಯಕ್ಕೆ ರಾಜ್ಯ ಆಯೋಗ ಮತ್ತು ಅದಕ್ಕಿಂತ ಹೆಚ್ಚಿನ ವ್ಯಾಜ್ಯಕ್ಕೆ ರಾಷ್ಟ್ರೀಯ ಪರಿಹಾರ ಆಯೋಗದ ಮೊರೆ ಹೋಗಬಹುದು. ಸಾಮಾನ್ಯವಾಗಿ ಫ್ರಿಡ್ಜ್‌ಗಳು, ಗ್ಯಾಸ್ ಸಿಲಿಂಡರ್ ಸ್ಫೋಟವಾದಾಗಲೂ ಪರಿಹಾರ ಪಡೆಯಬಹುದು ಎಂದರು. ಮಹಾರಾಜ ಕಾಲೇಜಿನ ಪ್ರಾಂಶುಪಾಲ ಪ್ರೊ.ಎಚ್.ಸೋಮಶೇಖರಪ್ಪ ಅಧ್ಯಕ್ಷತೆ ವಹಿಸಿದ್ದರು. ಆಡಳಿತಾಧಿಕಾರಿ ಪ್ರೊ.ವಿ.ಷಣ್ಮುಗಂ, ಸಮಾಜಶಾಸ್ತ್ರ ಹಾಗೂ ಕುಟುಂಬ ಸಂಪನ್ಮೂಲ ನಿರ್ವಹಣೆ ವಿಭಾಗದ ಮುಖ್ಯಸ್ಥೆ ಪ್ರೊ.ಎಂ.ಮಂಜುಳಾ, ಅಧ್ಯಾಪಕರಾದ ಟಿ.ಸಿ.ಶೋಭಾ, ಸಂದೀಪರಾಜು ಇದ್ದರು.

ಭಾರಿ ಮಳೆಗೆ ಅಪಾರ ಬೆಳೆ ಹಾನಿ; ವಿಶೇಷ ಪ್ಯಾಕೇಜ್ ಘೋಷಣೆಗೆ ಆಗ್ರಹ

ಮೈಸೂರು–ನಂ.ಗೂಡು ರಸ್ತೆಯಲ್ಲಿ ಕಬ್ಬು ಬೆಳೆಗಾರರಿಂದ ಪ್ರತಿಭಟನೆ

ಮೈಸೂರು, ಮೇ.6(ಜಿಎ)–ಪ್ರಕೃತಿ ವಿಕೋಪದಿಂದ ಬೆಳೆ ನಷ್ಟಕ್ಕೆ ವಿಶೇಷ ಪ್ಯಾಕೇಜ್ ಘೋಷಿಸಬೇಕು, ತುರ್ತಾಗಿ ಬರ ಪರಿಹಾರ ನೀಡಿ, ಗೋಶಾಲೆ ಆರಂಭಿಸಬೇಕೆಂದು ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದಿಂದ ಎಪಿಎಂಸಿ ಜಂಕ್ಷನ್ ಬಳಿ ಮೈಸೂರು–ನಂಜನಗೂಡು ರಸ್ತೆ ತಡೆದು ಪ್ರತಿಭಟನೆ ನಡೆಸಲಾಯಿತು.



ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದಿಂದ ಬೆಳೆ ನಷ್ಟಕ್ಕೆ ವಿಶೇಷ ಪ್ಯಾಕೇಜ್ ಘೋಷಿಸಬೇಕೆಂದು ಆಗ್ರಹಿಸಿ, ಎಪಿಎಂಸಿ ಜಂಕ್ಷನ್ ಬಳಿ ಮೈಸೂರು–ನಂಜನಗೂಡು ರಸ್ತೆ ತಡೆದು ಪ್ರತಿಭಟನೆ ನಡೆಸಲಾಯಿತು.

ಸಂಘದ ಅಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮಾತನಾಡಿ, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ರೈತರು ತೀವ್ರ ಬರಗಾಲದಿಂದ ತತ್ತರಿಸಿದ್ದು ಗಾಯದ ಮೇಲೆ ಬರೆ ಎಳೆದಂತೆ ಕಳೆದ ಎರಡು ದಿನಗಳಿಂದ ಸುರಿದ ಮಳೆಯಿಂದಾಗಿ ಬಾಳೆ ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಎರಡು ಜಿಲ್ಲೆಗಳಿಂದ ಸುಮಾರು ಒಂದೂವರೆ ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬಾಳೆ ಬೆಳೆ ನಾಶವಾಗಿದೆ. ಇದಕ್ಕೆ ರಾಜ್ಯ ಸರ್ಕಾರ ವಿಶೇಷ ಪ್ಯಾಕೇಜ್ ಘೋಷಿಸಿ ಬಾಳೆ ಬೆಳೆಗಾರರ ರಕ್ಷಣೆಗೆ ಮುಂದಾಗಬೇಕು ಎಂದು ಒತ್ತಾಯಿಸಿದರು.

ಗ್ರಾಮೀಣ ಭಾಗದಲ್ಲಿ ತೀವ್ರ ಬರಗಾಲವಿದ್ದು, ಜಾನುವಾರುಗಳಿಗೆ ಮೇವಿಗೂ ತೊಂದರೆಯಾಗಿದೆ. ಮೇವು ಕೇಂದ್ರಗಳನ್ನು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ತೆರೆದು ಯಾವುದೆ ಷರತ್ತು ಇಲ್ಲದೆ ಮೇವು ಪೂರೈಸಬೇಕು. ಗೋ ಶಾಲೆಗಳನ್ನು ತಕ್ಷಣ ಆರಂಭಿಸಬೇಕು. ತೀವ್ರ ಬರಗಾಲದಿಂದ ಸಂತ್ರಸ್ತರಾಗಿರುವ ರೈತರಿಗೆ ಕಳೆದ ಸಾಲಿನ ಕಬ್ಬು ಬಾಕಿ ಪ್ರತಿ ಟನ್ನಿಗೆ 150 ರೂ.ನಂತೆ 25 ಕೋಟಿ ರೂಪಾಯಿ ಹಾಗೂ 2023–24ನೇ ಸಾಲಿನ ಕಬ್ಬು ಹೆಚ್ಚುವರಿ ಲಾಭಾಂಶ ಕೊಡಿಸಬೇಕು. ಕೃಷಿ ಪಂಪ್‌ಸೆಟ್‌ಗಳಿಗೆ ಬೇಸಿಗೆ ಕಾರಣ ಹಗಲು ವೇಳೆ ನಿರಂತರವಾಗಿ 10 ಗಂಟೆಗಳ 3 ಫೇಸ್ ವಿದ್ಯುತ್ ನೀಡಬೇಕು. ಸರ್ಕಾರಿ ಆದೇಶ ಪಾಲಿಸದೇ ವಿದ್ಯುತ್ ಇಲಾಖೆಗಳು ಮನಬಂದಂತೆ ಐದು ಗಂಟೆ ವಿದ್ಯುತ್ ಪೂರೈಸುತ್ತಿವೆ ಎಂದು ಕಿಡಿಕಾರಿದರು.

ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ಹಾಡ್ಯ ರವಿ, ಜಿಲ್ಲಾ ಉಪಾಧ್ಯಕ್ಷ ಮುದ್ದಹಳ್ಳಿ ಚಿಕ್ಕಸ್ವಾಮಿ, ಹರ್ಷಕುಮಾರ್, ಮಲಿಯೂರು ಮಹೇಂದ್ರಕುಮಾರ್, ಬಸವರಾಜಪ್ಪ, ದೇವನೂರು ನಾಗೇಂದ್ರಸ್ವಾಮಿ, ಅಂಬಳೆ ಮಹದೇವಸ್ವಾಮಿ, ಉಡಿಗಾಲ ಮಂಜುನಾಥ್, ಕಲ್ಲುಂದ ರಾಹುಲ್, ಜನ್ನೂರ್ ಶಾಂತರಾಜು, ನಂದಿಗುಂದಪುರ ಸೋಮಣ್ಣ, ಹಂಡುವಿನಹಳ್ಳಿ ಶಿವಣ್ಣ, ಕೆರೆಹುಂಡಿ ಶಿವಣ್ಣ, ಮುದ್ದಳ್ಳಿ ಕುಮಾರ್, ಎಚ್.ಗುಂಡ್ಲ ಶಂಕರ್, ಸುಕೇತ್, ರಾಜು ಭೋಗಯ್ಯನಹುಂಡಿ, ಮಹೇಶ್ ಇನ್ನಿತರರು ಭಾಗವಹಿಸಿದ್ದರು.

> ಬರಗಾಲದಿಂದ ನೊಂದಿರುವ ರೈತರಿಗೆ ಪ್ರತಿ ಲೀಟರ್ ಹಾಲಿಗೆ ಹೆಚ್ಚುವರಿ 10 ರೂ. ಘೋಷಣೆ ಮಾಡಬೇಕು. ಖಾಸಗಿ ಬ್ಯಾಂಕುಗಳು ರೈತರಿಗೆ ಕೃಷಿ ಮತ್ತು ಟ್ರ್ಯಾಕ್ಟರ್ ಸಾಲ ನೀಡಿ ತಾವೇ ಜಪ್ತಿ ಮಾಡಿ, ಹೊರ ರಾಜ್ಯಗಳ ನ್ಯಾಯಾಲಯದಿಂದ ನೋಟಿಸ್ ನೀಡಿ ಮಾನಸಿಕ ತೊಂದರೆ ನೀಡುತ್ತಿರುವುದನ್ನು ನಿಲ್ಲಿಸಬೇಕು. ಕಾವೇರಿ ಗ್ರಾಮೀಣ ಬ್ಯಾಂಕ್‌ಗಳಲ್ಲಿ ರೈತರಿಗೆ ಹೊಸ ಕೃಷಿ ಸಾಲ ನೀಡುತ್ತಿಲ್ಲ. ಹೀಗಾಗಿ ಈ ಬ್ಯಾಂಕಿನ ಆಡಳಿತ ಮಂಡಳಿ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. –ಹಳ್ಳಿಕೆರೆಹುಂಡಿ ಭಾಗ್ಯರಾಜ್

ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಸ್ಪರ್ಧೆ; ತಮ್ಮನ್ನು ಬೆಂಬಲಿಸುವಂತೆ ಕೆ.ಸಿ.ಪುಟ್ಟಸಿದ್ದಶೆಟ್ಟಿ ಮನವಿ

ಮೈಸೂರು, ಮೇ 6(ಜಿಎ)–ದಕ್ಷಿಣ ಶಿಕ್ಷಕರ ಕ್ಷೇತ್ರದ ಅಭ್ಯರ್ಥಿಯಾಗಿ ತಾವು ಸ್ಪರ್ಧಿಸಿದ್ದು ಮತದಾರರು ತಮಗೆ ಪ್ರಾಶಸ್ತ್ಯ ಮತ ನೀಡಿ ಚುನಾಯಿಸಬೇಕೆಂದು ರಾಜ್ಯ ಕಾಯಕ ಸಮಾಜಗಳ ಒಕ್ಕೂಟದ ರಾಜ್ಯಾಧ್ಯಕ್ಷರೂ ಆದ ಮಾಜಿ ಎಂಎಲ್‌ಸಿ ಕೆ.ಸಿ.ಪುಟ್ಟಸಿದ್ದಶೆಟ್ಟಿ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಭಾಗದಲ್ಲಿ ಕಳೆದ 24 ವರ್ಷಗಳಿಂದ ಆಯ್ಕೆಯಾಗಿರುವ ಮರಿತಿಬ್ಬೇಗೌಡರು ಶಿಕ್ಷಕರ ಸಮಸ್ಯೆ ಬಗೆಹರಿಸಲು ಗಮನ ಹರಿಸಲಿಲ್ಲ. ತಮ್ಮನ್ನು ಭೇಟಿ ಮಾಡಲು ಬಂದವರೊಡನೆ ಸೌಜನ್ಯದಿಂದ ನಡೆದುಕೊಂಡಿಲ್ಲ. ಹೀಗಾಗಿ ಇವರ ವೈಫಲ್ಯ ತಮಗೆ ನೆರವಾಗಲಿದೆ ಎಂದರು.

ಮರಿತಿಬ್ಬೇಗೌಡ ಅವರು ಗೆಲ್ಲಲು ನಾನು ಸಾಕಷ್ಟು ಸಹಕಾರ ನೀಡಿದ್ದು ಈ ಬಾರಿ ಅವರು ನನಗೆ ಅವಕಾಶ ನೀಡಬೇಕು. ಗುತ್ತಿಗೆ ಆಧಾರದ ಮೇಲೆ ಕಾಯಂಗೊಂಡಿರುವ ಅರೆ ಶಿಕ್ಷಕರಿಗೆ ವೇತನ ಬಡ್ತಿ ದೊರೆತಿಲ್ಲ. ಒಪಿಎಸ್ ಜಾರಿಗೊಂಡಿಲ್ಲ. ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇದೆ. ಶಿಕ್ಷಣ ಇಲಾಖೆ ಕಟ್ಟಡ ದುರಸ್ತಿಯಾಗಿಲ್ಲ. ಹೀಗಾಗಿ ಈ ರೀತಿಯ ಸಮಸ್ಯೆಗಳನ್ನು ಬಗೆಹರಿಸಲು ತಾವು ಶ್ರಮಿಸುವುದಾಗಿ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಕೆಂಪಶೆಟ್ಟಿ, ಶಿವರಾಜಪ್ಪ, ವಾಸುದೇವಮೂರ್ತಿ ಉಪಸ್ಥಿತರಿದ್ದರು.

ಪೂರ್ಣಯ್ಯ ನಾಲೆ ಅತಿಕ್ರಮ ತೆರವಿಗೆ ಒತ್ತಾಯ

ಮೈಸೂರು, ಮೇ 6(ಜಿಎ)–ಮೈಸೂರಿನ ಪೂರ್ಣಯ್ಯ ನಾಲೆ ಅತಿಕ್ರಮವನ್ನು ತೆರವುಗೊಳಿಸುವಂತೆ ರಾಷ್ಟ್ರಕ್ರಾಂತಿ ಫೌಂಡೇಷನ್ ಅಧ್ಯಕ್ಷ ಜಿ.ಎಂ.ಮಹದೇವ ಒತ್ತಾಯಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೋಗಾದಿ, ಬಸವನಹಳ್ಳಿ, ದಾಸನಕೊಪ್ಪಲು, ಮರಟಿಕ್ಯಾತನಹಳ್ಳಿ, ಹಿನಕಲ್, ಮಾದಹಳ್ಳಿ, ಹುಯಿಲಾಳು ಮೊದಲಾದ ಕಡೆಗಳಲ್ಲಿ ಪೂರ್ಣಯ್ಯ ನಾಲೆ ಅತಿಕ್ರಮವನ್ನು ತೆರವುಗೊಳಿಸಬೇಕೆಂದು ನ್ಯಾಯಾಲಯ ನೀಡಿರುವ ಆದೇಶವನ್ನು ಸಂಬಂಧಿಸಿದವರು ಪಾಲಿಸುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನಾಲೆ ಅತಿಕ್ರಮ ಮಾಡಿ ಕಟ್ಟಡ ನಿರ್ಮಿಸಿಕೊಂಡಿರುವವರಿಗೂ ತೆರವುಗೊಳಿಸುವಂತೆ ವಿವಿಧ ಹಂತಗಳಲ್ಲಿ ಆದೇಶಿಸಲಾಗಿದೆ. ಆದರೂ ಸಂಬಂಧಿಸಿದವರು ನ್ಯಾಯಾಲಯ ಆದೇಶ ಜಾರಿಗೆ ಕ್ರಮ ಕೈಗೊಂಡಿಲ್ಲ. ಹೀಗಾಗಿ ಹಿರಿಯ ಅಧಿಕಾರಿಗಳು ಈ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು. ಗೋಷ್ಠಿಯಲ್ಲಿ ಸಂಘದ ಸದಸ್ಯರಾದ ಡಿ.ಮಂಜುನಾಥ್, ಕುಮಾರಸ್ವಾಮಿ, ಕುಮಾರ್ ಇದ್ದರು.

ಆಶ್ರಮ ಶಾಲೆಗಳಲ್ಲಿ ಗುಣಮಟ್ಟ ಶಿಕ್ಷಣಕ್ಕೆ ಆಗ್ರಹ

ಮೈಸೂರು,ಮೇ 6(ಜಿಎ)–ರಾಜ್ಯದ ಆಶ್ರಮ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ದೊರಕದ ಕಾರಣ ಶಿಕ್ಷಣ ಮೊಟಕುಗೊಳಿಸಿ ಕೂಲಿ ಕೆಲಸಕ್ಕೆ ಹೋಗುವಂತಾಗಿದೆ ಎಂದು ಕರ್ನಾಟಕ ಅರಣ್ಯ ಮೂಲ ಬುಡಕಟ್ಟು ಸಮುದಾಯಗಳ ಒಕ್ಕೂಟದ ಜಿಲ್ಲಾ ಘಟಕದ ಕಾರ್ಯದರ್ಶಿ ಶೈಲೇಂದ್ರಕುಮಾರ್ ಆರೋಪಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ 116 ಆಶ್ರಮ ಶಾಲೆಗಳಿದ್ದು, ಇವುಗಳಲ್ಲಿ ಅರಣ್ಯ ಬುಡಕಟ್ಟು ಸಮುದಾಯಗಳಾದ ಜೇನುಕುರುಬ, ಬೆಟ್ಟ ಕುರುಬ, ಯರವ, ಸೋಲಿಗ, ಹಕ್ಕಿಪಿಕ್ಕಿ, ಡೋಂಗ್ರಿ ಗೆರಾಸಿಯಾ ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ. ಆದರೆ ಇವುಗಳಲ್ಲಿ ಗುಣಮಟ್ಟದ ಶಿಕ್ಷಣ ದೊರಕುತ್ತಿಲ್ಲದ ಕಾರಣ ಇವರಲ್ಲಿ ಅನೇಕರು ಶಿಕ್ಷಣ ಮೊಟಕುಗೊಳಿಸಿ ಕೂಲಿ ಕೆಲಸಕ್ಕೆ ಹೋಗುವಂತಾಗಿದೆ ಎಂದರು.

ಜಿಲ್ಲಾ ವ್ಯಾಪ್ತಿಯ ಎಚ್.ಡಿ.ಕೋಟೆಯಲ್ಲಿ 10 ಆಶ್ರಮಶಾಲೆ, ಹುಣಸೂರು ತಾಲೂಕಿನಲ್ಲಿ 6, ಪಿರಿಯಾಪಟ್ಟಣ ತಾಲೂಕಿನಲ್ಲಿ 3, ನಂಜನಗೂಡು ತಾಲೂಕಿನಲ್ಲಿ 10 ಆಶ್ರಮ ಶಾಲೆಗಳಿವೆ. ಪ್ರತಿ ಶೈಕ್ಷಣಿಕ ವರ್ಷದಲ್ಲಿಯೂ 2100ಕ್ಕೂ ಹೆಚ್ಚು ಮಕ್ಕಳು ದಾಖಲಾಗುತ್ತಿದ್ದಾರೆ. ಇದೇ ವೇಳೆ, 2005ರಿಂದ 2024ರ ನಡುವೆ ಈ ಸಮುದಾಯದ 3420 ಮಕ್ಕಳು ಕೂಲಿ ಕಾರ್ಮಿಕರಾಗಿದ್ದಾರೆ. ಇವರಿಗೆ ಶಿಕ್ಷಣ ನೀಡುವ ನಿಟ್ಟಿನಲ್ಲಿ ಸರ್ಕಾರ ವಿಶೇಷ ಯೋಜನೆ ರೂಪಿಸದಿರುವುದು, ಕನಿಷ್ಠ ದ್ವಿತೀಯ ಪಿಯುಸಿ ತನಕ ಉಚಿತ ಶಿಕ್ಷಣ ನೀಡುವ ಸೌಲಭ್ಯವನ್ನು ಈ ಆಶ್ರಮದ ಶಾಲೆಗಳಲ್ಲೇ ಒದಗಿಸದಿರುವುದು ಸಹಾ ಇದಕ್ಕೆ ಕಾರಣವಾಗಿದೆ. ಆದ್ದರಿಂದ ಡಿಸಿ, ಜಿಪಂ ಸಿಇಒ, ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾಧಿಕಾರಿಗಳು ಈ ಬಗ್ಗೆ ಗಮನಹರಿಸಬೇಕು ಎಂದು ಆಗ್ರಹಿಸಿದರು.

ಮೇ 9, ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು, ಮೇ 6– ಮೈಸೂರಿನ ಲಕ್ಷ್ಮೀಪುರಂನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಮೇ 9ರಂದು ಬೆಳಗ್ಗೆ 10 ರಿಂದ ರಾತ್ರಿ 8ರವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ದೂ.0821–4259259 ಸಂಪರ್ಕಿಸಬಹುದು.

ಸುಗಮ ಸಂಗೀತ ಕಾರ್ಯಾಗಾರದ ಅರ್ಥಪೂರ್ಣ ಸಮಾರೋಪ

ಮೈಸೂರು,ಮೇ 6–ಕರ್ನಾಟಕ ಸುಗಮ ಸಂಗೀತ ಪರಿಷತ್ ಮೈಸೂರು ಜಿಲ್ಲಾ ಘಟಕದ ವತಿಯಿಂದ 2 ದಿನಗಳ ಸುಗಮ ಸಂಗೀತ ಕಾರ್ಯಾಗಾರವನ್ನು ಮೈಸೂರಿನ ಹೂಟಗಳ್ಳಿಯಲ್ಲಿರುವ ಶ್ರೀ ಆನಂತೇಶ್ವರ ಭವನದಲ್ಲಿ ಆಯೋಜಿಸಲಾಗಿತ್ತು.



ಮೈಸೂರು ಹೂಟಗಳ್ಳಿಯಲ್ಲಿರುವ ಶ್ರೀ ಆನಂತೇಶ್ವರ ಭವನದಲ್ಲಿ ನಡೆದ ಸುಗಮ ಸಂಗೀತ ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ಗಾಯಕ ಪುತ್ತೂರು ನರಸಿಂಹ ನಾಯಕ್ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ಖ್ಯಾತ ಸುಗಮ ಸಂಗೀತ ಗಾಯಕ ಪುತ್ತೂರು ನರಸಿಂಹ ನಾಯಕ ಮಾತನಾಡಿ, ನಮ್ಮ ಸಂಗೀತದ ಜೀವನ ಹೇಗಿರುತ್ತದೆ ಎಂದರೆ ನಾವು ಪ್ರಾರಂಭ ಮಾಡಿದ ದಿನದಿಂದ ನಮ್ಮ ಅಂತ್ಯದವರೆಗೆ ಅದು ಸುಗಮ ಸಂಗೀತವಾಗಿರಲಿ, ಲಘು ಸಂಗೀತವಾಗಿರಲಿ ಗಾಯಕರು ಕಲಿಕೆ ಪ್ರಯತ್ನ ನಿರಂತರವಾಗಿರಬೇಕು ಎಂದು ಶಿಬಿರಾರ್ಥಿಗಳಿಗೆ ಕಿವಿಮಾತು ಹೇಳಿದರು. ನಂತರ 4 ಹಾಡುಗಳನ್ನು ಕಲಿಸಿ, ಸಮಾರೋಪ ಸಮಾರಂಭದಲ್ಲಿ ಗಣ್ಯರ ಎದುರು ಹಾಡಿಸಲಾಯಿತು.

ಪರಿಷತ್ತಿನ ಮೈಸೂರು ಘಟಕದ ಅಧ್ಯಕ್ಷ ಡಾ.ನಾಗರಾಜ ವಿ.ಭೈರಿ ಮಾತನಾಡಿ, ಶಿಬಿರಾರ್ಥಿಗಳು ಎರಡು ದಿನಗಳವರೆಗೆ ನಮ್ಮ ಜೊತೆಗಿದ್ದು ಗಾಯನವನ್ನು ಕಲಿತು ಗಾಯನ ಹಾಡಿ ನಮ್ಮೆಲ್ಲರನ್ನು ರಂಜಿಸಿ ಈ ಕಾರ್ಯಕ್ರಮವನ್ನು ಯಶಸ್ಸುಗೊಳಿಸಿರುವುದು ಸುಗಮ ಸಂಗೀತ ಪರಿಷತ್ತಿಗೆ ಹೆಮ್ಮೆಯ ವಿಷಯ. ಕಾರ್ಯಕ್ರಮದಲ್ಲಿ ಪುತ್ತೂರು ನರಸಿಂಹ ನಾಯಕರು ಬೆಳಗ್ಗೆಯಿಂದ ಸಂಜೆವರೆಗೆ ಶಿಬಿರಾರ್ಥಿಗಳಿಗೆ ಗಾಯನ ಅಭ್ಯಾಸ ಮಾಡಿಸಿ, ಅವರು ಕೂಡ ಶಿಬಿರಾರ್ಥಿಗಳಂತೆ ಭಾಗವಹಿಸಿ ನಮ್ಮ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸಹಕಾರ ನೀಡಿದ ಅವರಿಗೂ ತುಂಬು ಹೃದಯದ ಅಭಿನಂದನೆಗಳು ಎಂದರು.


ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಮಾತನಾಡಿ, ಪುತ್ತೂರು ನರಸಿಂಹ ನಾಯಕರು, ಹಾಗೆ ಯುವ ಪ್ರತಿಭೆ ಅಮೂಲ್ಯ ಕೂಡ ಗಾಯನ ಕ್ಷೇತ್ರದಲ್ಲಿ ಹೆಸರು ಮಾಡಿದ್ದಾರೆ. ಸದಾ ಒತ್ತಡದ ಜೀವನದಲ್ಲಿ ಸಂಗೀತ ಮುದ ನೀಡುತ್ತದೆ ಎಂದರು.

ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ರಾಜ ಮಹಾರಾಜರ ಕಾಲದಿಂದಲೂ ಕೂಡ ಕಲೆ,ಸಾಹಿತ್ಯ, ಸಂಗೀತ, ನೃತ್ಯ, ನಾಟಕ, ಕುಸ್ತಿ ಪ್ರತಿಯೊಂದಕ್ಕೂ ಕೂಡ ರಾಜರ ಕಾಲದಿಂದಲೂ ಪ್ರೋತ್ಸಾಹ ದೊರೆಯುತ್ತಿದೆ. ಅದಕ್ಕೆ ಮೈಸೂರಿಗೆ ಸಾಂಸ್ಕೃತಿಕ ರಾಜಧಾನಿ ಎಂಬ ಹೆಸರು ಬಂದಿತು ಎಂದು ಹೇಳಿದರು. ಇದೇ ವೇಳೆ ಗಾಯಕರಾದ ಪುತ್ತೂರು ನರಸಿಂಹ ನಾಯಕ್ ಹಾಗೂ ಸರಿಗಮಪ ಖ್ಯಾತಿಯ ಕುಮಾರಿ ಅಮೂಲ್ಯ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಆಕಾಶವಾಣಿ ಕಲಾವಿದ ಎ.ಡಿ.ಶ್ರೀನಿವಾಸ್, ಕವಿ ಜಯಪ್ಪ ಹೊನ್ನಾಳಿ, ಹನುಮಂತು, ಪರಿಷತ್ತಿನ ಮಂಡ್ಯ ಜಿಲ್ಲಾ ಘಟಕದ ಅಧ್ಯಕ್ಷರಾದ ಡೇವಿಡ್, ಪ್ರತಿಭಾಂಜಲಿ ಗಾಯಕಿಯರಾದ ರಶ್ಮಿ ಚಿಕ್ಕಮಗಳೂರು, ಇಂದ್ರಾಣಿ ಅನಂತ್‌ಕುಮಾರ್, ಮೈಸೂರು ಘಟಕದ ಪರಿಷತ್ತಿನ ಉಪಾಧ್ಯಕ್ಷರಾದ ನ.ಗಂಗಾಧರಪ್ಪ, ಕಾರ್ಯದರ್ಶಿ ಸಿರಿ ಬಾಲು, ಮಾಧ್ಯಮ ಸಲಹೆಗಾರರಾದ ಎನ್ ಬೆಟ್ಟೇಗೌಡ ಮತ್ತಿತರರು ಉಪಸ್ಥಿತರಿದ್ದರು

> ಸಂಗೀತ ಕೇಳುವವರಿಗೆ ಹೆಚ್ಚು ಹೆಚ್ಚು ಆನಂದ ಕೊಡುತ್ತದೆ. ನಾವು ಎಷ್ಟು ಹೆಚ್ಚು ಜನರಿಗೆ ಸಂಗೀತದ ಮೂಲಕ ಸಂತೋಷ ಕೊಡಲು ಸಾಧ್ಯವಾಗುತ್ತಿದೆ. ಅದು ಮಾತ್ರ ನಮ್ಮ ಸಾಧನೆಯಾಗಿ ಉಳಿಯುತ್ತದೆ. ಹೊರತು ನಾವು ಗೆದ್ದಿ ಎನ್ನುವ ಯಾವ ಕಲಾವಿದನಿಲ್ಲ. ಶಿಬಿರಾರ್ಥಿಗಳು ಕಲಿಯುವಾಗ ಸರಿಯಾಗಿ ಕಲಿತುಕೊಳ್ಳಿ. ನಮ್ಮಲ್ಲಿ ಕೀಳರಿಮೆ ಬೇಡ. ಇಲ್ಲಿ ಎಲ್ಲರೂ ಒಂದೇ. –ನರಸಿಂಹ ನಾಯಕ್


ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

7.05.2024 ಮಂಗಳವಾರ, ಮಳೆ ನಕ್ಷತ್ರ: ಭರಣಿ 27.04.2024ರಿಂದ 10.05.2024
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ,
ತಿಥಿ: ಚತುರ್ದಶಿ, ನಕ್ಷತ್ರ: ಅಶ್ವಿನಿ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಕರುನಾಡ ಕಬ್ಬಿಗರು, ಪ್ರಸ್ತುತಿ– ಡಾ. ವಿನೋದಾ, 6.40 ಪದಸಂಸ್ಕೃತಿ, ಪ್ರಸ್ತುತಿ– ಡಾ. ಆರ್. ರಾಮಕೃಷ್ಣ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ, 8.30 ಮತ ಹಾಕೋಣ ಬನ್ನಿ–ಮತದಾನ ಜಾಗೃತಿ ಕಾರ್ಯಕ್ರಮಗಳನ್ನು ಆಲಿಸಿ ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಂಡ ಕೇಳುಗರ ಅಭಿಪ್ರಾಯಗಳನ್ನು ಆಧರಿಸಿದ ಕಾರ್ಯಕ್ರಮ, ಪ್ರಸ್ತುತಿ–ಡಾ. ಮೈಸೂರು ಉಮೇಶ್ ಹಾಗೂ ಆರ್. ಸಹನ, 10.00 ಶಾಸ್ತ್ರೀಯ ಸಂಗೀತ–ಕಲಾವತಿ ಅವದೂತ್–ಹಾಡುಗಾರಿಕೆ, 11.00 ಮಿತ್ರ ಮಾಧುರ್ಯ

ಮಧ್ಯಾಹ್ನ: 12.30 ದೇವರನಾಮ–ಪಿ. ಎಸ್. ರಂಜನಿ, 1.00 ಚಿತ್ರಗೀತೆಗಳು, 1.20 ಭಾವಗೀತೆಗಳು, 4.30 ಕಥಾ ಕಾಲಕ್ಷೇಪ–ಶ್ರೀ ತಿರುಪತಿ ವೆಂಕಟೇಶ್ವರ ಮಹಿಮೆ, ಪ್ರಸ್ತುತಿ–ವಿದ್ವಾನ್ ಭದ್ರಗಿರಿ ಅಚ್ಯುತ ದಾಸರು, 6.50 ಕಿಸಾನ್ ವಾಣಿ 'ರೇಷ್ಮೆ ಐಸಿರಿ'–ರೇಷ್ಮೆ ಕೃಷಿ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ, ಹಿಪ್ಪುನೇರಳೆ ಬೇರಿನ ರೋಗಗಳ ನಿಯಂತ್ರಣ ಕ್ರಮಗಳು ಈ ಕುರಿತು ಮೈಸೂರಿನ ಕೇಂದ್ರೀಯ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ವಿಜ್ಞಾನಿ ಡಾ. ಜಿ.ಎಸ್.ಅರುಣ್ ಕುಮಾರ್ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಎನ್. ಕೇಶವಮೂರ್ತಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.10 ಗಮಕ ವ್ಯಾಖ್ಯಾನ, 10.30 ಸವಿನೆನಪು

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೊಜ್ಜು ನಿವಾರಣಾ ಚಿಕಿತ್ಸಾ ಮತ್ತು ಥೈರಾಯಿಡ್ ಗ್ರಂಥಿ ವ್ಯಾಧಿಗಳ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.
- **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ
- **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್:** 134ನೇ ವರ್ಷದ ಶ್ರೀ ರಾಮೋತ್ಸವ, ಬೆಳಗ್ಗೆ 8ಕ್ಕೆ ಅಭಿಷೇಕ, ಅರ್ಚನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಸಭಾದ ಆವರಣ, ಶ್ರೀರಾಮಪೇಟೆ.
- **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ :**ಆರ್ಟಿಸ್ಟ್ರಿ ಚಿನ್ನಾಭರಣ ಪ್ರದರ್ಶನ, ಸ್ಥಳ: ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಶೋ ರೂಂ, ಬಿ.ಎನ್. ರಸ್ತೆ, ಬೆಳಗ್ಗೆ 10 ರಿಂದ.
- **ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ, ಮೈಸೂರು ವಿವಿ ಹಿರಿಯ ವಿದ್ಯಾರ್ಥಿಗಳ ಸಂಘ :** ಭೀಮಚೇತನ ವಿ. ಶ್ರೀನಿವಾಸ ಪ್ರಸಾದ್ ಅವರಿಗೆ ನುಡಿ ನಮನ, ಭಾಗವಹಿಸುವವರು : ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್, ಮೈಸೂರು ವಿವಿ ಕುಲಸಚಿವ ಡಾ. ಬಸಪ್ಪ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕಸಾಪ ಮಾಜಿ ಅಧ್ಯಕ್ಷ ವೈ.ಡಿ. ರಾಜಣ್ಣ, ಯುವರಾಜ ಕಾಲೇಜು ಪ್ರಾಂಶುಪಾಲ ಪ್ರೊ. ಎಂ.ಕೆ. ಮಹೇಶ್, ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಮಹದೇಶ್, ಮೈಸೂರು ವಿವಿ ಸಂಜೆ ಕಾಲೇಜು ಪ್ರಾಂಶುಪಾಲರಾದ ಎಸ್. ಮಹದೇವಮೂರ್ತಿ, ಸೋಮಶೇಖರಪ್ಪ, ಪ್ರೊ. ಎಸ್. ಶಿವರಾಜಪ್ಪ, ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ. ಚಂದ್ರಶೇಖರ್, ಮಾಜಿ ಸಿಂಡಿಕೇಟ್ ಸದಸ್ಯ ಡಾ. ಇ.ಸಿ. ನಿಂಗರಾಜೇಗೌಡ, ಡಾ. ಹೆಚ್.ಪಿ. ಜ್ಯೋತಿ, ಪ್ರೊ. ಸಪ್ನ, ಸ್ಥಳ: ವಿವಿ ಸಂಜೆ ಕಾಲೇಜು ಹಿಂಭಾಗ, ಮಧ್ಯಾಹ್ನ 3ಕ್ಕೆ.
- **ರಂಗಾಯಣ :** ಚಿಣ್ಣರ ಮೇಳ–2024 ಸಮರಸವೇ ಜೀವನ ಸಮಾರೋಪ ಸಮಾರಂಭ, ಬೆಳಗ್ಗೆ 10 ರಿಂದ ಚಿಣ್ಣರ ಸಂತೆ, ಚಾಲನೆ : ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ, ಸಂಜೆ 4.30ಕ್ಕೆ ಸಮಾರೋಪ ಸಮಾರಂಭ, ಸಮಾರೋಪ ನುಡಿ : ರಂಗಕರ್ಮಿ ಶಶಾಂಕ್ ಸೊಹಗಲ್, ಮುಖ್ಯ ಅತಿಥಿಗಳು : ಚಾಮರಾಜನಗರ ದೀನಬಂಧು ಟ್ರಸ್ಟ್ ಸಂಸ್ಥಾಪಕ ಪ್ರೊ. ಜಯದೇವ, ಅಧ್ಯಕ್ಷತೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಾದ ಡಾ. ಕೆ. ಧರಣೀದೇವಿ ಮಾಲಗತ್ತಿ, ರಂಗಾಯಣ ನಿರ್ದೇಶಕರಾದ ಶ್ರೀಮತಿ ನಿರ್ಮಲ ಮಠಪತಿ, ಶಿಬಿರದ ಸಂಚಾಲಕರಾದ ಶ್ರೀಮತಿ ಗೀತಾ ಮೋಂಟಡ್ಕ, ಸ್ಥಳ: ವನರಂಗ, ಸಂಜೆ 4.30ಕ್ಕೆ.
- **ನೃತ್ಯವ್ಯಾಪಿನಿ ಕಲಾ ಸಂಸ್ಥೆ :** ಉದ್ಘಾಟನಾ ಸಮಾರಂಭ, ಸಾಂಸ್ಕೃತಿಕ ಕಾರ್ಯಕ್ರಮ, ಉದ್ಘಾಟನೆ : ವಿದ್ವಾನ್ ಡಾ. ರಾ.ಸಾ. ನಂದಕುಮಾರ್, ಮುಖ್ಯ ಅತಿಥಿಗಳು : ವಿದುಷಿ ರಾಧಿಕಾ ನಂದಕುಮಾರ್, ಸ್ಥಳ: ನಟನಾ ರಂಗಶಾಲೆ, ರಾಮಕೃಷ್ಣನಗರ, ಸಂಜೆ 5ಕ್ಕೆ.

ಮೈಸೂರು ಮಿತ್ರ

ಮೈಸೂರು ಹೃದಯ ಭಾಗದಲ್ಲಿ ಮತ್ತೆ ಫುಟ್‌ಪಾತ್ ವ್ಯಾಪಾರಿಗಳ ಕಾರುಬಾರು

● ಪಾಲಿಕೆ ಆಯುಕ್ತೆ ಡಾ.ಎನ್.ಎನ್.ಮಧು ನೇತೃತ್ವದಲ್ಲಿ ಇತ್ತೀಚೆಗೆ ಕಾರ್ಯಾಚರಣೆ ನಡೆಸಿ ತೆರವುಗೊಳಿಸಲಾಗಿತ್ತು ● ಈಗ ಮತ್ತೆ ರಾಜಾರೋಷವಾಗಿ ಅತಿಕ್ರಮಿಸಿ ವ್ಯಾಪಾರ-ವಹಿವಾಟು ● ಪಾಪ, ಪಾದಚಾರಿಗಳು ಅಂಜುತ್ತಾ, ಅಳುಕುತ್ತ ಓಡಾಡುವ ಪರಿಸ್ಥಿತಿ; ಫುಟ್‌ಪಾತ್ ವ್ಯಾಪಾರಿಗಳಿಗೆ ಕೆಲ ರಾಜಕಾರಣಿಗಳ ಅಭಯ!

ಮೈಸೂರು, ಮೇ 6(ಆರ್‌ಕೆ)- ಮೈಸೂರು ನಗರಪಾಲಿಕೆ ಆಯುಕ್ತೆ ಡಾ.ಎನ್.ಎನ್.ಮಧು ನೇತೃತ್ವದಲ್ಲಿ ಅಧಿಕಾರಿಗಳು ಫುಟ್‌ಪಾತ್ ಅತಿಕ್ರಮಣ, ವ್ಯಾಪಾರ-ವಹಿವಾಟು ತೆರವುಗೊಳಿಸಿದರೂ, ಮತ್ತೆ ಮೈಸೂರಿನ ಹೃದಯ ಭಾಗ ಕೆ.ಆರ್. ಸರ್ಕಲ್, ಚಿಕ್ಕಗಡಿಯಾರ ಆವರಣ ಮತ್ತು ಸಯ್ಯಾಜಿರಾವ್ ರಸ್ತೆಯಲ್ಲಿ ಮತ್ತೆ ಫುಟ್‌ಪಾತ್ ಒತ್ತುವರಿ, ವ್ಯಾಪಾರ-ವಹಿವಾಟು ರಾಜಾರೋಷವಾಗಿ ನಡೆದಿದೆ.

ಕಳೆದ ಒಂದು ತಿಂಗಳ ಹಿಂದಷ್ಟೇ ಮೈಸೂರು ಮಹಾನಗರ ಪಾಲಿಕೆ ನೂತನ ಆಯುಕ್ತರಾದ ಡಾ. ಎನ್.ಎನ್. ಮಧು, ಖುದ್ದು ಆಸಕ್ತಿ ವಹಿಸಿ ಕೆ.ಆರ್.ಸರ್ಕಲ್, ಸಯ್ಯಾಜಿರಾವ್ ರಸ್ತೆಯ ಇಕ್ಕೆಲದ ಫುಟ್‌ಪಾತ್ ಹಾಗೂ ದೇವರಾಜ ಮಾರುಕಟ್ಟೆ ಬಳಿಯ ಚಿಕ್ಕಗಡಿಯಾರದ ಆವರಣದಲ್ಲಿ ಕಂಡ ಕಂಡಲ್ಲಿ ಅಂಗಡಿ ಇರಿಸಿಕೊಂಡು ವ್ಯಾಪಾರ-ವಹಿವಾಟು ನಡೆಸುತ್ತಿದ್ದವರ ತೆರವುಗೊಳಿಸಿ ಪಾದಚಾರಿಗಳ ಸಂಚಾರಕ್ಕೆ ಅವಕಾಶ ಮಾಡಿಕೊಟ್ಟು ಪ್ರಶಂಸೆಗೆ ಪಾತ್ರರಾಗಿದ್ದರು. ಅಲ್ಲದೆ ಮತ್ತೆ ಒತ್ತುವರಿ ಮಾಡಿ, ಇಂತಹ ವಹಿವಾಟು ನಡೆಸುವವರ ವಿರುದ್ಧ ಪ್ರಕರಣ ದಾಖಲಿಸಲಾಗುವುದು ಎಂದು ಎಚ್ಚರಿಕೆ ನೀಡಿದ್ದ ಪಾಲಿಕೆ ಅಧಿಕಾರಿಗಳು, ನಿತ್ಯ ಪೆಟ್ರೋಲಿಂಗ್ ಮಾಡಿ ನಿಯಂತ್ರಣ ಮಾಡಿದ್ದರು.

ಚುನಾವಣಾ ಕರ್ತವ್ಯಕ್ಕೆ ನಿಯೋಜನೆಗೊಂಡಿದ್ದ ಪಾಲಿಕೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಲೋಕಸಭಾ ಸಾರ್ವತ್ರಿಕ ಚುನಾವಣಾ ಪ್ರಕ್ರಿಯೆಯಲ್ಲಿ ಮಗ್ನರಾಗಿದ್ದರು. ಇಂತಹ ಅವಕಾಶ ಬಳಸಿಕೊಂಡ ವ್ಯಾಪಾರಿಗಳು ಮತ್ತೆ ಫುಟ್‌ಪಾತ್ ಅತಿಕ್ರಮಿಸಿ, ವ್ಯಾಪಾರ-ವಹಿವಾಟು ನಡೆಸುತ್ತಿದ್ದಾರೆ. ಹಣ್ಣು-ತರಕಾರಿ, ಹೂ, ಬಟ್ಟೆ, ಚಪ್ಪಲಿ, ಗೃಹೋಪಯೋಗಿ ವಸ್ತುಗಳನ್ನು ಫುಟ್‌ಪಾತ್‌ನಲ್ಲಿಟ್ಟು ವ್ಯಾಪಾರ ಮಾಡುತ್ತಿದ್ದಾರೆ. ಪರಿಣಾಮ ಮಕ್ಕಾಜಿ ಚೌಕ, ಕೆ.ಆರ್.ಆಸ್ಪತ್ರೆಯಿಂದ ಕೆ.ಆರ್.ಸರ್ಕಲ್‌ವರೆಗೆ, ಕೆ.ಆರ್.ಸರ್ಕಲ್‌ನಿಂದ ಕಾವೇರಿ ಎಂಪೋರಿಯಂವರೆಗೆ ಸಯ್ಯಾಜಿರಾವ್ ರಸ್ತೆಯ ಇಕ್ಕೆಲಗಳ ಪಾದಚಾರಿ ರಸ್ತೆ, ದೇವರಾಜ ಮಾರುಕಟ್ಟೆ ದಕ್ಷಿಣ ಭಾಗದ ಆವರಣ ಹಾಗೂ ಮೈಸೂರು ಗ್ರಾಮಾಂತರ ಬಸ್ ನಿಲ್ದಾಣದ ಬಳಿ ಫುಟ್‌ಪಾತ್ ವ್ಯಾಪಾರ ಮತ್ತೆ ಮುನ್ನೆಲೆಗೆ ಬಂದಿದೆ.

ಅದರಿಂದಾಗಿ ಜನರು ಅನಿವಾರ್ಯವಾಗಿ ಫುಟ್‌ಪಾತ್ ಬಿಟ್ಟು ರಸ್ತೆಗಿಳಿದು ಓಡಾಡುತ್ತಿರುವುದರಿಂದ ಅಪಘಾತಗಳು ಸಂಭವಿಸುತ್ತಿವೆ. ಬಟ್ಟೆ, ಹಣ್ಣು, ಹೂ, ಆಟಿಕೆ ಸಾಮಗ್ರಿ, ಸೊಪ್ಪು, ತರಕಾರಿಗಳನ್ನು ಫುಟ್‌ಪಾತ್ ಮೇಲಿರಿಸಿಕೊಂಡು ವ್ಯಾಪಾರ ಮಾಡುತ್ತಿದ್ದು, ಇವರು ಕೆಲ ಜನಪ್ರತಿನಿಧಿಗಳ ಕೃಪೆಯಿಂದಾಗಿ ರಾಜಾರೋಷವಾಗಿ ಒಂದು ರೀತಿ ದಂಧೆ ನಡೆಸುತ್ತಿದ್ದರೆ, ಪಾದಚಾರಿಗಳು ಹಿಡಿಶಾಪ ಹಾಕಿಕೊಂಡು ಓಡಾಡುತ್ತಿದ್ದಾರೆ.

ಉಳಿದಂತೆ ಮಂಡಿ ಮೊಹಲ್ಲಾ, ಮಿಷನ್ ಆಸ್ಪತ್ರೆ ರಸ್ತೆ, ನ್ಯೂ ಸಯ್ಯಾಜಿರಾವ್ ರಸ್ತೆ, ಬಂಬೂ ಬಜಾರ್ ರಸ್ತೆ, ಮಕ್ಕಾಜಿ ಚೌಕ, ಪುರಭವನ ಆಜುಬಾಜು ಫುಟ್‌ಪಾತ್ ವ್ಯಾಪಾರ ಅವ್ಯಾಹತವಾಗಿ ನಡೆಯುತ್ತಿದೆ. ಅಲ್ಲದೇ, ಅಗ್ರಹಾರ, 101 ಗಣಪತಿ ಸರ್ಕಲ್, ಚಾಮುಂಡಿಪುರಂ, ನಜರ್‌ಬಾದ್ ಮುಖ್ಯ ರಸ್ತೆ, ಬಂಬೂ ಬಜಾರ್ ರಸ್ತೆ, ಚಾಮರಾಜ ಜೋಡಿ ರಸ್ತೆ, ಮಂಡಿ ಮೊಹಲ್ಲಾ, ಎನ್.ಆರ್. ಮೊಹಲ್ಲಾದ ಶಿವಾಜಿ ರಸ್ತೆ, ವಿ.ವಿ. ಮೊಹಲ್ಲಾದ ಟೆಂಪಲ್ ರಸ್ತೆ, ಗೋಕುಲಂ ಮುಖ್ಯರಸ್ತೆ, ಲಷ್ಕರ್ ಮೊಹಲ್ಲಾದ ಅಶೋಕ ರಸ್ತೆ, ಬಿ.ಎನ್.ರಸ್ತೆ ಸೇರಿದಂತೆ ಮೈಸೂರಿನ ಬಹುತೇಕ ಪ್ರಮುಖ ವಾಣಿಜ್ಯ ರಸ್ತೆ ಸರ್ಕಲ್‌ಗಳಲ್ಲಿ ಫುಟ್‌ಪಾತ್ ಒತ್ತುವರಿಯಾಗಿದೆ.

ಕುವೆಂಪುನಗರ ವಿಶ್ವಮಾನವ ಜೋಡಿ ರಸ್ತೆ, ರಾಮಕೃಷ್ಣನಗರ, ಟಿ.ಕೆ.ಲೇಔಟ್, ಜಯಲಕ್ಷ್ಮೀಪುರಂ, ವಿಜಯನಗರ 1, 2, 3ನೇ ಹಂತ, ಬೋಗಾದಿ, ಹಿನಕಲ್ ಸೇರಿದಂತೆ ನಗರದ ಬಹುತೇಕ ಕಡೆಗಳಲ್ಲಿ ಫುಟ್‌ಪಾತ್ ಅಂಗಡಿ, ಫಾಸ್ಟ್‌ಫುಡ್, ಗೋಬಿ, ಪಾನಿಪುರಿ ಅಂಗಡಿಗಳು ತಲೆ ಎತ್ತಿರುವುದರಿಂದ ಪಾದಚಾರಿಗಳು ಓಡಾಡಲು ಅಡಚಣೆಯಾಗಿದ್ದು, ಅವರು ಅನಿವಾರ್ಯವಾಗಿ ರಸ್ತೆಗಿಳಿಯಬೇಕಾಗಿದೆ.

ಗಾಯತ್ರಿ ಭವನದಿಂದ ಶೃಂಗಾರ ಹೋಟೆಲ್‌ವರೆಗೆ ನಂಜರಾಜ ಬಹದ್ದೂರ್ ಛತ್ರದ ಕಾಂಪೌಂಡ್ ಪಕ್ಕದಲ್ಲಿ ನಿತ್ಯ ಬೆಳಗ್ಗೆಯಿಂದ ರಾತ್ರಿವರೆಗೆ ವ್ಯಾಪಾರ ಏಜೆನ್ಸಿಯೊಂದರ ವಾಹನಗಳು ಡಿ. ಸುಬ್ಬಯ್ಯ ರಸ್ತೆಯಲ್ಲಿ ನಿಂತಿರುತ್ತವೆ. ಸಾರ್ವಜನಿಕರ ವಾಹನ ನಿಲುಗಡೆಗೆ ಸ್ಥಳ ಸಿಗುತ್ತಿಲ್ಲ. ಹಾಗೂ ನಂಜರಾಜ ಬಹದ್ದೂರ್ ಛತ್ರದ ಕಾರ್ನರ್‌ನಲ್ಲಿ ತೆಂಗಿನಕಾಯಿ ರಾಶಿ ಹಾಕಿ ಫುಟ್‌ಪಾತ್ ಆಕ್ರಮಿಸಿಕೊಂಡಿರುವುದರಿಂದ ಪಾದಚಾರಿಗಳು ಓಡಾಡಲು ತೀವ್ರ ತೊಂದರೆಯಾಗುತ್ತಿದ್ದು, ಈ ಬಗ್ಗೆ ಸಂಚಾರ ಪೊಲೀಸರು ಪಾಲಿಕೆಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ ಎಂದೂ ಸಾರ್ವಜನಿಕರು ಆರೋಪಿಸಿದ್ದಾರೆ.

> ❝ ಸಾರ್ವಜನಿಕರಿಗೆ ತೀವ್ರ ತೊಂದರೆಯಾಗುತ್ತಿದ್ದ ಕಾರಣ ಪಾಲಿಕೆಯಿಂದ ಫುಟ್‌ಪಾತ್ ಒತ್ತುವರಿ ತೆರವುಗೊಳಿಸಲಾಗಿತ್ತು. ಮತ್ತೆ ಅಂಗಡಿ ಹಾಕಿಕೊಳ್ಳಬಾರದೆಂದು ಸೂಚನೆ ನೀಡಿದ್ದೇವಾದರೂ ವ್ಯಾಪಾರಿಗಳು ಚಿಕ್ಕಗಡಿಯಾರ, ಸಯ್ಯಾಜಿರಾವ್ ರಸ್ತೆ, ಹಳೇ ಬ್ಯಾಂಕ್ ರಸ್ತೆ, ಕೆ.ಆರ್. ಸರ್ಕಲ್ ಫುಟ್‌ಪಾತ್‌ನಲ್ಲಿ ಅಂಗಡಿ ನಡೆಸುತ್ತಿರುವುದು ಗಮನಕ್ಕೆ ಬಂದಿದೆ. ಮತ್ತೆ ಕಾರ್ಯಾಚರಣೆ ನಡೆಸಿ ತೆರವುಗೊಳಿಸಲು ಆರೋಗ್ಯ ವಿಭಾಗದ ಅಧಿಕಾರಿಗಳು, ಪರಿಸರ ಇಂಜಿನಿಯರ್‌ಗಳಿಗೆ ತಿಳಿಸಿದ್ದೇವೆ. ನಾವೆಲ್ಲರೂ ಲೋಕಸಭಾ ಚುನಾವಣಾ ಕರ್ತವ್ಯದಲ್ಲಿ ಮಗ್ನರಾಗಿದ್ದರಿಂದ ಅತ್ತ ಗಮನಹರಿಸಲಾಗಿರಲಿಲ್ಲ.
> — ಡಾ.ಎನ್.ಎನ್.ಮಧು, ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ







ನಗೆಯು ಬರುತ್ತದೆ...!

ಇತ್ತೀಚೆಗೆ ಸಭೆ ನಡೆಸಿದ ಮೈಸೂರು ಜಿಲ್ಲಾಧಿಕಾರಿ ಡಾ.ರಾಜೇಂದ್ರ ಅವರು ಪ್ಲಾಸ್ಟಿಕ್ ಬಳಕೆ ನಿಯಂತ್ರಣಕ್ಕೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಪಾಲಿಕೆ ಅಧಿಕಾರಿಗಳಿಗೆ ಸೂಚಿಸಿದ್ದರು. ಮೈಸೂರಲ್ಲಿ ಪ್ಲಾಸ್ಟಿಕ್ ಅಟ್ಟಹಾಸ ಮೊದಲು ಹೇಗಿತ್ತೋ ಅದು ದುಪ್ಪಟ್ಟಾಗಿದೆ. ಅಧಿಕಾರಿಗಳು ತಪಾಸಣೆ, ದಾಳಿ 'ಶಾಸ್ತ್ರ' ಆಗಾಗ ಕೈಗೊಳ್ಳುತ್ತಿದ್ದಾರೆಯೇ ಹೊರತು ಪ್ಲಾಸ್ಟಿಕ್ ಮಾತ್ರ ನಿಯಂತ್ರಣಕ್ಕೆ ಬಂದಿಲ್ಲ.

ಫುಟ್‌ಪಾತ್ ಅತಿಕ್ರಮಿಸಿ ನಿತ್ಯ ಲಕ್ಷ ಲಕ್ಷ ವಹಿವಾಟು

ಇನ್ನು ರಾಜಮಾರ್ಗವೆಂದು ಮೈಸೂರು ಜಿಲ್ಲಾಡಳಿತವೇ ಹೆಮ್ಮೆಯಿಂದ ಕರೆದುಕೊಳ್ಳುವ ಸಯ್ಯಾಜಿರಾವ್ ರಸ್ತೆಯಲ್ಲಿ ಇಕ್ಕೆಲಗಳಲ್ಲಿ ನಿತ್ಯವೂ ಲಕ್ಷ ಲಕ್ಷ ವಹಿವಾಟು ನಡೆಸುವ ಆಟೋ ಕನ್ಸಲ್ಟೆಂಟ್ಸ್, ಟೈಯರ್ ಅಂಗಡಿಗಳು, ಹೋಟೆಲ್‌ಗಳನ್ನು ಪ್ರಶ್ನಿಸುವ ಧೈರ್ಯ ನಮ್ಮ ಅಧಿಕಾರಿ ವರ್ಗಕ್ಕೆ ಇಲ್ಲವೇನೋ ಎಂದು ಕಾಣುತ್ತಿದೆ. ಇದಕ್ಕೆ ಸಂಬಂಧಿಸಿದಂತೆ ದೂರು ನೀಡಿದರೆ ಒಬ್ಬರು ಮತ್ತೊಬ್ಬರ ಮೇಲೆ ಹೊಣೆಗಾರಿಕೆ ಹಸ್ತಾಂತರಿಸಿ ಅವಾಂತರ ಮಾಡುತ್ತಿದ್ದಾರೆ ಎಂದು ಸಾರ್ವಜನಿಕರೇ ವಿಷಾದ ವ್ಯಕ್ತಪಡಿಸಿದ್ದಾರೆ. ಮುಖ್ಯಮಂತ್ರಿಗಳ ತವರು ಮೈಸೂರು. ಇಂತಹ ನಗರದಲ್ಲೇ ಅವ್ಯವಸ್ಥೆ ತಾಂಡವವಾಡುತ್ತಿದೆ ಎಂದು ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ.

ಮೊನ್ನೆ ಬಾಳೆತೋಟದಲ್ಲಿ; ನಿನ್ನೆ ಫ್ಯಾಶನ್ ಫ್ರೂಟ್ ತೋಟದಲ್ಲಿ ಮತ್ತೊಂದು ಹುಲಿ ಸುರಕ್ಷಿತ ಸೆರೆ

ಮೈಸೂರು, ಮೇ 6(ಎಸ್‌ಬಿಡಿ)- ಹೆಚ್.ಡಿ.ಕೋಟೆ ತಾಲೂಕು ಮೇಟಿಕುಪ್ಪೆ-ಅಂತರಸಂತೆ ಅರಣ್ಯ ವಲಯ ವ್ಯಾಪ್ತಿಯ ಮಳಲಿ ಗ್ರಾಮದಲ್ಲಿ ಮತ್ತೊಂದು ಹುಲಿಯನ್ನು ಸೋಮವಾರ ಸೆರೆ ಹಿಡಿಯಲಾಗಿದೆ.

ಗ್ರಾಮದ ಸುಲೋಚನಾ ಎಂಬುವರ ಬಾಳೆತೋಟದಲ್ಲಿ ಅಡಗಿದ್ದ ಸುಮಾರು 8 ವರ್ಷದ ಗಂಡು ಹುಲಿಯನ್ನು ಶನಿವಾರ ಸುರಕ್ಷಿತವಾಗಿ ಸೆರೆ ಹಿಡಿಯಲಾಗಿತ್ತು. ಇದರ ಬೆನ್ನಲ್ಲೇ ಸುಬ್ರಹ್ಮಣ್ಯ ಎಂಬುವರ ಫ್ಯಾಶನ್ ಫ್ರೂಟ್ ತೋಟದಲ್ಲಿ ಸೇರಿಕೊಂಡಿದ್ದ ಮತ್ತೊಂದು 3 ವರ್ಷದ ಹೆಣ್ಣು ಹುಲಿಯನ್ನು ಅರಣ್ಯ ಇಲಾಖೆಯವರು ಸೋಮವಾರ ಸೆರೆ ಹಿಡಿದಿದ್ದಾರೆ.

ಫ್ಯಾಶನ್ ಫ್ರೂಟ್ ತೋಟದಲ್ಲಿ ಹುಲಿ ಇರುವುದನ್ನು ಖಚಿತಪಡಿಸಿಕೊಂಡ ಅಂತರಸಂತೆ ವಲಯ ಸಿಬ್ಬಂದಿ, ತಂಡಗಳಲ್ಲಿ ತೋಟದ ಸುತ್ತಲೂ ಕಾದಿದ್ದರು. ನಂತರ ಮೇಲಾಧಿಕಾರಿಗಳಿಗೆ ವರದಿ ನೀಡಿ, ಮಹೇಂದ್ರ ಹಾಗೂ ಭೀಮ ಆನೆಗಳೊಂದಿಗೆ ಕಾರ್ಯಾಚರಣೆ ಆರಂಭಿಸಿದರು. ಹುಲಿಯನ್ನು ಪತ್ತೆ ಮಾಡಿ, ಪಶುವೈದ್ಯರು ಅರವಳಿಕೆ ನೀಡಿದ ಬಳಿಕ ಅದನ್ನು ಸುರಕ್ಷಿತವಾಗಿ ಸೆರೆ ಹಿಡಿಯಲಾಯಿತು. ಹುಲಿ ಆರೋಗ್ಯವಾಗಿರುವುದನ್ನು ಖಚಿತಪಡಿಸಿಕೊಂಡ ಬಳಿಕ ಅದನ್ನು ಹುಲಿ ಸಂರಕ್ಷಿತ ಪ್ರದೇಶದಲ್ಲಿ ಬಿಡುಗಡೆ ಮಾಡಲಾಯಿತು. ನಾಗರಹೊಳೆ ಹುಲಿಸಂರಕ್ಷಿತ ಪ್ರದೇಶ ಹುಣಸೂರು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ನಿರ್ದೇಶಕ ಹರ್ಷಕುಮಾರ್ ಚಿಕ್ಕನರಗುಂದ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಮೇಟಿಕುಪ್ಪೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಕೆ.ಎನ್.ರಂಗಸ್ವಾಮಿ, ಹೆಚ್.ಡಿ.ಕೋಟೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಅಭಿಷೇಕ್, ನಾಗರಹೊಳೆ ಆನೆ ಪ್ರಭಾರಕ ಹಾಗೂ ಪಶುವೈದ್ಯ ಡಾ.ಹೆಚ್.ರಮೇಶ್, ವಲಯ ಅರಣ್ಯಾಧಿಕಾರಿಗಳಾದ ಭರತ್ ತಳವಾರ್, ಎಸ್.ಡಿ. ಮಧು, ಕೆ.ಎನ್.ಹರ್ಷಿತ್, ಪೂಜಾ ಯಾಲಿಗಾರ್, ದುಬಾರೆ ಉಪವಲಯ ಅರಣ್ಯಾಧಿಕಾರ ರಂಜನ್, ಅಂತರಸಂತೆ ಠಾಣೆ ಪಿಎಸ್‌ಐ ಹಾಗೂ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.



ಮುಂದಿನ 5 ದಿನ ರಾಜ್ಯದ ಹಲವೆಡೆ ಮಳೆ ಸಾಧ್ಯತೆ

ಬೆಂಗಳೂರು: ಮುಂದಿನ 5 ದಿನ ರಾಜ್ಯದ ಹಲವು ಭಾಗಗಳಲ್ಲಿ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಬೆಂಗಳೂರಿನಲ್ಲಿ ಸದ್ಯ ಈಗ ಒಂದು ದಿನ ಭಾರಿ ಬಿಸಿಲು ಇದ್ದರೆ ಮತ್ತೊಂದು ದಿನ ಮಳೆಯಾಗುತ್ತಿದೆ. ರಾಜ್ಯದ ಹಲವು ಜಿಲ್ಲೆಗಳಲ್ಲಿ ಇದೇ ಪರಿಸ್ಥಿತಿ ಮುಂದುವರಿದಿದೆ. ಮೇ 6 ರಿಂದ ಮೇ 10 ರವರೆಗೆ ರಾಜ್ಯದಲ್ಲಿ ಉತ್ತಮ ಮಳೆಯಾಗಲಿದೆ.

ಮೇ 6ರಂದು ಕರಾವಳಿ ಭಾಗದಲ್ಲಿ ಗುಡುಗು ಮಿಂಚಿನೊಂದಿಗೆ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಉತ್ತರ ಒಳನಾಡಿನ ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗಲಿದ್ದರೆ, ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಗುಡುಗು ಮಿಂಚಿನೊಂದಿಗೆ ಮಳೆಯಾಗಲಿದೆ. ಅದರಲ್ಲೂ ಹಳೇ ಮೈಸೂರು ಭಾಗದಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದೆ.

ಪ್ರಜ್ವಲ್ ರೇವಣ್ಣ ಬಗ್ಗೆ ಸಹನೆ ಬೇಕಿಲ್ಲ: ಪ್ರಧಾನಿ ಮೋದಿ

ನವದೆಹಲಿ: ಪ್ರಜ್ವಲ್ ರೇವಣ್ಣ ಅವರಂಥವರ ವಿಚಾರದಲ್ಲಿ ಒಂದಿನಿತೂ ಸಹನೆ ತೋರಬೇಕಾದ ಅಗತ್ಯ ಇಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಪ್ರಜ್ವಲ್ ಅವರಿಗೆ ದೇಶದಿಂದ ಹೊರಗಡೆ ಹೋಗಲು ಕರ್ನಾಟಕದಲ್ಲಿನ ಕಾಂಗ್ರೆಸ್ ನೇತೃತ್ವದ ಸರ್ಕಾರವು ಅನುವು ಮಾಡಿಕೊಟ್ಟಿದೆ ಎಂದು ಮೋದಿ ಆರೋಪಿಸಿದ್ದಾರೆ.



ಇದು ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಿಸಿದ ವಿಷಯವಾಗಿರುವ ಕಾರಣ, ಕ್ರಮ ಜರುಗಿಸುವ ಹೊಣೆಯು ರಾಜ್ಯ ಸರ್ಕಾರದ ಮೇಲೆ ಇದೆ ಎಂದು ಅವರು ಖಾಸಗಿ ಸುದ್ದಿವಾಹಿನಿಯೊಂದಕ್ಕೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ

ಸಹಸ್ರಾರು ವಿಡಿಯೊಗಳು ಇವೆ ಎಂದಾದರೆ, ಅವು ಜೆಡಿಎಸ್ ಪಕ್ಷವು ಕಾಂಗ್ರೆಸ್ಸಿನ ಜೊತೆ ಹೊಂದಾಣಿಕೆ ಮಾಡಿಕೊಂಡಿದ್ದ ಅವಧಿಗೆ ಸೇರಿವೆ ಎಂಬುದು ಗೊತ್ತಾಗುತ್ತದೆ. ಅವರು ಅಧಿಕಾರದಲ್ಲಿ ಇದ್ದಾಗ ಈ ವಿಡಿಯೊಗಳನ್ನು ಒಟ್ಟುಗೂಡಿಸಿಕೊಂಡಿದ್ದರು, ಒಕ್ಕಲಿಗರು ತಮ್ಮ ಮತದಾನದ ಹಕ್ಕನ್ನು ಚಲಾಯಿಸಿದ ನಂತರದಲ್ಲಿ, ಚುನಾವಣೆಯ ಸಂದರ್ಭದಲ್ಲಿ ಈ ವಿಡಿಯೊಗಳನ್ನು ಬಿಡುಗಡೆ ಮಾಡಿದರು ಎಂದು ಅವರು ಹೇಳಿದ್ದಾರೆ.

ಪ್ರಜ್ವಲ್ ಅವರನ್ನು ದೇಶದಿಂದ ಹೊರಗೆ ಕಳುಹಿಸಿದ ನಂತರ ವಿಡಿಯೊಗಳನ್ನು ಬಿಡುಗಡೆ ಮಾಡಲಾಯಿತು ಎಂದಿರುವ ಮೋದಿ ಅವರು, ಈ ಬೆಳವಣಿಗೆಗಳು ಬಹಳ ಅನುಮಾನಾಸ್ಪದ ಎಂದಿದ್ದಾರೆ. ರಾಜ್ಯ ಸರ್ಕಾರದ ಬಳಿ ಮಾಹಿತಿ ಇದ್ದಿದ್ದರೆ ಅದು ಒಂದು ಕಣ್ಣಿರಿಸಬೇಕಿತ್ತು, ವಿಮಾನ ನಿಲ್ದಾಣಗಳಲ್ಲಿ ನಿಗಾ ಇರಿಸಬೇಕಿತ್ತು ಎಂದಿದ್ದಾರೆ.

ನೀವು ಏನನ್ನೂ ಮಾಡಲಿಲ್ಲ, ಕೇಂದ್ರ ಸರ್ಕಾರಕ್ಕೆ ಮಾಹಿತಿ ನೀಡಲಿಲ್ಲ. ಇದರ ಅರ್ಥ, ಇವೆಲ್ಲ ಒಂದು ರಾಜಕೀಯ ಆಟವಾಗಿತ್ತು, ಅವರು ಹೊಂದಾಣಿಕೆ ಮಾಡಿಕೊಂಡಿದ್ದ ಅವಧಿಗೆ ಸೇರಿದ ವಿಡಿಯೊಗಳು ಇವು ಎಂಬುದು ಅವರಿಗೆ ಗೊತ್ತಿತ್ತು, ಅವರೇ ವಿಡಿಯೊಗಳನ್ನು ಒಗ್ಗೂಡಿಸಿ ಇಟ್ಟುಕೊಂಡಿದ್ದರು. ಆದರೆ, ಅಪರಾಧಿಗಳನ್ನು ಬಿಡಬಾರದು. ನಮ್ಮ ದೇಶದಲ್ಲಿ ಇಂತಹ ಆಟಗಳನ್ನು ಕೊನೆಗೊಳಿಸಬೇಕು ಎಂದು ಅವರು ಹೇಳಿರುವುದಾಗಿ ವಾಹಿನಿ ಬಿಡುಗಡೆ ಮಾಡಿರುವ ಸಂದರ್ಶನದ ಪಠ್ಯದಲ್ಲಿ ಉಲ್ಲೇಖವಾಗಿದೆ.

ಮೋದಿಗೆ ಸಂಬಂಧಿಸಿದಂತೆ, ಬಿಜೆಪಿಗೆ ಸಂಬಂಧಿಸಿದಂತೆ, ನಮ್ಮ ಸಂವಿಧಾನಕ್ಕೆ ಸಂಬಂಧಿಸಿದಂತೆ ನನ್ನ ದೃಷ್ಟಿಕೋನ ಬಹಳ ಸ್ಪಷ್ಟವಾಗಿದೆ. ಇಂತಹ ವ್ಯಕ್ತಿಗಳ ವಿಚಾರದಲ್ಲಿ ತುಸುವೂ ಸಹನೆ ತೋರಿಸಬೇಕಿಲ್ಲ. ಕಾನೂನಿನ ಅಡಿಯಲ್ಲಿ ಲಭ್ಯವಿರುವ ಎಲ್ಲ ಆಯ್ಕೆಗಳನ್ನು ಬಳಸಿಕೊಂಡು ಕಠಿಣ ಶಿಕ್ಷೆಯನ್ನು ಕೊಡಬೇಕು ಎಂದಿದ್ದಾರೆ.

ಅವರನ್ನು ನಾವು ವಾಪಸ್ ಕರೆತರಬೇಕು. ಅವರ ವಿರುದ್ಧ ಬಹಳ ಕಠಿಣ ಕ್ರಮ ಕೈಗೊಳ್ಳಬೇಕು. ಇಲ್ಲಿ ಆದರೆ, ಹೋದರೆ ಎಂಬ ಮಾತುಗಳು ಬರಬಾರದು ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರವಾಗಿ ಹೇಳಿದ್ದಾರೆ. ಕರ್ನಾಟಕದಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು 2018ರ ವಿಧಾನಸಭಾ ಚುನಾವಣೆಯ ನಂತರ ಮೈತ್ರಿ ಸರ್ಕಾರ ರಚಿಸಿದ್ದವು.

ಜಾಮೀನು ಕೋರಿ ರೇವಣ್ಣ ಅರ್ಜಿ: ಇಂದು ವಿಚಾರಣೆ

ಬೆಂಗಳೂರು: ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಲೈಂಗಿಕ ದೌರ್ಜನ್ಯ ಆರೋಪದ ಪ್ರಕರಣಕ್ಕೆ ಸಂಬಂಧಿಸಿದ ಮತ್ತೊಂದು ಪ್ರಕರಣದಲ್ಲಿ ಮಹಿಳೆಯೊಬ್ಬರ ಅಪಹರಣದ ಆರೋಪಿಯಾಗಿ ಸದ್ಯ ಎಸ್‌ಐಟಿ ಬಂಧನದಲ್ಲಿರುವ ಹೊಳೆನರಸೀಪುರ ಕ್ಷೇತ್ರದ ಜೆಡಿಎಸ್ ಶಾಸಕ ಎಚ್.ಡಿ.ರೇವಣ್ಣ ನಿಯಮಿತ (ರೆಗ್ಯುಲರ್) ಜಾಮೀನು ಕೋರಿ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.



ಈ ಕುರಿತ ಅರ್ಜಿಯನ್ನು ಎಚ್.ಡಿ. ರೇವಣ್ಣ ಪರ ವಕೀಲ ಪವನ್ ಸಾಗರ್ ಸೋಮವಾರ, 'ಶಾಸಕರು, ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ (ಸಿಸಿಎಚ್-82) ನ್ಯಾಯಾಧೀಶ ಸಂತೋಷ ಗಜಾನನ ಭಟ್ ಮುಂದೆ ಸಲ್ಲಿಸಿದರು. ಅರ್ಜಿ ಪರಿಶೀಲಿಸಿದ ನ್ಯಾಯಾಧೀಶರು ಇದೇ 7ಕ್ಕೆ (ಮಂಗಳವಾರ) ವಿಚಾರಣೆ ನಿಗದಿಪಡಿಸಿದ್ದಾರೆ.

ವಾಂಖೇಡೆಯಲ್ಲಿ ಸೂರ್ಯ ಅಬ್ಬರ: ಮುಂಬೈಗೆ ಗೆಲುವು



ಮುಂಬೈ, ಮೇ 6- ಸೂರ್ಯ ಕುಮಾರ್ ಯಾದವ್ ಅವರ ಭರ್ಜರಿ ಶತಕದ ನೆರವಿನಿಂದ ಮುಂಬೈ ಇಂಡಿಯನ್ಸ್, ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ 7 ವಿಕೆಟ್‌ಗಳ ಜಯ ಗಳಿಸಿದೆ.

ಇಲ್ಲಿನ ವಾಂಖೇಡೆ ಕ್ರೀಡಾಂಗಣದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಸನ್‌ರೈಸರ್ಸ್ ಹೈದರಾಬಾದ್ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 173 ರನ್‌ಗಳ ಗೆಲುವಿನ ಗುರಿ ನೀಡಿತು. ಈ ಗುರಿ ಬೆನ್ನಟ್ಟಿದ ಮುಂಬೈ 17.2 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 174 ರನ್ ಕಲೆಹಾಕಿ ಭರ್ಜರಿ ಜಯ ಗಳಿಸಿತು.

ಹೈದರಾಬಾದ್ ನೀಡಿದ ಗುರಿ ಬೆನ್ನಟ್ಟಿದ ಮುಂಬೈ ತಂಡದ ಮೊತ್ತ 32 ರನ್ ಆಗುವಷ್ಟರಲ್ಲಿ 3 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಇಶಾನ್ ಕಿಶನ್ 7 ಎಸೆತಗಳಲ್ಲಿ 9 ರನ್‌ಗಳಿಸಿ ಔಟಾದರು. ರೋಹಿತ್ ಶರ್ಮಾ 5 ಎಸೆತಗಳಲ್ಲಿ 4 ರನ್ ಗಳಿಸಿ ಪೆವಿಲಿಯನ್‌ಗೆ ಮರಳಿದರು. ನಮನ್ ಧೀರ್ 9 ಎಸೆತಗಳಲ್ಲಿ ತಂಡಕ್ಕೆ ಕೊಡುಗೆ ನೀಡದೆ ಮರಳಿದರು. ಬಳಿಕ 4ನೇ ವಿಕೆಟ್‌ಗೆ ಜೊತೆಯಾದ ಸೂರ್ಯ ಕುಮಾರ್ ಯಾದವ್ ಹಾಗೂ ತಿಲಕ್ ವರ್ಮಾ 143 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಜಯ ತಂದುಕೊಟ್ಟರು. ಪಂದ್ಯದಲ್ಲಿ ಹೈದರಾಬಾದ್ ಬೌಲರ್‌ಗಳ ಮೇಲೆ ಸವಾರಿ ಮಾಡಿದ ಸೂರ್ಯ ಕುಮಾರ್ ಯಾದವ್ 51 ಎಸೆತಗಳಲ್ಲಿ 6 ಸಿಕ್ಸರ್ 12 ಬೌಂಡರಿ ಒಳಗೊಂಡ ಅಜೇಯ 102 ರನ್ ಗಳಿಸಿದರೇ, ಮತ್ತೊಂದೆಡೆ ತಾಳ್ಮೆಯ ಆಟವಾಡಿದ ತಿಲಕ್‌ವರ್ಮಾ 32 ಎಸೆತಗಳಲ್ಲಿ 6 ಬೌಂಡರಿ ಒಳಗೊಂಡ 37 ರನ್ ಗಳಿಸಿ ಅಜೇಯರಾಗಿ ಉಳಿದರು. ಹೈದರಾಬಾದ್ ಪರ ಬೌಲಿಂಗ್‌ನಲ್ಲಿ ಭುವನೇಶ್ವರ್ ಕುಮಾರ್, ಪ್ಯಾಟ್ ಕಮ್ಮಿನ್ಸ್ ಹಾಗೂ ಮಾರ್ಕೊ ಯಾನ್ಸೆನ್ ತಲಾ ಒಂದೊಂದು ವಿಕೆಟ್ ಕಬಳಿಸಿದರು.

ಇಂದಿನ ಪಂದ್ಯ (ಮೇ 7)
ಡೆಲ್ಲಿ ಕ್ಯಾಪಿಟಲ್ಸ್ / ರಾಜಸ್ಥಾನ್ ರಾಯಲ್ಸ್
ಸ್ಥಳ: ದೆಹಲಿ, ಅರುಣ್ ಜೇಟ್ಲಿ ಕ್ರೀಡಾಂಗಣ
ಸಮಯ: ಸಂಜೆ 7.30ಕ್ಕೆ.

ಇದಕ್ಕೂ ಮುನ್ನಾ ಮೊದಲು ಬ್ಯಾಟಿಂಗ್ ಮಾಡಿದ ಸನ್‌ರೈಸರ್ಸ್ ಹೈದರಾಬಾದ್‌ಗೆ ಮೊದಲ ವಿಕೆಟ್‌ಗೆ ಟ್ರಾವಿಸ್ ಹೆಡ್ ಹಾಗೂ ಅಭಿಷೇಕ್ ಶರ್ಮಾ 5.5 ಓವರ್‌ಗಳಲ್ಲಿ 56 ರನ್‌ಗಳ ಜತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿದರು. ಈ ವೇಳೆ ರಕ್ಷಣಾತ್ಮಕ ಆಟವಾಡುತ್ತಿದ್ದ ಅಭಿಷೇಕ್ ಶರ್ಮಾ ಅವರನ್ನು ಬಲಿ ಪಡೆಯುವಲ್ಲಿ ಮುಂಬೈ ವೇಗಿ ಜಸ್ಪ್ರೀತ್ ಬುಮ್ರಾ ಯಶಸ್ವಿಯಾದರು. ಅಭಿಷೇಕ್ ಶರ್ಮಾ ಕೇವಲ 11 ರನ್ ಬಾರಿಸಿ ಪೆವಿಲಿಯನ್ ಸೇರಿದರು. ನಂತರ ಬಂದ ಮಯಾಂಕ್ ಅಗರ್‌ವಾಲ್ ಕೇವಲ 5 ರನ್ ಗಳಿಸಿ ಅನ್ಶೂಲ್ ಕಂಬೋಜ್‌ಗೆ ವಿಕೆಟ್ ಒಪ್ಪಿಸಿದರು.

ಮತ್ತೊಂದು ತುದಿಯಲ್ಲಿ ದಿಟ್ಟ ಬ್ಯಾಟಿಂಗ್ ನಡೆಸಿದ ಟ್ರಾವಿಸ್ ಹೆಡ್ 30 ಎಸೆತಗಳಲ್ಲಿ 7 ಬೌಂಡರಿ ಹಾಗೂ ಒಂದು ಸಿಕ್ಸರ್ ಸಹಿತ 48 ರನ್ ಬಾರಿಸಿ ಪಿಯೂಶ್ ಚಾವ್ಲಾಗೆ ವಿಕೆಟ್ ಒಪ್ಪಿಸಿದರು. ಇದರ ಬೆನ್ನಲ್ಲೇ ನಿತೀಶ್ ರೆಡ್ಡಿ 20 ರನ್ ಗಳಿಸಿ ಹಾರ್ದಿಕ್ ಪಾಂಡ್ಯಗೆ ವಿಕೆಟ್ ಒಪ್ಪಿಸಿದರು. ಇದಾದ ಬಳಿಕ 2ರನ್ ಗಳಿಸಿದ್ದ ಅಪಾಯಕಾರಿ ಬ್ಯಾಟರ್ ಹೆನ್ರಿಚ್ ಕ್ಲಾಸೇನ್ ಅವರನ್ನು ಕ್ಲೀನ್ ಬೌಲ್ಡ್ ಮಾಡುವಲ್ಲಿ ಅನುಭವಿ ಲೆಗ್‌ಸ್ಪಿನ್ನರ್ ಚೌವ್ಲಾ ಯಶಸ್ವಿಯಾದರು. ಉಳಿದಂತೆ ಶಹಬಾಜ್ ಅಹಮ್ಮದ್ 10 ರನ್ ಬಾರಿಸಿ ಪಾಂಡ್ಯ ಬೌಲಿಂಗ್‌ನಲ್ಲಿ ದೊಡ್ಡ ಹೊಡೆತಕ್ಕೆ ಯತ್ನಿಸಿ ವಿಕೆಟ್ ಒಪ್ಪಿಸಿದರು. ಇನ್ನು ಮಾರ್ಕೊ ಯಾನ್ಸೆನ್ 17 ರನ್ ಸಿಡಿಸಿ ಪಾಂಡ್ಯಗೆ ಮೂರನೇ ಬಲಿಯಾದರು. ಇನ್ನು ಕೊನೆಯಲ್ಲಿ ನಾಯಕ ಪ್ಯಾಟ್ ಕಮಿನ್ಸ್ ಕೇವಲ 17 ಎಸೆತಗಳಲ್ಲಿ ತಲಾ 2 ಸಿಕ್ಸರ್, ಬೌಂಡರಿ ಒಳಗೊಂಡ 35 ರನ್ ಗಳಿಸಿದರು.



ಮುಂಬೈ ಇಂಡಿಯನ್ಸ್ ಪರ ನಾಯಕ ಹಾರ್ದಿಕ್ ಪಾಂಡ್ಯ ಹಾಗೂ ಪಿಯೂಶ್ ಚಾವ್ಲಾ ತಲಾ 3, ಜಸ್ಪ್ರೀತ್ ಬುಮ್ರಾ ಹಾಗೂ ಅನ್ಶೂಲ್ ಕಂಬೋಜ್ ತಲಾ ಒಂದೊಂದು ವಿಕೆಟ್ ಪಡೆದರು. ಸೂರ್ಯಕುಮಾರ್ ಯಾದವ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಕೆ.ರಾಮಸ್ವಾಮಿ ಜೋಯಿಸ್ ನಿಧನ

ಮೈಸೂರು, ಮೇ 6- ಮೈಸೂರಿನ ವಿದ್ಯಾರಣ್ಯಪುರಂ ನಿವಾಸಿ ಹಾಗೂ ಮೈಸೂರು ಅರಮನೆ ಜ್ಯೋತಿಷಿಗಳಾದ ದಿವಂಗತ ಯಜ್ಞಾನ್ ಎಸ್.ಎನ್. ಕೃಷ್ಣ ಜೋಯಿಸ್ ಅವರ ದ್ವಿತೀಯ ಪುತ್ರ ಕೆ.ರಾಮಸ್ವಾಮಿ ಜೋಯಿಸ್(83) ಸೋಮವಾರ ನಿಧನರಾದರು. ಮೃತರು ಪುತ್ರ ಶ್ಯಾಮ್ ರಾಮಸ್ವಾಮಿ, ಪುತ್ರಿ ಆರ್.ಶಾಂತ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ(ಮೇ 7) ಬೆಳಗ್ಗೆ 11.30ಕ್ಕೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ವಿದ್ಯುತ್ ಚಿತಾಗಾರದಲ್ಲಿ ನೆರವೇರಲಿದೆ



ಮಹಿಳೆ ಅಪಹರಣ ಪ್ರಕರಣ: ರೇವಣ್ಣ ಆಪ್ತ ಸತೀಶ್ ಬಾಬಣ್ಣಗೆ 8 ದಿನ ಪೊಲೀಸ್ ಕಸ್ಟಡಿ

ಬೆಂಗಳೂರು: ಮಹಿಳೆ ಅಪಹರಣ ಹಾಗೂ ಅಕ್ರಮ ಬಂಧನ ಪ್ರಕರಣಕ್ಕೆ ಸಂಬಂಧಿಸಿದಂತೆ ಜೆಡಿಎಸ್ ನಾಯಕ ಹೆಚ್.ಡಿ. ರೇವಣ್ಣ ಅವರ ಆಪ್ತ ಸತೀಶ್ ಬಾಬಣ್ಣಗೆ 8 ದಿನಗಳ ಪೊಲೀಸ್ ಕಸ್ಟಡಿಗೆ ಒಪ್ಪಿಸಿ ನಗರದ ನ್ಯಾಯಾಲಯವೊಂದು ಸೋಮವಾರ ಆದೇಶ ನೀಡಿದೆ. ಪ್ರಜ್ವಲ್ ರೇವಣ್ಣ ವಿರುದ್ಧದ ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಿಸಿದ ಅಪಹರಣ ಪ್ರಕರಣದಲ್ಲಿ ಸತೀಶ್ ಬಾಬಣ್ಣ ಅವರನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದ ವಿಶೇಷ ತನಿಖಾ ತಂಡ, ಹೆಚ್ಚಿನ ತನಿಖೆಗಾಗಿ ಪೊಲೀಸ್ ಕಸ್ಟಡಿಗೆ ಮನವಿ ಮಾಡಿತು.

ಸಂತ್ರಸ್ತೆಯ 20 ವರ್ಷದ ಮಗ ಮೈಸೂರಿನಲ್ಲಿ ಕೆ.ಆರ್. ನಗರದಲ್ಲಿ ದಾಖಲಿಸಿದ್ದ ದೂರಿನ ಆಧಾರದ ಮೇಲೆ ಬಾಬಣ್ಣ ಅವರನ್ನು ಬಂಧಿಸಲಾಗಿತ್ತು. ಆಕೆಯ ಬಂಧನದ ನಂತರ ತನ್ನ ತಾಯಿಗೆ ಜೀವ ಬೆದರಿಕೆಯಿದೆ ಎಂದು ಅವರು ಹೇಳಿದ್ದರು. ಹೇಳಿಕೆ ದಾಖಲಿಸಿಕೊಳ್ಳಲು ಪೊಲೀಸರು ಬಂದರೆ ಆಕೆಯನ್ನು ಬಂಧಿಸಬಹುದು ಎಂದು ಹೇಳಿ ಸತೀಶ್ ಬಾಬಣ್ಣ ತನ್ನ ತಾಯಿಯನ್ನು ಬೈಕ್‌ನಲ್ಲಿ ಕರೆದೊಯ್ದಿದ್ದರು ಎಂದು ಅವರು ದೂರಿನಲ್ಲಿ ಉಲ್ಲೇಖಿಸಿದ್ದರು. ಪ್ರಜ್ವಲ್ ರೇವಣ್ಣ ಅವರಿಂದ ಅತ್ಯಾಚಾರಕ್ಕೆ ಗುರಿಯಾದ ಮಹಿಳೆಯರ ವಿಡಿಯೋ ವೈರಲ್ ಆದ ಬಳಿಕ ಅದರಲ್ಲಿ ಸಂತ್ರಸ್ತೆ ಗುರುತು ಪತ್ತೆಯಾದ ನಂತರ ದೂರು ದಾಖಲಾಗಿತ್ತು.



ಮೈಸೂರಿನ ವಾರ್ಡ್ ನಂ.6 ಗೋಕುಲಂ, ಬೃಂದಾವನ ಬಡಾವಣೆಯಲ್ಲಿ ವಿಪರೀತ ಗಾಳಿಗೆ ಹಲವಾರು ಮರಗಳು ಮನೆ ಹಾಗೂ ರಸ್ತೆಯ ಮೇಲೆ ಬಿದ್ದಿದ್ದು, ಇದನ್ನು ನಗರ ಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು ಅವರು ನಗರಪಾಲಿಕೆಯನ್ನು ನೆಚ್ಚಿಕೊಳ್ಳದೆ ಬಾಡಿಗೆಗೆ ಕ್ರೇನ್ ತರಿಸಿ ತೆರವುಗೊಳಿಸಿದರು.

ನಕ್ಕರೆ ಅದೇ ಸ್ವರ್ಗ

ಅವರು : "ಈ ಮನೆ ಅತ್ಯಂತ ಸುಂದರವಾಗಿದೆ, ನಿಮ್ಮ ಸ್ವಂತದ್ದಾ?"
ಇವರು : "ಹೌದು ನಾನು ಇಲ್ಲೇ ವಾಸ"
ಅವರು : "ತಮ್ಮ ಜೀವನವನ್ನೆಲ್ಲಾ ಇಲ್ಲೇ ಕಳೆದಿದ್ದೀರಾ ಅನ್ನಿ"
ಇವರು : "ಹ್ಯಾಗೆ ಹೇಳಲಿ? ಇನ್ನು ನಾನು ಬದುಕಿದ್ದೀನಲ್ಲಾ..."

ಮೈಸೂರು ಮಿತ್ರ
ಮಂಗಳವಾರ, 7 ಮೇ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಸತತ ಪ್ರಯತ್ನಶೀಲ ಮತ್ತು ಯಶ ಕಾಣುವ ಛಲವಿರುವವನ ಹೃದಯದಲ್ಲಿ ದೇವರು ಸದಾ ನೆಲೆಸಿರುತ್ತಾನೆ –ವೇಮನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಘಟ್ಟ ಹತ್ತಿದವನು ಅಟ್ಟ ಏರನೆ?

ನಿಮ್ಮ ಪತ್ರಗಳು

ಪಕ್ಷ ಅವನತಿಗೆ ಜಾತಿ, ಧರ್ಮದ ವ್ಯವಸ್ಥೆ ಕಾರಣ

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ಪ್ರತಿಪಕ್ಷದ ಸಿದ್ಧಾಂತಗಳು ಜಾತಿ, ಧರ್ಮದ ವ್ಯವಸ್ಥೆಯನ್ನು ಅವಲಂಬಿಸಿಕೊಳ್ಳುತ್ತಿರುವುದು ನೋಡಿದ್ರೆ ಅಂತಹ ಪಕ್ಷಗಳು ಅವನತಿ ಕಡೆ ಸಾಗಲಿವೆ ಎನ್ನಿಸುತ್ತಿದೆ. ಕುಟುಂಬಗಳಲ್ಲಿ ಅಣ್ಣ-ತಮ್ಮನ ಸಂಬಂಧ ಮದುವೆಯಾದ ಬಳಿಕ ಬೇರೆ-ಬೇರೆ ಯಾಗುವ ಭಾವನೆ ಸ್ವಾಭಾವಿಕ, ದಿನಾ ಬೆಳಗಿನಿಂದ ಎದುರು ಬದುರು ಬಂದರು ಮಾತು ಇಲ್ಲ- ಕಥೆಯೂ ಇಲ್ಲ. ಮುಖ ತಿರುಗಿಸಿಕೊಂಡು ಸಂಬಂಧವೇ ಇಲ್ಲದ ರೀತಿಯಲ್ಲಿ ವರ್ತನೆ ತೋರುತ್ತಾರೆ. ಇದೇ ರೀತಿ ಕುಟುಂಬಗಳ ಸದಸ್ಯರಲ್ಲಿ ಸಂಬಂಧಗಳ ಮಧ್ಯೆ ಮನಸ್ತಾಪ ಬಗೆಹರಿಸುವಲ್ಲಿ ಹಿರಿ ಜೀವಗಳು ವಿಫಲವಾಗುತ್ತಿವೆ.

ಇನ್ನು ಇಡೀ ಜಾತಿ ಅಥವಾ ಇಡೀ ಧರ್ಮವನ್ನು ಒಗ್ಗೂಡಿಸುವ ಕೆಲಸವನ್ನು ಪಕ್ಷಗಳು ಮಾಡುತ್ತಿರುವುದು ನೋಡಿದ್ರೆ ಇದು ಕೇವಲ ಓಟಿಗಾಗಿ, ಅಧಿಕಾರಕ್ಕಾಗಿ ಬಿಟ್ಟರೆ ಬೇರೇನೂ ಅಲ್ಲ. ಇದರಿಂದ ಪಕ್ಷದ ಏಜೆಂಟರು, ದಲ್ಲಾಳಿಗಳಿಗೆ ಲಾಭವಾಗ ಬಹುದೇ ಹೊರತು ಜಾತಿ, ಧರ್ಮ ಒಗ್ಗೂಡಿಸುವ ಕೆಲಸ ರಾಜಕೀಯ ಪಕ್ಷಗಳಿಂದ ಸಾಧ್ಯವಾಗುವುದಿಲ್ಲ. ಪಕ್ಷದ ಏಜೆಂಟರು, ದಲ್ಲಾಳಿಗಳು ಐಷಾರಾಮಿ ಜೀವನ ನಡೆಸುವುದು ಹೊರತಾಗಿ ಯಾರೋ ಒಬ್ಬರು ಮಾಡಿದ ತಪ್ಪನ್ನು ಇಡೀ ಜಾತಿ, ಇಡೀ ಧರ್ಮವೇ ತಪ್ಪು ಮಾಡಿದೆ ಎಂದು ರಾಜಕೀಯ ಪಕ್ಷಗಳು ಬಿಂಬಿಸುವುದು ತಪ್ಪು.

ಇಂತಹ ಪಕ್ಷದ ಸಿದ್ಧಾಂತಗಳೇ ಮತದಾರ ಮನಸ್ಸಿಗೆ ಕೊಡುವುದಿಲ್ಲ. ಈ ವ್ಯವಸ್ಥೆ ಪಕ್ಷದ ಅವನತಿಗೆ ಕಾರಣವಾಗುತ್ತದೆ. ಕೆಲವೇ ವರ್ಷಗಳಲ್ಲಿ ಒಂದು ರಾಜಕೀಯ ಪಕ್ಷ ಮನೆಯೊಂದು ಮೂರು ಬಾಗಿಲು ಆಗಿ ಪಕ್ಷ ಅವನತಿಯತ್ತ ಸಾಗಲಿದೆ. ಬಹುಶಃ ಎಲ್ಲ ರಾಜಕೀಯ ಪಕ್ಷಗಳು ಎಚ್ಚೆತ್ತುಕೊಂಡು ಸ್ವರ್ಧಾವಾದ, ಸರ್ವ ಜನಾಂಗದ ಶಾಂತಿಯ ತೋಟ ಎಂಬ ಅಂಶ ಅಳವಡಿಸಿಕೊಳ್ಳಬೇಕು. ಪ್ರತಿ ಮನೆಯ ಯುವಕರಿಗೆ ಉದ್ಯೋಗ ದೊರಕಿಸಿಕೊಡುವಂತಹ, ಬಡವರನ್ನು ಬಡತನದಿಂದ ಮುಕ್ತಗೊಳಿಸುವಂತಹ ವ್ಯವಸ್ಥೆಯನ್ನು ರಾಜಕೀಯ ಪಕ್ಷಗಳು, ಪಕ್ಷದ ಸಿದ್ಧಾಂತಗಳಲ್ಲಿ ಅಳವಡಿಸಿಕೊಳ್ಳುವತ್ತ ಹೆಜ್ಜೆ ಹಾಕಬೇಕಿದೆ.

–ವೀರೇಶ ಧೂಪದಮಠ, ಮೈಸೂರು.

ನಾಗರಿಕರಿಗೆ ಅನುಕೂಲವಾಗುವಂತೆ ವಲಯ ಮಟ್ಟದಲ್ಲಿ ಸಹಾಯವಾಣಿ ಸ್ಥಾಪನೆಯಾಗಲಿ

ಮಾನ್ಯರೆ,

ಮೈಸೂರಿನಲ್ಲಿ ಇತ್ತೀಚೆಗೆ ಜೋರು ಗಾಳಿ, ಮಳೆಯಿಂದಾಗಿ ಗಾಳಿಯ ರಭಸಕ್ಕೆ ವಿದ್ಯುತ್ ಕಂಬಗಳು ಧರೆಗುರುಳಿವೆ. ಮರ ಕೊಂಬೆಗಳು ಭಾರಿ ಪ್ರಮಾಣದಲ್ಲಿ ತುಂಡಾಗಿ ಬಿದ್ದಿವೆ. ವಿದ್ಯುತ್ ಪೂರೈಕೆ, ನೀರು ಸರಬರಾಜು ವ್ಯತ್ಯಯವಾಗಿ ನಗರದ ವಿವಿಧ ಬಡಾವಣೆಯ ನಿವಾಸಿಗಳು ಸಂಕಷ್ಟದಲ್ಲಿದ್ದಾರೆ. ಪಾದಚಾರಿಗಳು, ವಾಹನ ಚಾಲಕರ ಸುರಕ್ಷಿತವಾಗಿ ಸಂಚರಿಸಲು ಮತ್ತು ಮನೆಯಲ್ಲಿ ಆಕ್ಸಿಜನ್ ಕಾನ್ಸನ್‌ಟ್ರೇಟರ್‌ಗಾಗಿ ವಿದ್ಯುತ್ ಸಮಸ್ಯೆ ಉಂಟಾಗಿ ಪರದಾಡುವಂತಾಗಿದೆ. ಇನ್ನೂ ಕುಡಿಯುವ ನೀರು ಸಮರ್ಪಕವಾಗಿ ಬರುತ್ತಿಲ್ಲ. ಒಳಚರಂಡಿ ನೀರು ರಸ್ತೆಯ ಮೇಲೆ ಹರಿಯುತ್ತಿದೆ. ಮಳೆನೀರು ಮೋರಿಗಳೆಲ್ಲವೂ ಮುಚ್ಚಿಹೋಗಿವೆ. ಪ್ರಕೃತಿ ವಿಕೋಪದ ನಂತರ ಸಮಸ್ಯೆ ಗೊತ್ತಾಗುತ್ತದೆ. ಮೇ 8 ರಿಂದ ಭಾರಿ ಮಳೆ ಬರುವ ಸಂಭವವಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದ್ದು, ನಾಗರಿಕರ ಸಹಾಯಕ್ಕಾಗಿ, ಸಂಪರ್ಕಕ್ಕಾಗಿ ಸಕಾಲಕ್ಕೆ ನಗರಮಟ್ಟದಲ್ಲಿ ಸಹಾಯವಾಣಿಯ ಸಹಕಾರ ಅವಶ್ಯಕವಿದೆ. ಹಾಗಾಗಿ ನಗರಪಾಲಿಕೆ, ಚೆಸ್ಕಾಂ, ವಾಣಿವಿಲಾಸ ವಾಟರ್ ವರ್ಕ್ಸ್, ಅರಣ್ಯ ಇಲಾಖೆ, ಆರೋಗ್ಯ ಇಲಾಖೆ, ಆರಕ್ಷಕ ಇಲಾಖೆ, ಜನಸಂಪರ್ಕ ಇಲಾಖೆ, ಸರ್ಕಾರ ಸಂಸ್ಥೆಗಳೊಂದಿಗೆ ನಗರ ಸಹಾಯವಾಣಿಯನ್ನು ಸ್ಥಾಪಿಸಿದರೆ ಮುಂಜಾಗ್ರತಾ ಕ್ರಮವಾಗಿ, ಅವಘಡಗಳನ್ನು, ನಷ್ಟಗಳನ್ನು ತಡೆಗಟ್ಟಬಹುದು. ನಗರಪಾಲಿಕೆ ವಲಯ ಮಟ್ಟದಲ್ಲಿ ನಗರಸಹಾಯವಾಣಿ ವ್ಯವಸ್ಥೆ ಮಾಡಲು ಮುಂದಾಗಬೇಕಿದೆ.

–ಅಜಯ್ ಶಾಸ್ತ್ರಿ, ಸಾಮಾಜಿಕ ಹೋರಾಟಗಾರ, ಮೈಸೂರು.

ಚರಂಡಿ ನಿರ್ಮಿಸಿ, ರಸ್ತೆ ಸರಿಪಡಿಸಿ

ಮಾನ್ಯರೆ,

ನಂಜನಗೂಡಿನ ಶ್ರೀಕಂಠೇಶ್ವರ ನಗರದ ಕಪಿಲಾ ಮಾರ್ಗದ ಅಡ್ಡರಸ್ತೆಯಲ್ಲಿ ಚರಂಡಿ ವ್ಯವಸ್ಥೆ ಇಲ್ಲದಿದ್ದರಿಂದಾಗಿ ಈ ಮಾರ್ಗದ ಬಚ್ಚಲು ನೀರು ಬೀದಿಗೆ ಹರಿದು ಬಂದು ನಿಂತಿದೆ. ಇಲ್ಲಿ ಓಡಾಡುವ ನಿವಾಸಿಗಳು, ಸರ್ಕಾರಿ ಕಾಲೇಜಿನ ವಿದ್ಯಾರ್ಥಿಗಳು, ತಾಲೂಕು ಆಡಳಿತ ಸೌಧಕ್ಕೆ ಹೋಗಿ ಬರುವವರು ತುಂಬಾ ಸಂಕಷ್ಟ ಅನುಭವಿಸು ವಂತಾಗಿದೆ. ಬೇಸಿಗೆಯಲ್ಲೇ ಈ ಅವಸ್ಥೆಯಲ್ಲಿರುವ ರಸ್ತೆ, ಮಳೆಗಾಲದಲ್ಲಿ ಮತ್ತಷ್ಟು ಹದಗೆಟ್ಟು ತುಂಬಾ ತೊಂದರೆಯಾಗುತ್ತದೆ. ಮಿನಿ ವಿಧಾನ ಸೌಧದ ಮಗ್ಗುಲಲ್ಲೇ ಇರುವ ಈ ರಸ್ತೆಯಲ್ಲಿ ಗಿಡಗಂಟಿಗಳು ಬೆಳೆದು ನಿಂತಿದ್ದು ಸಂಬಂಧಪಟ್ಟವರು ಕೂಡಲೇ ಚರಂಡಿ ನಿರ್ಮಿಸಿ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕೆಂದು ಮನವಿ.

–ಶ್ರೀಕಂಠ ನಗರ ನಿವಾಸಿಗಳು, ನಂಜನಗೂಡು.

ದೃಶ್ಯ ಮಾಧ್ಯಮಗಳು ಅಶ್ಲೀಲ ಸುದ್ದಿಗಳನ್ನು ವೈಭವೀಕರಿಸುವುದು ತರವಲ್ಲ!

ಮಾನ್ಯರೆ,

ಲೈಂಗಿಕ ದೌರ್ಜನ್ಯದ ಆರೋಪ ಎದುರಿಸುತ್ತಿರುವ ರಾಜ್ಯದ ಯುವ ಸಂಸದ ರೊಬ್ಬರ ವೈವಿಧ್ಯಮಯ ವರ್ಣರಂಜಿತ ದೃಶ್ಯ, ಸುದ್ದಿಗಳು ಕಳೆದ ಹಲವು ದಿನ ಗಳಿಂದ ದೃಶ್ಯ ಮಾಧ್ಯಮಗಳಲ್ಲಿ ಬಿತ್ತರವಾಗುತ್ತಿವೆ. ಕೆಲ ಚಾನೆಲ್‌ಗಳು ಮುಖ್ಯ ಸುದ್ದಿಯ ಅರ್ಧ ಭಾಗವನ್ನು ಇದಕ್ಕೆ ಮೀಸಲಿಟ್ಟು ಪೆನ್‌ಡ್ರೈವ್‌ನಲ್ಲಿನ ಸುದ್ದಿಗಳನ್ನು ರಸವತ್ತಾಗಿ ವಿವರಿಸುತ್ತಾ ಹೋಗುವುದು ವೀಕ್ಷಕರಲ್ಲಿ ಅಸಹ್ಯ ತರಿಸುತ್ತಿದೆ.

ಏಕೆಂದರೆ ದೃಶ್ಯ ಮಾಧ್ಯಮಗಳನ್ನು ಮನೆ ಮಂದಿಯೆಲ್ಲಾ ಒಟ್ಟಿಗೆ ಕೂತು ವೀಕ್ಷಿಸುತ್ತಾರೆ. ಈ ಸಮಯದಲ್ಲಿ ಹೆಣ್ಣು ಮಕ್ಕಳ ಮೇಲೆ ನಡೆದ ಲೈಂಗಿಕ ದೌರ್ಜನ್ಯದ ಸುದ್ದಿಗಳನ್ನು ಮಾಧ್ಯಮದವರು ದಿನಾಲೂ ಪ್ರಾಮುಖ್ಯತೆಯಾಗಿ ನಿರಂತರವಾಗಿ ಬಿತ್ತರಿಸುತ್ತಾ ಹೋದರೆ, ವೃದ್ಧರು, ಮಕ್ಕಳು ಅದರಲ್ಲೂ ವಿಶೇಷವಾಗಿ ಹೆಣ್ಣುಮಕ್ಕಳು ತಾಯಂದಿರು ಹಾಗೂ ಅವರ ಪೋಷಕರ ಮನಸ್ಸಿನಲ್ಲಿ ಆಗುವ ಕಿರಿಕಿರಿ ಕಸಿವಿಸಿ ಅಷ್ಟಿಷ್ಟಲ್ಲ. ಅಲ್ಲದೇ ಈ ಲೈಂಗಿಕ ದೌರ್ಜನ್ಯದ ಪ್ರಕರಣದಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಭಾಗಿಯಾಗಿರುವವರ ಮನಸ್ಸು ಮುಜುಗರ ಎದುರಿಸಬೇಕಾಗಿದೆ. ಅವರು ತಮ್ಮ ತಮ್ಮ ಕುಟುಂಬದ ಗೌರವಕ್ಕೆ ಹೆದರಿ ಪ್ರಾಣಕ್ಕೆ ಏನಾದರೂ ತೊಂದರೆ ಮಾಡಿಕೊಂಡರೆ ಅದಕ್ಕೆ ಯಾರು ಹೊಣೆ? ಇದನ್ನು ದೃಶ್ಯ ಮಾಧ್ಯಮದವರು ಅರ್ಥ ಮಾಡಿಕೊಳ್ಳಬೇಕಿದೆ.

ಸರ್ಕಾರವು ಈ ಪ್ರಕರಣದ ತನಿಖೆಯನ್ನು ಈಗಾಗಲೇ ಎಸ್‌ಐಟಿಗೆ ವಹಿಸಿದ್ದು ಅದು ಪ್ರಗತಿಯಲ್ಲಿದೆ. ಅದರ ವರದಿ ಬರುವ ತನಕ ಕಾಯುವುದು ಸಹಜ ಬೇಕಾಗಿದೆ. ಹೀಗಾಗಿ ದೃಶ್ಯ ಮಾಧ್ಯಮಗಳು ಸುದ್ದಿಯನ್ನು ಬಿತ್ತರಿಸುವ ಭರಾಟೆಯಲ್ಲಿ ಜನರಲ್ಲಿ ನಕಾರಾತ್ಮಕ ಭಾವನೆಯನ್ನು ಸೃಷ್ಟಿಸದೇ, ಜನರ ಪ್ರಾಣ ಉಳಿಸುವ ಕೆಲಸದಿಂದ ಹಿಡಿದು ಸಾಮಾಜಿಕ ಜವಾಬ್ದಾರಿ ಹಾಗೂ ನೈತಿಕತೆಯನ್ನು ಎತ್ತಿ ಹಿಡಿಯುವುದು ಅತ್ಯಂತ ಅಗತ್ಯವಾಗಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ನಾವು ಬದುಕುವುದು ಒಂದೇ ಸಾರಿ! ಮನಸ್ಸಿನಲ್ಲಿ ಸಂತಸ ತುಂಬಿರಲಿ ಪ್ರತಿ ಬಾರಿ!!



“ಸಂತೋಷ ಎನ್ನುವುದು ಒಂದು ಮಾನಸಿಕ ಸ್ಥಿತಿ. ಅನೇಕ ಯಶಸ್ವಿ ವ್ಯಕ್ತಿಗಳು ಅನೇಕ ಬಗೆಯ ಒತ್ತಡ ಗಳಲ್ಲಿ ನರಳುತ್ತಿರುವುದನ್ನು ನೋಡಿದ್ದೇವೆ. ದೊಡ್ಡ ಮನೆ, ಕಾರು, ಬ್ಯಾಂಕ್ ಬ್ಯಾಲೆನ್ಸ್, ಡಬ್ಬಲ್ ಕಾಟ್, ಮೆತ್ತನೆಯ ಹಾಸಿಗೆ, ಎ.ಸಿ, ಪೌಷ್ಟಿಕ ಆಹಾರ ಎಲ್ಲವೂ ಇರುವ ವ್ಯಕ್ತಿ ನಿದ್ರೆಯಿಲ್ಲದೇ ನಿದ್ರೆ ಮಾತ್ರೆಗಳನ್ನು ತೆಗೆದುಕೊಳ್ಳುತ್ತಿರುತ್ತಾನೆ. ಮತ್ತೊಂದೆಡೆ... ದೇಹ ದಂಡಿಸುವ, ಆ ದಿನದ ಆಹಾರಕ್ಕೆ ಅಂದು ದುಡಿಯುವ ಕೂಲಿ ಕೆಲಸ ಮಾಡುವ ವ್ಯಕ್ತಿ ಮರದ ಕೆಳಗೆ ನೆಮ್ಮದಿಯಾಗಿ ನಿದ್ರಿಸುತ್ತಿರುತ್ತಾನೆ. ಹಾಗಾದರೆ ನಿಜ ವಾಗಿಯೂ ಯಾರು ಸುಖಿ? ಯಾರಿಗೆ ಮನಸ್ಸಿನಲ್ಲಿ ಪ್ರಶಾಂ ತತೆ ಇದೆಯೋ ಅವನೇ ನಿಜವಾದ ಸುಖಿಯಲ್ಲವೇ?


ಎಂ.ಎಸ್. ಲಕ್ಷ್ಮಿ
ಕನ್ನಡ ಉಪನ್ಯಾಸಕರು,
ಮೈಸೂರು.
ಮೊ: 9663110465

ಮಾನವನ ಮೆದುಳು ಆಲೋಚನೆಗಳ ಸಾಗರ. ನಾವು ಇಚ್ಛೆ ಪಡಲಿ, ಇಲ್ಲದಿರಲಿ ದಿನನಿತ್ಯ ಸಾವಿರಾರು ಯೋಚನೆಗಳು ಮನಸ್ಸಿನಲ್ಲಿ ಉದ್ಭವಿಸುತ್ತಿರುತ್ತವೆ; ಮರೆ ಯಾಗುತ್ತಿರುತ್ತವೆ. ನಮ್ಮ ಆಲೋಚನೆಗಳ ಮೇಲೆ ನಮಗೆ ನಿಯಂತ್ರಣವಿರುವುದಿಲ್ಲ, ನಮ್ಮ ಆಲೋ ಚನೆಯಂತೆ ವರ್ತನೆಯು ಇರುತ್ತದೆ.

ನಮಗೆ ಒಳ್ಳೆಯ ಮತ್ತು ಕೆಟ್ಟ ಆಲೋಚನೆಗಳು ಬರುತ್ತಲೇ ಇರುತ್ತವೆ. ನಾವು ಸುಖ–ದು:ಖಗಳ ಅನುಭವವನ್ನು ಪಡೆದಾಗ ನಮ್ಮ ಮನಸ್ಸಿನಲ್ಲಿ ಭಾವನೆಗಳ ಅಲೆಗಳು ಏಳುತ್ತವೆ. ಶೃಂಗಾರ, ಹಾಸ್ಯ, ಕರುಣೆ, ರೌದ್ರ, ವೀರ, ಭಯಾನಕ, ಭೀಭತ್ಸ ಅದ್ಭುತ, ಶಾಂತ ರಸಗಳು ಉತ್ಪತ್ತಿಯಾಗುವುದು ನಮ್ಮ ಮೆದುಳಿನಲ್ಲಿಯೇ. ವ್ಯಾಪಾರಿ ಮನೋ ಭಾವ, ಉದಾತ್ತ ಭಾವ, ಮೇಧಾವಿ ಆಲೋ ಚನೆಗಳಿಗೆ ಆವಾಸಸ್ಥಾನ ನಮ್ಮ ಮೆದುಳು. ಮೆದುಳು ತನ್ನಲ್ಲಿ ಸ್ವರ್ಗವನ್ನು ನರಕವನ್ನಾಗಿ, ನರಕವನ್ನು ಸ್ವರ್ಗವನ್ನಾಗಿ ಮಾಡಬಲ್ಲುದು.

ಹಾಗಿದ್ದರೆ ನಮ್ಮ ಆಲೋಚನೆಗಳು ನಮಗೆ ಆನಂದವನ್ನು ನೀಡುತ್ತಿವೆಯೇ? ನಾವು ದಿನ ನಿತ್ಯ ಏನನ್ನು ಯೋಚಿಸುತ್ತೇವೆ? ನಮ್ಮ ಸುತ್ತ ಮುತ್ತ ನಡೆಯುವ ಹಿಂಸೆ, ಕೊಲೆ, ಸಂಕಷ್ಟ ಅಶಾಂತಿಗಳ ಬಗ್ಗೆಯೇ ಯೋಚಿಸುತ್ತಾ ಮೆದುಳನ್ನು ನಕಾರಾತ್ಮಕ ವಾಗಿ ಇಟ್ಟುಕೊಳ್ಳುತ್ತಿದ್ದೇವೆಯೆ? ನಮ್ಮ ಕುಟುಂಬ, ವೃತ್ತಿ, ಸಮಾಜದ ಬಗ್ಗೆ ಯಾವಾಗಲೂ ನಕಾ ರಾತ್ಮಕವಾಗಿಯೇ ಮಾತನಾಡುತ್ತಿದ್ದೇವೆಯೇ? ನಾವು ಮಾಡುವ ನೆಗೆಟಿವ್ ಆಲೋಚನೆ ನಮ್ಮನ್ನೇ ನುಂಗಿ ಬಿಡುತ್ತವೆ. ನಮ್ಮ ಮಾನಸಿಕ ಒತ್ತಡಕ್ಕೆ ಕಾರಣವಾಗುತ್ತವೆ.

'ನಾನು ಕಲೆಕ್ಟರ್ ಆಗಬೇಕಿತ್ತು, ನಾನು ಮೆಡಿಕಲ್ ಮಾಡಬೇಕಿತ್ತು, ನಾನು ಕೋಟ್ಯಾಧಿಪತಿ ಆಗಿದ್ದರೆ ನೆಮ್ಮದಿ ಇರುತ್ತಿತ್ತು...' ಹೀಗೆ ಯೋಚಿಸುತ್ತಿದ್ದರೆ ಮನಸ್ಸು ನಕಾರಾತ್ಮಕತೆಯತ್ತ ವಾಲುತ್ತದೆ. ಹಾಗಿ ದ್ದರೆ ಮೆಡಿಕಲ್, ಇಂಜಿನಿಯರಿಂಗ್ ಮಾಡಿದವ ರೆಲ್ಲಾ ನೆಮ್ಮದಿಯಾಗಿದ್ದಾರೆಯೇ? ಹಣ, ಬಂಗಲೆ, ಒಡವೆ, ಆಸ್ತಿ, ಕೀರ್ತಿ.ಪ್ರತಿಷ್ಠೆ,?...... ಇವುಗಳು ಬಹಳ ಜನರಿಗಿರುತ್ತದೆ. ಆದರೆ ಅವರೆಲ್ಲಾ ಸಂತೋಷದಿಂದ ಇದ್ದಾರೆಯೇ?

ಖಂಡಿತಾ ಇಲ್ಲ. ಸಂತೋಷ ಎನ್ನುವುದು ಒಂದು ಮಾನಸಿಕ ಸ್ಥಿತಿ. ಅನೇಕ ಯಶಸ್ವಿ ವ್ಯಕ್ತಿಗಳು ಅನೇಕ ಬಗೆಯ ಒತ್ತಡಗಳಲ್ಲಿ ನರಳುತ್ತಿರುವುದನ್ನು ನೋಡಿದ್ದೇವೆ. ದೊಡ್ಡ ಮನೆ, ಕಾರು, ಬ್ಯಾಂಕ್ ಬ್ಯಾಲೆನ್ಸ್, ಡಬ್ಬಲ್ ಕಾಟ್, ಮೆತ್ತನೆಯ ಹಾಸಿಗೆ, ಎ.ಸಿ, ಪೌಷ್ಟಿಕ ಆಹಾರ ಎಲ್ಲವೂ ಇರುವ ವ್ಯಕ್ತಿ ನಿದ್ರೆಯಿಲ್ಲದೇ ನಿದ್ರೆ ಮಾತ್ರೆಗಳನ್ನು ತೆಗೆದುಕೊಳ್ಳು ತ್ತಿರುತ್ತಾನೆ. ಮತ್ತೊಂದೆಡೆ... ದೇಹ ದಂಡಿಸುವ, ಆ ದಿನದ ಆಹಾರಕ್ಕೆ ಅಂದು ದುಡಿಯುವ ಕೂಲಿ ಕೆಲಸ ಮಾಡುವ ವ್ಯಕ್ತಿ ಮರದ ಕೆಳಗೆ ನೆಮ್ಮದಿಯಾಗಿ ನಿದ್ರಿಸುತ್ತಿರುತ್ತಾನೆ. ಹಾಗಾದರೆ ನಿಜವಾಗಿಯೂ ಯಾರು ಸುಖಿ? ಯಾರಿಗೆ ಮನಸ್ಸಿನಲ್ಲಿ ಪ್ರಶಾಂತತೆ ಇದೆಯೋ ಅವನೇ ನಿಜವಾದ ಸುಖಿಯಲ್ಲವೇ?

ಹಿಂದಿನ ತಲೆಮಾರಿನ ಜನ ಹೇಗೆ ನೆಮ್ಮದಿಯಾಗಿ ಜೀವಿಸುತ್ತಿದ್ದರು? ಅವರಿಗೆ ಇವತ್ತಿನ ಸೌಕರ್ಯ ಗಳಿರಲಿಲ್ಲ. ಆದರೆ ಪ್ರಸ್ತುತ ಜಗತ್ತಿನಲ್ಲಿರುವ ಒತ್ತಡ, ಆತುರ, ದುರಾಸೆಗಳು ಅವರಿಗೆ ಇರಲಿಲ್ಲ. ಆದ್ದರಿಂದ ಅವರು ಸಂತೋಷವಾಗಿ ಜೀವಿಸಲು ಆಗುತ್ತಿತ್ತು. ನಮ್ಮ ತಲೆಯಲ್ಲಿರುವ ಒತ್ತಡ ನಮ್ಮನ್ನು ಜೀವಂತ ಶವವಾಗಿ ಮಾಡಿಬಿಡುತ್ತದೆ.

ಪ್ರಪಂಚದಲ್ಲಿ ಎಲ್ಲಾ ವೃತ್ತಿಗಳೂ ಮುಖ್ಯವೇ. ಯಾವ ಒಂದು ವೃತ್ತಿ ಇಲ್ಲದಿದ್ದರೂ ಕಷ್ಟವೇ. ನಾವು ಮಾಡುತ್ತಿರುವ ವೃತ್ತಿಯ ಬಗ್ಗೆ ನಮಗೆ ಆತ್ಮ ಗೌರವ ಇರಬೇಕು; ಸಂತೃಪ್ತಿ ಇರಬೇಕು. 'ಎಲ್ಲಾ ಸಂಪತ್ತು ಗಳಿಗಿಂತ ದೊಡ್ಡ ಸಂಪತ್ತು ಸಂತೃಪ್ತಿ' ಎಂದು ಭಗವಾನ್ ಬುದ್ಧನ ಧಮ್ಮಪದದಲ್ಲಿ ಹೇಳಲಾಗಿದೆ.

ನನ್ನ ಹಣೇಬರಹ ಚೆನ್ನಾಗಿಲ್ಲ ಎಂದು ಯೋಚಿಸ ಬಾರದು. ಒಂದು ಲೋಟದಲ್ಲಿ ಅರ್ಧದಷ್ಟು ನೀರು ತುಂಬಿದೆ ಎಂದುಕೊಳ್ಳೋಣ. ಅದನ್ನು ನೋಡಿ ಆಶಾವಾದಿಯೊಬ್ಬ ಅರ್ಧ ಲೋಟ ನೀರು ತುಂಬಿದೆ ಎಂದುಕೊಂಡರೆ, ನಿರಾಶಾವಾದಿ ಅರ್ಧ ಲೋಟ ಖಾಲಿ ಇದೆ ಎಂದುಕೊಳ್ಳುತ್ತಾನೆ ಎಂದು ಮನೋ ವಿಜ್ಞಾನ ಹೇಳುತ್ತದೆ.

ಒಂದು ಸಕಾರಾತ್ಮಕ ಮನಸ್ಸು ಎಲ್ಲದರಲ್ಲಿಯೂ ಒಂದು ಅವಕಾಶವನ್ನು ಹುಡುಕಿದರೆ, ಒಂದು ಋಣಾತ್ಮಕ ಮನಸ್ಸು ಎಲ್ಲದರಲ್ಲಿಯೂ ಒಂದು ತಪ್ಪನ್ನು ಹುಡುಕುತ್ತದೆ. ನಮ್ಮ ಬಳಿ ಏನಿಲ್ಲ ಎಂದು ಯೋಚಿ ಸುವುದಕ್ಕಿಂತ, ಏನಿದೆ ಎಂದು ಯೋಚಿಸಿದಾಗ ಮನಸ್ಸಿಗೆ ಆನಂದವಾಗುತ್ತದೆ. ನಾವು ಬದುಕುವುದು ಒಂದೇ ಸಾರಿ. ನಮ್ಮ ಮನಸ್ಸಿನಲ್ಲಿ ಖುಷಿ ತುಂಬಿರ ಬೇಕಾದರೆ 'ಸರ್ವೇ ಜನಾ ಸುಖಿನೋಭವಂತು' ಎಂದುಕೊಳ್ಳಬೇಕೆಂದು ಹಿರಿಯರು ಹೇಳುತ್ತಾರೆ.

ನನಗೆ ದಕ್ಕದ್ದು ಇನ್ನೊಬ್ಬರಿಗೆ ದಕ್ಕಬಾರದು ಅನ್ನುವ ಮನಸ್ಥಿತಿಯೇ ಅಪಾಯಕಾರಿ. ಇನ್ನೊಬ್ಬರ ಅಭಿವೃದ್ಧಿ ಕಂಡು ಸಂತೋಷಪಟ್ಟಲ್ಲಿ ಮನಸ್ಸು ಹಗುರವಾಗುತ್ತದೆ. ಬದಲಾಗಿ ಹೊಟ್ಟೆಕಿಚ್ಚು ಪಟ್ಟಲ್ಲಿ ಖಿನ್ನತೆ, ಆತಂಕ ಗಳಿಂದ ಮಾನಸಿಕ ಆರೋಗ್ಯ ಹಾಳಾಗುತ್ತದೆ. 'ಮನೆ ಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ ನೆರೆಮನೆಯ ಸುಡುವುದೇ ಹೇ ದೇವ' ಎಂದು ಬಸವಣ್ಣನವರು ಹೇಳಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ನಂಬಿಕೆ ಎನ್ನುವುದು ಒಂದು ಟಾನಿಕ್. ನಮ್ಮ ತಲೆಯಲ್ಲಿರುವ ನೆಗೆಟಿವ್ ಆಲೋಚನೆಗಳು ಸಾಯ ದಿದ್ದರೆ ನಮ್ಮ ಮನಸ್ಸು ರೋಗಗ್ರಸ್ಥವಾಗುತ್ತದೆ. ಮನ ಸ್ಸಿಗೆ ಖಾಯಿಲೆ ಬಂದರೆ ದೇಹ ಅನಾರೋಗ್ಯಪೀಡಿತ ವಾಗುತ್ತದೆ. ನಾವು ಉತ್ತಮ ಮನುಷ್ಯ ಸಂಬಂಧ ಗಳನ್ನು ಹೊಂದಿದಾಗ ಮನಸ್ಸು ಆರೋಗ್ಯವಾಗಿ ರುತ್ತದೆ.

'ನಾನು ಸುಸ್ತಾಗಿದ್ದೇನೆ, ಯಾವ ಕೆಲಸವನ್ನೂ ಮಾಡಲಾಗುವುದಿಲ್ಲ' ಎಂದುಕೊಳ್ಳಿ. ಯಾವ ಕೆಲಸ ವನ್ನೂ ಮಾಡದೇ ಸುಮ್ಮನೆ ಕುಳಿತುಬಿಡುತ್ತೇವೆ. ಅದೇ ಸಮಯದಲ್ಲಿ 'ಈ ಕೆಲಸವನ್ನು ಮಾಡಿಯೇ ಮಾಡುತ್ತೇನೆ' ಎಂದುಕೊಳ್ಳಿ. ದೇಹದಲ್ಲಿ ಆ ಕೆಲಸ ಮಾಡಲು ತನಗೆ ತಾನೇ ಚೈತನ್ಯ ಮೂಡಿ ಬರುತ್ತದೆ. ಆತ್ಮ ವಿಶ್ವಾಸ ಇಲ್ಲದಿದ್ದಾಗ ಪ್ರತಿ ಕೆಲಸವೂ ಹುಲಿ ಯಂತೆ ನಮ್ಮನ್ನು ಎದುರಿಸುತ್ತದೆ. ನಮ್ಮ ಎಲ್ಲಾ ಸೋಲುಗಳಿಗೂ ಅಭದ್ರತಾ ಭಾವನೆಯೇ ಕಾರಣ ವಾಗುತ್ತದೆ. ನಾವು ಭಯ ಪಡುವ ಎಷ್ಟೋ ಅಂಶ ಗಳು ನಮ್ಮ ಜೀವನದಲ್ಲಿ ನಡೆಯುವುದೇ ಇಲ್ಲ. ನಾವು ಪ್ರಶಾಂತವಾಗಿ ನಿದ್ರೆ ಮಾಡುತ್ತಿಲ್ಲವೆಂದರೆ ಅದಕ್ಕೆ ಕಾರಣ ನಮ್ಮ ನೆಗೆಟಿವ್ ಆಲೋಚನೆಗಳು.

ಮನಸ್ಸು ಯಾವಾಗಲೂ ಕೋತಿಯಂತೆ ಚಂಚಲ ವಾಗಿರುತ್ತದೆ. 'ಛೆ! ಇಂಥಹ ಕೆಟ್ಟ ಆಲೋಚನೆಗಳು ನನಗೇಕೆ ಬಂದಿತು?' ಅನ್ನಿಸುತ್ತದೆ. ನಮ್ಮ ಜೀವನ ಒಂದು ಯುದ್ಧದಂತೆ. ನಮ್ಮ ದೌರ್ಬಲ್ಯವನ್ನು ಜಯಿಸಿ ಮನವನ್ನು ಅಧೀನದಲ್ಲಿರಿಸಿಕೊಳ್ಳಬೇಕಿದೆ.

ಕಷ್ಟಗಳು ಯಾವ ಕಡೆಯಿಂದಲಾದರೂ ಬಂದು ವಕ್ಕರಿಸಬಹುದು. ಕುಳಿತು ತಾಳ್ಮೆಯಿಂದ ಆಲೋಚಿ ಸಿದರೆ ಯಾವುದಾದರೊಂದು ಹೊಸ ಮಾರ್ಗ ಕಾಣುತ್ತದೆ. ವರ್ತಮಾನದಲ್ಲಿ ಬದುಕುವುದರಿಂದ ಸಮಸ್ಯೆ ತಾನಾಗಿಯೇ ದೂರವಾಗುತ್ತದೆ.

ಕ್ಲೇಶ ನೂರಾಗಿರೆಯುಮಾಶೆಗಳ ಪುನರುದಯ।
ಬೇಸರದ ನುಡಿಯೊಳಂ ಲೇಸುಗಳ ನೆನಪು॥
ಆಶೆ ಸಾಯ್ತೆಂದೊಡಂ ಚೆಲುವೆನಲು ಕಣ್ಣಲೆ
ಮಾಸವೀ ಜೀವಗುಣ ಮಂಕುತಿಮ್ಮ॥

ಎಂದಿದ್ದಾರೆ ಡಿ.ವಿ.ಜಿ ಅವರು. ನಮ್ಮ ನಿರಾಶಾ ದಾಯಕ ಆಲೋಚನೆ ಹೇಗೆ ಬರುತ್ತದೋ ಹಾಗೆಯೇ ಹೋಗುತ್ತದೆ. ಆದರೆ ಅದನ್ನೇ ಹಿಡಿದು ಜಗಿಯುತ್ತಾ ಅಗಿಯುತ್ತಿದ್ದರೆ ಜೀವನ ಹೆಣಭಾರವಾಗುತ್ತದೆ.

ಋಣಾತ್ಮಕ ಆಲೋಚನೆಗಳನ್ನು ನಿಯಂತ್ರಣ ಮಾಡಿ ದಷ್ಟೂ ಮತ್ತೆ ಮತ್ತೆ ಅಪ್ಪಳಿಸುತ್ತದೆ. ಅದಕ್ಕೆ ನಾವು ಮಾಡಬೇಕಿರುವುದು ಒಳ್ಳೆಯ ಆಲೋಚನೆಗಳನ್ನು ಆಲೋಚಿಸುವುದು. ಉತ್ತಮ ಆಲೋಚನೆಗಳು ಹೆಚ್ಚಿ ದಷ್ಟೂ ನಕಾರಾತ್ಮಕ ಆಲೋಚನೆಗಳು ನಶಿಸುತ್ತವೆ.

ಮನೋವಿಜ್ಞಾನಿಗಳ ಪ್ರಕಾರ ಎಲ್ಲಾ ಒತ್ತಡವೂ ನಕಾರಾತ್ಮಕ ಭಾವನೆಯಿಂದ ಉಂಟಾಗುತ್ತದೆ. ಜೀವನ ವನ್ನು ಪಾತಾಳಕ್ಕೆ ತಳ್ಳುವ ಒತ್ತಡವನ್ನು ಮನಸ್ಸಿನಿಂದ ಹೊರ ಹಾಕೋಣ. ಶಾಂತಿಯಿಂದಿರೋಣ ಮತ್ತು ಆಶಾವಾದಿಗಳಾಗೋಣ.

ಕಂಬನಿ ಇರದ ಕಂಗಳಿಲ್ಲ... ಕಷ್ಟವಿರದ ಜೀವನವಿಲ್ಲ...



ಹೇಗೋ ಕಾಲ ನೂಕುತ್ತಾ ಎರಗಿ ಬರುವ ಕಷ್ಟಕಾರ್ಪಣ್ಯಗಳನ್ನು ಒರಗಿ ಅನುಭವಿಸುತ್ತಾ ಸಾಗಿಸುವ ಈ ಜೀವನ ಒಂದು ಹಂತದಲ್ಲಿ ಜೀವಂತಿಕೆ ಇಲ್ಲದೆ ಕೊನೆಗೊಳ್ಳುತ್ತದೆ. ಅದು ಖುಷಿಯ ನಲಿವಲ್ಲಿ–ಕಂಬನಿಯ ಒದ್ದೆಯಲ್ಲಿಯೋ ಒಟ್ಟಿನಲ್ಲಿ ಇತಿಶ್ರೀಯಾಗಿ ನೆಲೆಗಚ್ಚುವುದು. ಅಲ್ಲಿಯವರೆಗೆ ಜೀವನ ಸುಂದರ ಅನುಭವಗಳ ಕಲಾಗುಚ್ಛ, ಪ್ರತಿಕ್ಷಣ, ಪ್ರತಿನಿಮಿಷ, ಪ್ರತಿಗಂಟೆ, ಪ್ರತಿದಿನ ಎಲ್ಲವೂ ಅಮೂಲ್ಯ ಹಾಗೂ ಅತೀ ಮುಖ್ಯವಾದ ಸಂಗತಿ. ಕಳೆದು ಹೋದಗಳಿಗೆ ಕೋಟಿಕೊಟ್ಟರೂ ಸಿಗದ ಅನರ್ಘ್ಯರತ್ನ. ಆದ್ದರಿಂದ ಇರುವಷ್ಟು ಕಾಲ ಜೀವನ ರಥಯಾತ್ರೆಯನ್ನು ಮುನ್ನಡೆಸಬೇಕು.


ಪರಮೇಶ ಕೆ.
ಉತ್ತನಹಳ್ಳಿ,
ಕನ್ನಡ ಉಪನ್ಯಾಸಕರು,
ಮೈಸೂರು.
ಮೊ: 7795862281

ಜೀವನ ಬಹಳ ಅಮೂಲ್ಯ. ಎಲ್ಲಿವರೆಗೆ ಇರುತ್ತದೆ ಎಂದರೆ ಜೀವ ಇರುವವರೆಗೂ ಇರುತ್ತದೆ. ಜೀವ ಇಲ್ಲ ಅಂದರೆ ಜೀವನ ಇಲ್ಲ. ಜೀವಕ್ಕೆ ಮತ್ತೊಂದು ಹೆಸರು ಪ್ರಾಣ; ಪ್ರಾಣ ಎಂದರೆ ಗಾಳಿ. ನಮ್ಮ ಪ್ರಾಣವಾಯು ಅದು ನಿಸರ್ಗದಲ್ಲಿ ಪುಕ್ಕಟೆಯಾಗಿ ಸಿಗುವ ಆದರೆ ಮೌಲ್ಯವನ್ನಾಗಲಿ, ಬೆಲೆಯನ್ನಾಗಲಿ ನಿರ್ಣಯ ಮಾಡಲಾಗದ ಅಮೂಲ್ಯ ಜೀವದ್ರವ್ಯ.

ಮನುಷ್ಯ ಎಂಬ ಜೀವಸಂಕುಲ ಈ ಗಾಳಿಗೆ ಅಷ್ಟು ಬೆಲೆ ಕೊಟ್ಟಿಲ್ಲ. ಏಕೆಂದರೆ ಮೊದಲೇ ಹೇಳಿದಂತೆ ಅದು ಉಚಿತವಾಗಿ ಲಭ್ಯವಾಗುವಂತಹದ್ದು. ಉಚಿತವಾಗಿ ಯಾವುದು ಸಿಗಬಾರದು, ಒಂದು ವೇಳೆ ಪುಕ್ಕಟೆ–ಉಚಿತವಾಗಿ ದೊರೆತರೆ ಅದು ಹಂತ ಹಂತವಾಗಿ ಬೆಲೆ ಕಳೆದುಕೊಳ್ಳುತ್ತಿದೆ ಎಂದೇ ಅರ್ಥ. ಉದಾಹರಣೆಗೆ ಸಮಯ ನಿತ್ಯವು ಉಚಿತವಾಗಿ ದೊರೆಯುವ, ಆದರೆ ಬೆಲೆ ಕಟ್ಟಲಾಗದ ಸಂಪತ್ತು ಎಂದು ತಿಳಿದೂ ಮನುಷ್ಯ ಈ ಸಮಯವನ್ನು ವ್ಯಥಾ ಹರಣ ಮಾಡುತ್ತಾ ಹಾಳು ಮಾಡುತ್ತಿರುವುದು ಇದಕ್ಕೆ ಹೊರತ್ತಲ್ಲ. ಒಂದು ವೇಳೆ ಹಣ ನೀಡಿ ಪಡೆದು ಉಸಿರಾಡುವಂತಿದ್ದರೆ, ಎಷ್ಟು ಬೇಕೋ ಅಷ್ಟೇ ಉಸಿರಾಡುತ್ತಿದ್ದೆವು. ಹಾಗಾಗಿ ನಿಸರ್ಗ ಸುಲಭವಾಗಿ ಮನುಷ್ಯನಿಗೆ ಸಿಕ್ಕಿ ದುರುಪಯೋಗದಲ್ಲಿ ಅವಸಾನಕ್ಕೆ ಒಳಗಾಗುತ್ತಿದೆ.

ಜೀವ ಇರುವವರೆಗೆ ಜೀವನ ಸಾಗುತ್ತಿರುತ್ತದೆ. ಆದರೆ ಜೀವನ ಸಾಗುತ್ತಿರುವಾಗ ನಾವು ಹೇಗೆ ಬದುಕಬೇಕು, ಅದನ್ನು ಮೊದಲು ಅರ್ಥ ಮಾಡಿಕೊಂಡು ಜೀವಿಸಬೇಕು. ಜೀವನ ಎಂಬ ಶಬ್ದದ ಅರ್ಥ ಬಾಳು, ಭೂಮಿ, ನೀರು, ಹಣ ಈ ಶಬ್ದಗಳಿಂದ ಕರೆಸಿಕೊಳ್ಳುವ ಜೀವನವನ್ನು ಕೇವಲ ಹಣ ಎಂಬ ಪದಕ್ಕೆ ಮೀಸಲಾಗಿರಿಸಿ ಜೀವನ ಎಂದರೆ ಹಣವೆಂದರೆ ಜೀವನ ಎಂಬ ಸಂಕುಚಿತವಾಗಿ ಅರ್ಥೈಸಿಕೊಂಡ ಮಾನವನು ತನ್ನ ಜೀವನವನ್ನು ತಾನೇ ಶುಷ್ಕವಾಗಿಸಿಕೊಂಡಿದ್ದಾನೆ.

ಅತೀ ಅಗತ್ಯವಾಗಿ ತಿಳಿಯಬೇಕಾದ ವಿಚಾರವೆಂದರೆ ಜೀವನ ನಡೆಸಲು ಹಣ ಮುಖ್ಯ ನಿಜ. ಆದರೆ ಹಣವೇ ಜೀವನವಲ್ಲ ಎಂಬ ನಿತ್ಯ ಸತ್ಯವನ್ನು ಅರಿಯಬೇಕು. ಹಣದ ಹಿಂದೆ ಬಿದ್ದಿರುವ ಮಾನವ ತನ್ನ ಜೀವನವನ್ನು ನರಕವಾಗಿಸಿಕೊಂಡಿದ್ದಾನೆ. ಜೀವನ ಎಂಬ ಪದದಲ್ಲಿ ಜೀ ಎಂಬ ಅಕ್ಷರ ತೆಗೆದರೆ ವನ ಎಂಬ ಪದ ಉಳಿಯುತ್ತದೆ. ವನ ಎಂದರೆ ಸಮೃದ್ಧವಾದ ತೋಟ; ಹಚ್ಚ–ಹಸಿರಿನಿಂದ ಕಂಗೊಳಿಸುವ ಬನದ ಕಂಪು. ಅಂತೆಯೇ ನಮ್ಮ ಜೀವನವು ಸದಾ ಅರಳುವತ್ತಾ ನಗು ಮನದ ಮಲ್ಲಿಗೆಯಂತಿರಬೇಕೆಂಬುದು ಅರಿತವರ ಮಾತು.

ಬುದ್ಧ ಹೇಳುವುದು ಪ್ರೀತಿಯ ಕಾರುಣ್ಯ– ಶಾಂತ ಭಾವದ ಶಾಂತಿ, ಮಹಾಭಾರತದ ದುರ್ಯೋಧನನಿಗೆ ಛಲದ ಮನೋಭಾವ, ಏಕಲವ್ಯನಿಗೆ ಗುರಿಯ ಗರಿ, ಧರ್ಮರಾಯನಿಗೆ ಧರ್ಮದ ನಿಷ್ಠೆ, ಭೀಷ್ಮನಿಗೆ ಪ್ರತಿಜ್ಞೆಯ ಪ್ರದೀಪ, ಸಂತನಿಗೆ ನಿರ್ವಾಂಚನೀಯ ಭಕ್ತಿ, ಸಿರಿವಂತನಿಗೆ ಕುಡಿದು ತಿಂದು ಬದುಕುವ ಮೋಜು-ಮಸ್ತಿ, ಹಸಿದವನಿಗೆ ತುತ್ತು ಚೀಲ ತುಂಬಿಸುವ ಅರ್ಧ ರೊಟ್ಟಿ, ಬಡವನಿಗೆ ಅನಿವಾರ್ಯವಾಗಿ ಹತ್ತಬೇಕಾದ ಮೇರುಪರ್ವತ ಅವರವರ ಭಾವಕ್ಕೆ, ಅವರರವ ಭಕುತಿಗೆ ಅವರರವಿಗೆಲ್ಲ ಈ ಜೀವನ.

ಹೇಗೋ ಕಾಲ ನೂಕುತ್ತಾ ಎರಗಿ ಬರುವ ಕಷ್ಟಕಾರ್ಪಣ್ಯಗಳನ್ನು ಒರಗಿ ಅನುಭವಿಸುತ್ತಾ ಸಾಗಿಸುವ ಈ ಜೀವನ ಒಂದು ಹಂತದಲ್ಲಿ ಜೀವಂತಿಕೆ ಇಲ್ಲದೆ ಕೊನೆಗೊಳ್ಳುತ್ತದೆ. ಅದು ಖುಷಿಯ ನಲಿವಲ್ಲಿ–ಕಂಬನಿಯ ಒದ್ದೆಯಲ್ಲಿಯೋ ಒಟ್ಟಿನಲ್ಲಿ ಇತಿಶ್ರೀಯಾಗಿ ನೆಲೆಗಚ್ಚುವುದು. ಅಲ್ಲಿಯವರೆಗೆ ಜೀವನ ಸುಂದರ ಅನುಭವಗಳ ಕಲಾಗುಚ್ಛ, ಪ್ರತಿಕ್ಷಣ, ಪ್ರತಿನಿಮಿಷ, ಪ್ರತಿಗಂಟೆ, ಪ್ರತಿದಿನ ಎಲ್ಲವೂ ಅಮೂಲ್ಯ ಹಾಗೂ ಅತೀ ಮುಖ್ಯವಾದ ಸಂಗತಿ. ಕಳೆದು ಹೋದಗಳಿಗೆ ಕೋಟಿಕೊಟ್ಟರೂ ಸಿಗದ ಅನರ್ಘ್ಯರತ್ನ. ಆದ್ದರಿಂದ ಇರುವಷ್ಟು ಕಾಲ ಜೀವನ ರಥಯಾತ್ರೆಯನ್ನು ಮುನ್ನಡೆಸಬೇಕು. ಬಾಳಿನ ದಾರಿ ಏರು, ಪೇರು ಇಲ್ಲಿ ಸಾಗಲೇ ಬೇಕು ನಮ್ಮ ತೇರು. ಬಯಸಿದೆಲ್ಲ ಎಂದು ನಮ್ಮ ಕೈಗೆ ಸಿಕ್ಕದು; ನಾವು ತಂದ ಪುಣ್ಯವು ಎಷ್ಟೋ ಅಷ್ಟೇ ನಮ್ಮದು ಚಿಂತಿಸಬೇಡ ಮನವೇ ದಾರಿ ಸಾಗಿಸು. ಸಿನಿಮಾ ಗೀತೆ ಒಂದು ಇದನ್ನೇ ಹೇಳುತ್ತಿದೆ.

ಕಣ್ಣು ತೆರೆದರೆ ಜನನ,
ಕಣ್ಣು ಮುಚ್ಚಿದರೆ ಮರಣ,
ಅಲುಗಾಟವೇ ಜೀವನ

ವರಕವಿ ಬೇಂದ್ರೆಯವರು ತಮ್ಮ ಕವನವೊಂದರಲ್ಲಿ ಸರಸವೇ ಜನನ, ವಿರಸವೇ ಮರಣ, ಸಮರಸವೇ ಜೀವನ ಎಂದು ಸಾಮರಸ್ಯತನದ ಭಾವವನ್ನು ಸಾರುವ ಈ ಕವಿತೆಯ ಅಂತರ್ಯದಲ್ಲಿ ಕದನವು ಇರಲಿ, ಕವನವೂ ಇರಲಿ ಎಲ್ಲದಕು ಇತಿ ಇರಲಿ ಮಿತಿ ಇರಲಿ ಹೊಂದಾಣಿಕೆಯೊಂದಿಗೆ ಜೀವನ ಅರಳುತ್ತಿರಲಿ.

ಜೀವನದಲ್ಲಿ ಕಷ್ಟ ಬಂದಾಗ ಕುಗ್ಗಬಾರದು, ಸುಖ ಬಂದಾಗ ಹಿಗ್ಗಬಾರದು. ನೋವು ನಲಿವುಗಳು ಎದುರಾದಾಗ ಒಂದೇ ದೃಷ್ಟಿಯ ಮನೋಭಾವದಲ್ಲಿ ಸ್ವೀಕರಿಸಿ ಸಮಚಿತ್ತತೆಯನ್ನು ಕಾಯ್ದುಕೊಳ್ಳಬೇಕು. ಜೀವನವನ್ನು ಅತ್ಯಂತ ವಿಸ್ತಾರದ ನೆಲೆಯಲ್ಲಿ ಬಿಂಬಿಸಿದ ಬೇಂದ್ರೆಯವರ ಬೆಲೆ ಉಳ್ಳ ಮಾತಿಗೆ ಇಂಬುಕೊಡು ವಂತೆ ಜೀವನ ಏರು ಪೇರಿನ ಗಾಯನ, ಒಮ್ಮೆ ಸೋಲು, ಒಮ್ಮೆ ಗೆಲುವು, ಒಮ್ಮೆ ಸರಸ, ಒಮ್ಮೆ ವಿರಸ, ಜೊತೆ ಸರಳ ವಿರಳ ಬೆಸುಗೆ ಇದು ಜೀವನ ಎಂಬ ಸಾಲುಗಳ ಸಹ ಜೀವನದ ವ್ಯಾಖ್ಯಾನಕ್ಕೆ ನಿಲುಕುತ್ತವೆ.

ಶ್ರುತಿಯಲಿದ್ದರೆ ತಂತಿ ನೂರೊಂದು ಮುದ ಭಾವ
ಇಲ್ಲದಿರೆ ಮನ ಮಿಡಿವ ರಾಗದಲೆ ಎಲ್ಲಿ?
ಬಿಗಿತ ಸಡಿಲತೆಯಿಂದ ತಂತು ಸುಖ ಈ ಎದೆಗೆ
ಬದುಕು ವೀಣೆಯ ನಾದ– ಮುದ್ದುರಾಮ

ಬದುಕಿನ ವ್ಯಾಖ್ಯಾನಕ್ಕೆ ರೂಪಕವಾಗಿ ನಿಂತ ಈ ಸಾಲುಗಳು ಜೀವನ ಶೃತಿ ಬೆರೆತ ನಾದನವನೀತ ವೆಂದು ಭಾವಿಸಿದ ಕವಿ ಕೆ.ಸಿ.ಶಿವಪ್ಪ ಅವರು ಹಾಡಿನ ಬಗೆಯಲ್ಲಿ ಜೀವನವನ್ನು ಕಂಡಿದ್ದಾರೆ. ಅಂತೆಯೇ ಜೀವನ ಹಾಡಾದರೆ ಹಾಡುವ ಭಾವ ಕೆಡಬಾರದು, ರಾಗ–ತಾಳ–ಶ್ರುತಿ–ಸ್ವರ ಎಲ್ಲವೂ ಒಂದು ಲಯಬದ್ಧವಾದ ಚೌಕಟ್ಟಿಗೆ ಒಳಪಟ್ಟರೆ ಜೀವನದ ಹಾಡನ್ನು ಆಲಿಸಲು ಸವಿಯಾಗಿ, ಮಾಧುರ್ಯವಾಗಿರುತ್ತದೆ. ಒಮ್ಮೊಮ್ಮೆ ಹಾಡಲು ಬಾರದೆಯೋ ಅಥವಾ ಹಾಡು ಒಂದು ಹಂತದಲ್ಲಿ ಯಾವುದೋ ಒಂದು ಮೂಲೆಯಲ್ಲಿ ಕೆಟ್ಟು ಹೋಯಿತು ಎಂದು ಹಾಡುವುದನ್ನೇ ನಿಲ್ಲಿಸಬಾರದು. ಗಾಯನ ಗಾನವಾಗಿರಲಿ ಅಥವಾ ಇಲ್ಲದೆ ಇರಲಿ ಒಟ್ಟಿನಲ್ಲಿ ಅನಿವಾರ್ಯವಾಗಿ ಹಾಡುತ್ತಲೇ ಜೀವನದ ರಾಗಕ್ಕೆ ದನಿ ಆಗಲೇ ಬೇಕು. ಜೀವನವೆಂಬುದು ನೂರು ಪುಟದ ಪುಸ್ತಕ. ಮೊದಲನೆ ಪುಟವನ್ನು ಕೊನೆಯ ಪುಟವನ್ನು ಭಗವಂತನೇ ಬರೆದಿದ್ದಾನೆ ಮೊದಲ ಪುಟದಲ್ಲಿ ಜನನ, ಕೊನೆಯ ಪುಟದಲಿ ಮರಣ ಎಂದು ಬರೆದು ನಡುವೆ ಇರುವ ಉಳಿದ ತೊಂಬತ್ತೆಂಟು ಪುಟಗಳನ್ನು ಖಾಲಿ ಉಳಿಸಿದ್ದಾನೆ. ಆ ತೊಂಬತ್ತೆಂಟು ಪುಟಗಳನ್ನು ಮುದ್ದಾದ ಅಕ್ಷರಗಳಿಂದ ಬರೆದರೆ ಮಹಾಕಾವ್ಯವಾಗುತ್ತದೆ. ಇಲ್ಲವಾದರೆ ರದ್ದಿ ಕಾಗದವಾಗುತ್ತದೆ. ಏನೇನೋ ಬರೆದುಕೊಂಡು ಏನೇನೋ ಆಗುವುದಕ್ಕಿಂತ ಶುದ್ಧವಾದ ಅಕ್ಷರಗಳನ್ನು ಪೋಣಿಸಿ ಎಲ್ಲರೂ ಓದುವ ಎಲ್ಲರೂ ಸ್ಫೂರ್ತಿಗೊಳಿಸುವ ಮಹಾಕೃತಿಯಾದರೆ ಬದುಕು ನಿಜದಲ್ಲಿ ಸಾರ್ಥಕವಾಗುತ್ತದೆ.

ಇದ್ದು ಸಾಯುವುದಕ್ಕಿಂತ ಸತ್ತು ಬದುಕಬೇಕು. ನಮ್ಮ ಜೀವನ ಶ್ಮಶಾನವಾಗುವುದಕ್ಕಿಂತ ಶಾಸನವಾಗಬೇಕು. ಬೆಂಕಿ ಹಚ್ಚುವುದು ಸುಲಭ ಆದರೆ ಬೆಳಕಾಗುವುದು ಕಷ್ಟ, ಅಂತೆಯೇ ನಮ್ಮ ಜೀವನ ಮತ್ತೊಬ್ಬರಿಗೆ ಬೆಳಕಾಗಿ ದಾರಿದೀಪವಾಗಬೇಕು. ಜೀವನ ಎಂಬುದೇನು ಹೊಸದೆ ಅದು ಎಲ್ಲರೂ ನಡೆದು ಹಾದಿ ಇದ್ದಷ್ಟು ಕ್ರಮಿಸಿ ಸವೆಸಿ ಹೋಗುವ ಪಾದರಕ್ಷೆ. ನಾಳೆಗಾಗಿ, ಬರುವವರಿಗಾಗಿ, ಉಳಿದವರಿಗಾಗಿ ಪಾದರಕ್ಷೆಯನ್ನು ಇಲ್ಲಿಯೇ ಬಿಟ್ಟು ಹೋಗಲೇಬೇಕು.

ಜೀವನವೆಂಬುದು ಕನ್ನಡಿ ಇದ್ದ ಹಾಗೆ ನಾವು ಹೇಗೆ ಇರುತ್ತೇವೆಯೋ ಹಾಗೆ ತೋರುತ್ತದೆ. ಕಾಣುವ ಕಣ್ಣಿಗೆ ಕಾಣುವ ಮನದ ಇಚ್ಛೆಗೆ ದಕ್ಕಿದ ಹೆಜ್ಜೆಗಳನ್ನು ಮತ್ತೊಂದು ಬಗೆಯ ಹೆಜ್ಜೆಗಳಾಗಿ ಕಾಣಬಾರದು. ಬಂದುದೆಲ್ಲವೂ ಬರಲಿ ಭಗವಂತನ ಅನುಗ್ರಹವೊಂದಿರಲಿ ಎಂದು ವಿಶ್ವಾಸದಿಂದ ಬದುಕಿದ್ದೇ ಆದರೆ ನಮ್ಮ ಜೀವನ ಮತ್ತೊಬ್ಬರಿಗೆ ದಾರಿದೀಪದ ಬೆಳಕಾಗುತ್ತದೆ. ಕಂಬನಿ ಇರದ ಕಂಗಳಿಲ್ಲ, ಕಷ್ಟವಿರದ ಜೀವನವಿಲ್ಲ. ಇರುವೆಯ ಭಾರ ಇರುವೆಗೆ ಆನೆಯ ಭಾರ ಆನೆಗೆ ನಮ್ಮ ಭಾರ ನಾವೇ ಹೊರಬೇಕು. ನಿಜ, ಆದರೆ ಆ ಭಾರವನ್ನು ಭಾರವೆಂದು ಬಗೆಯದೇ ಸುಗಂಧವನ್ನು ಸೂಸುವ ಹೂವಿನ ಹಾರವೆಂದು ತಿಳಿಯಬೇಕು ಆಗ ಮಾತ್ರ ಬದುಕು ನರಳದೆ ಅರಳುವುದು. ಇಲ್ಲವಾದರೆ ನರಳಿಕೆಯ ನೋವಿನಲ್ಲಿ ಇದ್ದು, ಬಿದ್ದು, ಪ್ರತಾಪಕ್ಕೆ ಇಳಿದು ಮೇಲೆಳ ದಂತೆ ಗೆದ್ದಲುಗಳು ಮುಕ್ಕುವ ಆಹಾರವಾಗಬೇಕಾ ಗುತ್ತದೆ. ಇವತ್ತಿನ ಬಹುಪಾಲು ಮಕ್ಕಳಲ್ಲಿ ಆಸಕ್ತಿ–ಉತ್ಸಾಹ–ಕಳೆಗುಂದಿದ ಛಾಯೆ ಎದ್ದು ಕಂಡು ಬಂದು ಬದುಕೆಂದರೆ ಮೋಜು ಮಸ್ತಿಗಷ್ಟೆ ಸೀಮಿತ ಮಾಡಿಕೊಂಡಿರುವುದು ಒಂದು ಬಗೆಯ ದುರಂತ.

ಇರುಳು ಅಳಿಯದ ಹೊರತು ಹಗಲು ಅರಳುವುದೇ,
ಹಗಲು ಅರಳದ ಹೊರತು ಬೆಳಕು ಚಿಗುರುವುದೇ,
ಬೆಳಕು ಚಿಗುರದ ಹೊರತು ಮನವು ನಲಿವುದೇ,
ಮನವು ನಲಿಯದ ಹೊರತು ಜೀವನ ಗೆಲುವುದೇ,
ಜೀವನ ಗೆಲ್ಲದ ಹೊರತು ಬದುಕು ನಿರರ್ಥಕ,
ಭಾವಜೀವ ಜೋಗುಳವಾಡಿ ತೂಗುವುದು
ಬದುಕಿನ ತೊಟ್ಟಿಲನು ಎಂದಳು ನನ್ನವ್ವ ಸಾಕವ್ವ

ಬೆಳಕಿನ ಬಯಲಲ್ಲಿ ಬದುಕಿನ ಬಳ್ಳಿಯನ್ನು ನೆಟ್ಟು ಸಾಧನೆಯ ಫಲಗಳನ್ನು ಬೆಳೆದಾಗ ಆ ಫಲ ಇನ್ನಿತರು ಸವಿದು, ಅದು ಮಾಧುರ್ಯವನ್ನು ಹಂಚಲು ಸಾಧ್ಯವಾಗುತದೆ. ಫಲ ಬಿಟ್ಟ ಮರ ನೆರಳು ನೀಡಿ, ಫಲವ ನೀಡಿ ಹೋದಾಗಲ್ಲಿ ತನ್ನ ಬದುಕನ್ನು ಸಾರ್ಥಕಗೊಳಿಸಿಕೊಳ್ಳುವಂತೆ ಮಾನವನ ಸಹ ಹುಟ್ಟಿದ ಹುಟ್ಟನ್ನು ಸಾರ್ಥಕಗೊಳಿಸಿಕೊಂಡಾಗ ಬೆಲೆ, ಮೌಲ್ಯ ದ್ವಿಗುಣವಾಗುತ್ತದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ

ಮಂಗಳವಾರ 7 ಮೇ 2024

ಕೆಆರ್‌ಎಸ್‌ನಲ್ಲಿ ಉದ್ಘಾಟನೆಗೆ ಸಿದ್ಧಗೊಂಡಿರುವ ನಾಲ್ವಡಿ, ಸರ್ ಎಂ.ವಿ ಪ್ರತಿಮೆಗಳು





ಶ್ರೀರಂಗಪಟ್ಟಣ, ಮೇ 6(ವಿನಯ್ ಕಾರೇಕುರ)– ಪ್ರತಿನಿತ್ಯ ಸಾವಿರಾರು ಪ್ರವಾಸಿಗರನ್ನು ಸೆಳೆಯುವ ಬೃಂದಾವನ ಉದ್ಯಾನವನ ಮತ್ತು ಕೃಷ್ಣರಾಜ ಸಾಗರ (ಕೆಆರ್‌ಎಸ್) ಅಣೆಕಟ್ಟೆಗೆ ಭೇಟಿ ನೀಡುವವರು ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಸರ್ ಎಂ.ವಿಶ್ವೇಶ್ವರಯ್ಯ ಅವರ ಆಕರ್ಷಕ ಪ್ರತಿಮೆಗಳನ್ನು ವೀಕ್ಷಿಸುವ ಅವಕಾಶ ಶೀಘ್ರದಲ್ಲೇ ಪಡೆಯಲಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

2018ರಲ್ಲಿ ಕೆ.ಆರ್.ಸಾಗರ ಅಣೆಕಟ್ಟೆಯ ದಕ್ಷಿಣ ದ್ವಾರದ ಮುಂಭಾಗದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಸರ್.ಎಂ.ವಿಶ್ವೇಶ್ವರಯ್ಯ ಪ್ರತಿಮೆ ಪ್ರತಿಷ್ಠಾಪನೆ ಕಾರ್ಯ ಆರಂಭವಾಗಿದ್ದು, ಇದೀಗ ಪ್ರತಿಮೆಗಳ ಕೆತ್ತನೆ ಕಾರ್ಯ ಮುಕ್ತಾಯವಾಗಿ ಅವುಗಳನ್ನು ಬಿಳಿ ಬಟ್ಟೆಯಿಂದ ಮುಚ್ಚಿ, ಮಂಟಪಗಳನ್ನು ಹಸಿರು ಹೊದಿಕೆಯಿಂದ ಮರೆ ಮಾಡಲಾಗಿದೆ. ಸುಮಾರು 8.5 ಕೋಟಿ ವೆಚ್ಚದಲ್ಲಿ ಈ ಪ್ರತಿಮೆಗಳ ನಿರ್ಮಾಣಕ್ಕೆ ಟೆಂಡರ್ ಪಡೆದಿದ್ದ ಹೆಚ್.ಎಸ್. ರಮೇಶ್ ಮಾಲೀಕತ್ವದ ಹೆಚ್.ಎಸ್.ಆರ್ ಕಂಪನಿಯು ಮೈಸೂರು ನಗರದ ಕೆ.ಆರ್.ಸರ್ಕಲ್‌ನಲ್ಲಿ ನಿರ್ಮಿಸಿರುವ ಮಾದರಿಯಲ್ಲೇ ಕೆ.ಆರ್. ಸಾಗರದಲ್ಲೂ ಮಂಟಪಗಳನ್ನು ನಿರ್ಮಿಸಲಾಗಿದೆ. ಮಂಡ್ಯ ಜಿಲ್ಲೆಯ ರೈತರನ್ನು ನೋಡುವಂತೆ ಪೂರ್ವಾಭಿಮುಖವಾಗಿ 2.6 ಅಡಿ ಪೀಠ ಸೇರಿದಂತೆ 9.4 ಅಡಿ ಎತ್ತರದ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ತಾನು ವಿನ್ಯಾಸ ಮಾಡಿದ ಅಣೆಕಟ್ಟೆಯನ್ನು ನೋಡುತ್ತಿರುವಂತೆ 2.6 ಅಡಿ ಪೀಠ ಸೇರಿದಂತೆ 8.8 ಅಡಿ ಎತ್ತರದ ಸರ್.ಎಂ.ವಿಶ್ವೇಶ್ವರಯ್ಯ ಪ್ರತಿಮೆಯನ್ನು ನಿಲ್ಲಿಸಲಾಗಿದೆ. ನಾವು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರಿಂದಲೂ ಸಲಹೆ ಪಡೆದಿದ್ದೇವೆ. ಮಂಟಪಗಳ ವಿನ್ಯಾಸ ಮತ್ತು ನಿರ್ಮಾಣ ಮತ್ತು ಪ್ರತಿಮೆಗಳನ್ನು ಪ್ರಮೋದಾದೇವಿ ಅವರ ಅಂತಿಮ ತೀರ್ಮಾನದಂತೆಯೇ ನಿರ್ಮಿಸಲಾಗಿದೆ. ನಾಲ್ವಡಿಯವರ ಪ್ರತಿಮೆ ಉತ್ತಮವಾಗಿ ಮೂಡಿ ಬಂದಿದೆ ಎಂದು ಕಾವೇರಿ ನೀರಾವರಿ ನಿಗಮದ ಎಇಇ ಅಬು ಫರೂಖ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.



ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್



ಸರ್ ಎಂ. ವಿಶ್ವೇಶ್ವರಯ್ಯ

ಎರಡೂ ಪ್ರತಿಮೆಗಳ ಕೆಳಭಾಗದಲ್ಲಿ 900 ಚದರಡಿ ವಿಸ್ತೀರ್ಣದಲ್ಲಿ ಮ್ಯೂಸಿಯಂ ರೀತಿ ಅಣೆಕಟ್ಟೆ ನಿರ್ಮಾಣ ಕುರಿತು ಮಾಹಿತಿ ಮತ್ತು ನಿರ್ಮಾಣದ ಸಮಯದ ಬೃಹತ್ ಫೋಟೋಗಳನ್ನು ಪ್ರದರ್ಶನ ಮಾಡಲಾಗುತ್ತದೆ.

ಎರಡು ಮಂಟಪದಲ್ಲಿ ಇನ್ನೂ ಸ್ವಲ್ಪ ಕೆಲಸಗಳು ಬಾಕಿ ಇದ್ದು, ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಚುನಾವಣೆ ಫಲಿತಾಂಶ ಬಂದ ನಂತರ ಉದ್ಘಾಟನೆಯಾಗುವುದು ಎಂದು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ತಿಳಿಸಿದರು. ರಾಜಸ್ಥಾನದ ಜೈಪುರದಲ್ಲಿ ಪ್ರತಿಮೆಗಳನ್ನು ರಚಿಸಲಾಗಿದೆ. ಆರಂಭದಲ್ಲಿ ನಾವು ನಾಲ್ವಡಿಯವರ ಪ್ರತಿಮೆ 3 ಟನ್‌ಗಳಷ್ಟು ತೂಕವಿರುತ್ತದೆ ಎಂದು ಅಂದಾಜಿಸಿದೆವು. ಆದರೆ, ಪ್ರತಿಮೆಯ ತೂಕವು 7 ಟನ್‌ಗಳಿಗೆ ಏರಿತು. ಸರ್ ಎಂವಿ ಅವರ ಪ್ರತಿಮೆಯು ತೂಕದಲ್ಲಿ ಸ್ವಲ್ಪ ಹಗುರವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರ ಮಣಿಪಾಲ್ ಆಸ್ಪತ್ರೆಗೆ ಭೇಟಿ ನೀಡಿ, ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ಆರೋಗ್ಯ ವಿಚಾರಿಸಿ, ಶೀಘ್ರ ಗುಣಮುಖರಾಗುವಂತೆ ಹಾರೈಸಿದರು.

ವಿ.ಶ್ರೀನಿವಾಸ ಪ್ರಸಾದ್ ಮಾತೃ ಹೃದಯ ಹೊಂದಿದ್ದ ಸಜ್ಜನ ರಾಜಕಾರಣಿ

ಶ್ರೀ ಉರಿಲಿಂಗಿ ಪೆದ್ದಿ ಮಹಾಸಂಸ್ಥಾನ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ನುಡಿ ನಮನ

ಮೈಸೂರು, ಮೇ 6(ಪಿಎಂ)– ವಿ.ಶ್ರೀನಿವಾಸ ಪ್ರಸಾದ್ ಅವರು ಮುತ್ಸದ್ದಿ ರಾಜಕಾರಣಿ ಮಾತ್ರವಲ್ಲ, ಅವರೊಬ್ಬ ಸಮಾಜ ಸುಧಾರಕರು. ಅವರು ತಾಯ್ತನ ಹಾಗೂ ಮಾತೃ ಹೃದಯ ಹೊಂದಿದ್ದ ಸಜ್ಜನ ರಾಜಕಾರಣಿ ಎಂದು ಮೈಸೂರಿನ ಗಾಂಧಿನಗರದ ಶ್ರೀ ಉರಿಲಿಂಗಿ ಪೆದ್ದಿ ಮಹಾ ಸಂಸ್ಥಾನ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ನುಡಿ ನಮನ ಸಲ್ಲಿಸಿದರು.

ಮೈಸೂರಿನ ಗಾಂಧಿನಗರದ ಶ್ರೀ ಉರಿಲಿಂಗಿ ಪೆದ್ದಿ ಮಹಾಸಂಸ್ಥಾನ ಮಠದಲ್ಲಿ 'ವಿ.ಶ್ರೀನಿವಾಸ ಪ್ರಸಾದ್ ಅವರಿಗೆ ಭಾವಪೂರ್ಣ ನಮನಗಳು' ಶೀರ್ಷಿಕೆ ಯಡಿ ಸೋಮವಾರ ಹಮ್ಮಿಕೊಂಡಿದ್ದ ನುಡಿ ನಮನ ಕಾರ್ಯಕ್ರಮದ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ಸಮಾಜ ಸುಧಾರಣೆಯ ಗುಣವನ್ನು ನಾವು ಪ್ರಸಾದ್ ಅವರಿಂದ ಕಲಿತುಕೊಳ್ಳಬೇಕು. ಅವರ ಪಕ್ಷ ತೆಗೆದುಕೊಂಡು ನಾವೇನು ಮಾಡಬೇಕು. ಪಕ್ಷಗಳು ಬರುತ್ತವೆ, ಹೋಗುತ್ತವೆ. ಇನ್ನು ಮುಂದಾದರೂ ಈ ರಾಜ್ಯದಲ್ಲಿ ಪಕ್ಷ ರಾಜಕಾರಣ ಬಿಟ್ಟು ವ್ಯಕ್ತಿಯ ವ್ಯಕ್ತಿತ್ವದ ಘನತೆ ಬಗ್ಗೆ ನಾವು ಆಲೋಚನೆ ಮಾಡಬೇಕು ಎಂದು ತಿಳಿಸಿದರು.



ಶ್ರೀ ಉರಿಲಿಂಗಿ ಪೆದ್ದಿ ಮಠದಲ್ಲಿ ಸೋಮವಾರ ವಿ.ಶ್ರೀನಿವಾಸಪ್ರಸಾದ್ ಅವರ ನುಡಿನಮನ ಕಾರ್ಯಕ್ರಮ ನಡೆಯಿತು.

ಪ್ರಗತಿಪರ ಚಿಂತಕ ಪ್ರೊ.ಕಾಳೇಗೌಡ ನಾಗವಾರ ಮಾತನಾಡಿ, ಬೂಸಾ ಪ್ರಕರಣ ಸಂಬಂಧ ಬಿ.ಬಸವಲಿಂಗಪ್ಪನವರು ಇಡೀ ಕನ್ನಡ ಸಾಹಿತ್ಯವನ್ನೇ ಬೂಸಾ ಎಂದು ಹೇಳಿರಲಿಲ್ಲ. ಸಾಹಿತ್ಯದಲ್ಲೂ ಬೂಸಾ ಇರಬಹುದು. ಬರೆಯುವವರು ಅವಿವೇಕವನ್ನೂ ಬರೆದಿರಬಹುದು. ಹಾಗಾಗಿ ನಮ್ಮಲ್ಲಿ ವಿವೇಕ ಇರಬೇಕೆಂದಷ್ಟೇ ಹೇಳಿದ್ದರು. ಆದರೆ ಜಾತಿವಾದಿಗಳು ಕನ್ನಡ ಸಾಹಿತ್ಯವನ್ನೇ ಬೂಸಾ ಎಂದಿದ್ದಾರೆ ಎಂದು ಬಿಂಬಿಸಿದರು. ಈ ಪರಿಸ್ಥಿತಿಯಲ್ಲಿ ಬಸವಲಿಂಗಪ್ಪರ ಪರವಾಗಿ ಪ್ರಸಾದ್ ದೊಡ್ಡ ಹೋರಾಟ ಸಂಘಟಿಸಿದರು ಎಂದು ಸ್ಮರಿಸಿದರು.

ಹಿರಿಯ ಪತ್ರಕರ್ತ ಅಂಶಿಪ್ರಸನ್ನ ಕುಮಾರ್ ಮಾತನಾಡಿ, ಪ್ರಸಾದ್ ಅವರು ಬುದ್ಧ, ಬಸವ ಮತ್ತು ಅಂಬೇಡ್ಕರ್ ಆಶಯದಂತೆ ಬದುಕಿದವರು. 6 ಬಾರಿ ಸಂಸದರಾಗಿ 7 ಪ್ರಧಾನಿಗಳ ಕಾರ್ಯವೈಖರಿಯನ್ನು ಹತ್ತಿರದಿಂದ ಕಂಡವರು. 2 ಬಾರಿ ಶಾಸಕರಾಗಿ, ರಾಜ್ಯದಲ್ಲಿಯೂ ಮಂತ್ರಿಯಾಗಿ ಮನಸ್ವಿನಿ ಯಂತಹರ ಜನಪರ ಯೋಜನೆ ರೂಪಿಸಿದರು ಎಂದು ತಿಳಿಸಿದರು.

ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಪ್ರಸಾದ್ ಅವರ ಆದರ್ಶದಡಿ ಮುನ್ನಡೆದರೆ ಸಮುದಾಯ ಶ್ರೇಯೋಭಿವೃದ್ಧಿ ಸಾಧ್ಯವಾಗಲಿದೆ. ರಾಜ್ಯದ ವಿವಿಧ ಭಾಗಗಳಿಂದ ಅಪಾರ ಸಂಖ್ಯೆಯಲ್ಲಿ ಜನತೆ ಭಾಗವಹಿಸುವಂತೆ ದೊಡ್ಡ ಮಟ್ಟದಲ್ಲಿ ಪ್ರಸಾದ್ ಅವರ ಶ್ರದ್ಧಾಂಜಲಿ ಕಾರ್ಯಕ್ರಮ ಆಯೋಜನೆ ಮಾಡಬೇಕು ಎಂದು ಹೇಳಿದರು.

ಹಿರಿಯ ಪತ್ರಕರ್ತ ಶಿವಕುಮಾರ್ ಮಾತನಾಡಿ, ಪ್ರಸಾದ್ ಅಗಲಿಕೆಯು ಸಮುದಾಯದಲ್ಲಿ ನಾಯಕತ್ವದ ಕೊರತೆ ಉಂಟು ಮಾಡಿದಂತಾಗಿದೆ. ಮುಂದೆ ಸಮುದಾಯ ಮುನ್ನಡೆಸುವ 2ನೇ ಹಂತದ ನಾಯಕತ್ವ ಬೆಳೆಸುವಂತಹ ಜವಾಬ್ದಾರಿ ನಮ್ಮ ಮೇಲಿದೆ. ಇಡೀ ಸಮುದಾಯ ಭಿನ್ನಾಭಿಪ್ರಾಯ ಮರೆತು ಒಂದಾಗಬೇಕು. ಮೈಸೂರಿನ ಪ್ರಮುಖ ವೃತ್ತಕ್ಕೆ ಪ್ರಸಾದ್ ಅವರ ಹೆಸರು ನಾಮಕರಣ ಮಾಡಬೇಕು. ಜೊತೆಗೆ ಸಮುದಾಯದ ಜನರು ದೇಣಿಗೆ ಸಂಗ್ರಹಿಸಿ ವೃತ್ತದಲ್ಲಿ ಅವರ ಪ್ರತಿಮೆ ನಿರ್ಮಿಸಬೇಕು. ಇದಕ್ಕಾಗಿ ಸರ್ಕಾರದ ಮೇಲೆ ಅವಲಂಭಿತವಾಗಬಾರದು ಎಂದು ಮನವಿ ಮಾಡಿದರು.

ಮೈಸೂರು ವಿವಿ ಡಾ.ಬಿ.ಆರ್.ಅಂಬೇಡ್ಕರ್ ಕೇಂದ್ರದ ನಿರ್ದೇಶಕ ಪ್ರೊಜೆ.ಸೋಮಶೇಖರ್ ಮಾತನಾಡಿ, 2000 ಸಾಲಿನಲ್ಲಿ ಗಂಗೋತ್ರಿಯಲ್ಲಿ ಅಂಬೇಡ್ಕರ್ ಕೇಂದ್ರ ಪ್ರಾರಂಭಗೊಂಡಿತು. ಅಂದು ಎಸ್.ಎನ್. ಹೆಗ್ಡೆ ಕುಲಪತಿಯಾಗಿದ್ದರು. ಜಾಗ ಕಲ್ಪಿಸಿಕೊಟ್ಟರೆ, ಅಂಬೇಡ್ಕರ್ ಕೇಂದ್ರದ ಕಟ್ಟಡ ನಿರ್ಮಾಣಕ್ಕೆ ವ್ಯವಸ್ಥೆ ಮಾಡುವುದಾಗಿ ಅವರಿಗೆ ಪ್ರಸಾದ್ ಹೇಳಿದ್ದರು. ಇಂದು ಅಂಬೇಡ್ಕರ್ ಕೇಂದ್ರ ರಾಜ್ಯ-ರಾಷ್ಟ್ರ ಮಟ್ಟದಲ್ಲಿ ಉತ್ತಮ ಹೆಸರು ಗಳಿಸಿದೆ. ಇದಕ್ಕೆಲ್ಲಾ ಕಾರಣ ವಿ.ಶ್ರೀನಿವಾಸ ಪ್ರಸಾದ್ ಎಂದು ಸ್ಮರಿಸಿದರು. ಮುಖಂಡರಾದ ಅಹಿಂದ ಜವರಪ್ಪ ಅಮ್ಮ ರಾಮಚಂದ್ರ ಮಲ್ಲುಂಡಿ ಮಹದೇವಸ್ವಾಮಿ, ಶಿವಕುಮಾರ್ ಇತರರಿದ್ದರು.

ಲೈಂಗಿಕ ದೌರ್ಜನ್ಯ ಪ್ರಕರಣ

ಆರೋಪಿ ಪ್ರಜ್ವಲ್ ರೇವಣ್ಣ ಸಂಪರ್ಕ ಕಡಿತ!

ರಾಜ್ಯದಲ್ಲಿನ ಎರಡನೇ ಹಂತದ ಚುನಾವಣೆ ನಂತರ ಇಲ್ಲವೇ ಏಳು ಹಂತದ ಮತದಾನ ಪೂರ್ಣಗೊಂಡ ನಂತರವಷ್ಟೇ ಸ್ವದೇಶಕ್ಕೆ ಮರಳುವ ಸಾಧ್ಯತೆ




ಬೆಂಗಳೂರು, ಮೇ 6(ಕೆಎಂಶಿ)– ಲೈಂಗಿಕ ದೌರ್ಜನ್ಯ ಪ್ರಕರಣದ ಆರೋಪಿ ಸಂಸದ ಪ್ರಜ್ವಲ್ ರೇವಣ್ಣ ಅವರ ಸಂಪರ್ಕ ಪೂರ್ಣವಾಗಿ ಕಡಿತಗೊಂಡಿದೆ ಎಂದು ಹೇಳಲಾಗುತ್ತಿದೆ.

ಹಾಸನ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯೂ ಆಗಿರುವ ಪ್ರಜ್ವಲ್ ರೇವಣ್ಣ ಮತದಾನ ಪ್ರಕ್ರಿಯೆ ಮುಗಿಯುತ್ತಿದ್ದಂತೆ ಜರ್ಮನಿಗೆ ತೆರಳಿದ್ದರು. ಅವರ ವಿರುದ್ಧ ರಾಜ್ಯ ಸರ್ಕಾರ ಪ್ರಕರಣ ದಾಖಲಿಸಿ ಎಸ್‌ಐಟಿ ರಚನೆ ಮಾಡಿದ್ದಲ್ಲದೆ, ಅವರನ್ನು ಪತ್ತೆ ಹಚ್ಚಿ ಕರೆತರಲು ಲುಕ್‌ಔಟ್ ನೋಟಿಸ್ ಹೊರಡಿಸಲಾಗಿತ್ತು.

ಈ ನೋಟಿಸ್‌ನಿಂದ ಯಾವುದೇ ಸುಳಿವು ದೊರೆಯದ ಕಾರಣ, ನಂತರ ಬ್ಲೂಕಾರ್ನರ್ ನೋಟಿಸ್ ಹೊರಡಿಸಲಾಯಿತು. ಈ ನೋಟಿಸ್ ಹೊರಬೀಳುತ್ತಿದ್ದಂತೆ ಅವರು ಜರ್ಮನಿಯಿಂದ ಕೊಲ್ಲಿ ರಾಷ್ಟ್ರಕ್ಕೆ ಧಾವಿಸಿದ ಮಾಹಿತಿ ಎಸ್‌ಐಟಿ ಮತ್ತು ಅವರ ಕುಟುಂಬದವರಿಗೆ ಬಂದಿತ್ತು. ಮಸ್ಕಟ್ ನಗರದ ಉದ್ಯಮಿ ಒಬ್ಬರ ಫ್ಲ್ಯಾಟ್‌ನಲ್ಲಿ ಉಳಿದುಕೊಂಡಿದ್ದು, ಕಳೆದ ಶನಿವಾರವೇ ಭಾರತಕ್ಕೆ ಹಿಂದಿರುಗುತ್ತಾರೆ ಎಂಬ ಮಾಹಿತಿ ಇತ್ತು. ಹಿಂತಿರುಗುತ್ತಿದ್ದಂತೆ ಅವರನ್ನು ಬಂಧಿಸಲು ಮಂಗಳೂರು ಮತ್ತು ಕೊಚ್ಚಿ ವಿಮಾನ ನಿಲ್ದಾಣಗಳಲ್ಲಿ ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಸಂಜೆಯಾಗುತ್ತಿದ್ದಂತೆ ಅವರೊಂದಿಗಿನ ಸಂಪರ್ಕ ಸಂಪೂರ್ಣ ಕಡಿತಗೊಂಡಿತು. ಅವರ ಚಲನವಲನದ ಬಗ್ಗೆ ಕುಟುಂಬಕ್ಕೂ ಹಾಗೂ ಎಸ್‌ಐಟಿಗೂ ಯಾವುದೇ ಮಾಹಿತಿ ಲಭ್ಯವಾಗುತ್ತಿಲ್ಲ. ಉನ್ನತ ಮೂಲಗಳ ಪ್ರಕಾರ ಅವರು ಕರ್ನಾಟಕದಲ್ಲಿ ನಡೆಯುತ್ತಿರುವ ಎರಡನೇ ಹಂತದ ಮತದಾನದ ನಂತರ, ಇಲ್ಲವೇ ರಾಷ್ಟ್ರದಲ್ಲಿ ನಡೆಯುತ್ತಿರುವ ಲೋಕಸಭಾ ಚುನಾವಣಾ ಪ್ರಕ್ರಿಯೆ ಪೂರ್ಣವಾಗಿ ಮುಗಿದ ನಂತರವಷ್ಟೇ ಹಿಂತಿರುಗಲಿದ್ದಾರೆ ಎಂಬ ಮಾತುಗಳು ಕೇಳಿಬರುತ್ತಿವೆ. ಇಷ್ಟರ ನಡುವೆಯೂ ಪ್ರಕರಣವನ್ನು ಎಸ್‌ಐಟಿ ಗಂಭೀರವಾಗಿ ತೆಗೆದುಕೊಂಡಿದ್ದು, ಅವರ ಪತ್ತೆಗಾಗಿ ತೀವ್ರ ಯತ್ನ ನಡೆಸುತ್ತಿದೆ.

ಎಸ್‌ಐಟಿ ವಿಚಾರಣೆ ವೇಳೆ, ನ್ಯಾಯಾಧೀಶರ ಮುಂದೆಯೂ ಕೈಯ್ಯಲ್ಲಿ 3 ನಿಂಬೆಹಣ್ಣು ಹಿಡಿದಿದ್ದ ಎಚ್.ಡಿ.ರೇವಣ್ಣ!



ಬೆಂಗಳೂರು: ಲೈಂಗಿಕ ದೌರ್ಜನ್ಯ ಪ್ರಕರಣದ ಸಂತ್ರಸ್ತೆಯನ್ನು ಅಪಹರಿಸಿದ ಕೇಸ್‌ನಲ್ಲಿ ಮೊದಲ ಆರೋಪಿಯಾಗಿರುವ ಮಾಜಿ ಸಚಿವ ಎಚ್.ಡಿ. ರೇವಣ್ಣ ಅವರನ್ನು ಎಸ್‌ಐಟಿ ವಶಕ್ಕೆ ಪಡೆದು, ವಿಚಾರಣೆ ನಡೆಸುತ್ತಿದೆ. ಎಸ್‌ಐಟಿ ಅಧಿಕಾರಿಗಳ ವಿಚಾರಣೆ ವೇಳೆ ಹಾಗೂ ನ್ಯಾಯಾಧೀಶರ ಎದುರು ಹಾಜರುಪಡಿಸುವ ಸಂದರ್ಭದಲ್ಲಿ ಎಚ್.ಡಿ.ರೇವಣ್ಣ ಅವರು ಮೂರು ನಿಂಬೆಹಣ್ಣು ಕೈಯ್ಯಲ್ಲಿ ಹಿಡಿದುಕೊಂಡಿದ್ದರು. ಪೊಲೀಸ್ ವಾಹನದಿಂದ ಇಳಿದಿದ್ದ ರೇವಣ್ಣ, ನಿಂಬೆಹಣ್ಣುಗಳ ಸಮೇತ ನ್ಯಾಯಾಧೀಶರ ಮನೆಯತ್ತ ಹೆಜ್ಜೆ ಹಾಕಿದರು. ವಿಶೇಷ ಕೊಠಡಿಯಲ್ಲಿ ವಿಚಾರಣೆ ನಡೆಯುತ್ತಿದ್ದ ಸಂದರ್ಭದಲ್ಲೂ ರೇವಣ್ಣ ನಿಂಬೆಹಣ್ಣು ಬಿಟ್ಟಿರಲಿಲ್ಲ.

ವಿಚಾರಣೆ ವೇಳೆ ನ್ಯಾಯಾಧೀಶರ ಎದುರು ಕಣ್ಣೀರು ಹಾಕಿದ್ದ ರೇವಣ್ಣ, ನನ್ನ ಮೇಲೆ ಸುಳ್ಳು ಆರೋಪ ಹೊರಿಸಲಾಗಿದೆ. ರಾಜಕೀಯ ಬೆಳವಣಿಗೆ ಸಹಿಸದವರು ಈ ರೀತಿ ಮಾಡಿದ್ದಾರೆ. ನನಗೆ ನ್ಯಾಯ ಕೊಡಿ ಎಂದು ಮನವಿ ಮಾಡಿದ್ದಾರೆಂದು ತಿಳಿದು ಬಂದಿದೆ.

ನ್ಯಾಯಾಧೀಶರ ನಿವಾಸದಲ್ಲಿ ಎಚ್.ಡಿ. ರೇವಣ್ಣ ಪರ ವಕೀಲ ಮತ್ತು ಎಸ್‌ಐಟಿ ಅಧಿಕಾರಿಗಳ ನಡುವಿನ ವಾದ-ಪ್ರತಿವಾದ ಆಲಿಸಿದ ನ್ಯಾಯಾಧೀಶ ರವೀಂದ್ರ ಕಟ್ಟಿಮನಿ ಅವರು, ರೇವಣ್ಣರನ್ನು ಮೇ 8ರವರೆಗೆ ಕಸ್ಟಡಿಗೆ ಒಪ್ಪಿಸಿ ಆದೇಶಿಸಿದ್ದಾರೆ.

ಹಾಸನ ಲೋಕಸಭಾ ಕ್ಷೇತ್ರದ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ಕೇಳಿಬಂದಿರುವ ಲೈಂಗಿಕ ದೌರ್ಜನ್ಯ ಆರೋಪ ರಾಷ್ಟ್ರ ಮಟ್ಟದಲ್ಲಿ ವ್ಯಾಪಕವಾಗಿ ಚರ್ಚೆಯಾಗುತ್ತಿದೆ. ಒಂದೆಡೆ ವಿದೇಶಕ್ಕೆ ಹಾರಿರುವ ಪ್ರಜ್ವಲ್ ಬಂಧಿಸಲು ಎಸ್‌ಐಟಿ ಅಧಿಕಾರಿಗಳು ಏರ್‌ಪೋರ್ಟ್‌ನಲ್ಲಿ ಕಾದು ಕುಳಿತಿದ್ದಾರೆ.

ಉತ್ತರ ಪ್ರದೇಶದಲ್ಲಿ ಕೈಕಾಲು ಕಟ್ಟಿ ಪತಿಯ ಮರ್ಮಾಂಗಕ್ಕೆ ಸಿಗರೇಟಿನಿಂದ ಸುಟ್ಟು ಚಿತ್ರಹಿಂಸೆ ನೀಡಿದ ಪತ್ನಿ!

ಲಖನೌ: ಪ್ರೇಮ ವಿವಾಹವಾದ ಬಳಿಕ ಪತಿಗೆ ಚಿತ್ರಹಿಂಸೆ ನೀಡಿದ ಪ್ರಕರಣ ಬಿಜ್ನೋರ್‌ನಲ್ಲಿ ಬೆಳಕಿಗೆ ಬಂದಿದೆ. ಪತಿ ಕೈಕಾಲು ಕಟ್ಟಿ ಖಾಸಗಿ ಭಾಗಕ್ಕೆ ಸಿಗರೇಟಿನಿಂದ ಸುಟ್ಟು ಚಿತ್ರಹಿಂಸೆ ನೀಡಿರುವ ವಿಡಿಯೋ ವೈರಲ್ ಆದ ಬಳಿಕ ಪೊಲೀಸರು ಆರೋಪಿ ಪತ್ನಿಯನ್ನು ಬಂಧಿಸಿ ಜೈಲಿಗೆ ಕಳುಹಿಸಿದ್ದಾರೆ. ಈ ಘಟನೆ ನಡೆದಿದ್ದು ಸಿಯೋಹರಾ ಎಂಬಲ್ಲಿ. ಆಕೆ ಪತಿಯ ಕೈಕಾಲು ಕಟ್ಟಿ, ಥಳಿಸಿ, ಕತ್ತು ಹಿಸುಕಿ, ಸಿಗರೇಟಿನಿಂದ ಸುಟ್ಟು ಹಾಕಿರುವ ದೃಶ್ಯ ಸಿಸಿಟಿವಿ ವಿಡಿಯೋ ವೈರಲ್ ಆಗಿದೆ. ಸಿಯೋಹರಾ ಗ್ರಾಮವೊಂದರಲ್ಲಿ ವಾಸಿಸುತ್ತಿರುವ ಮನ್ನನ್ ಝೈದಿ ತನ್ನ ಪತ್ನಿ ಮೆಹರ್ಜಹಾನ್ ತನಗೆ ಅಮಲು ಪದಾರ್ಥ ನೀಡಿ ಚಿತ್ರಹಿಂಸೆ ನೀಡುತ್ತಾಳೆ ಎಂದು ಆರೋಪಿಸಿ ಪೊಲೀಸರಿಗೆ ದೂರು ನೀಡಿದ್ದನು. ನಾನು ಪ್ರಜ್ಞೆ ತಪ್ಪಿದಾಗ, ಅವಳು ನನ್ನ ಕೈ ಮತ್ತು ಕಾಲುಗಳನ್ನು ಕಟ್ಟಿ ಹೊಡೆಯುತ್ತಾಳೆ.

ಮನೆಯಲ್ಲಿ ಅಳವಡಿಸಿದ್ದ ಸಿಸಿಟಿವಿ ವಿಡಿಯೋವನ್ನು ಪೊಲೀಸರಿಗೆ ನೀಡಿದ್ದಾನೆ. ಪತ್ನಿ ತನ್ನ ಪತಿಯನ್ನು ವೇಲ್‌ನಿಂದ ಕೈಕಾಲು ಕಟ್ಟಿ ಥಳಿಸಿದ್ದಾಳೆ. ಆತನ ಎದೆಯ ಮೇಲೆ ಕುಳಿತು ಕತ್ತು ಹಿಸುಕಲು ಯತ್ನಿಸುತ್ತಿರುವ ದೃಶ್ಯವೂ ಇದೆ. ಈ ವಿಡಿಯೋದಲ್ಲಿ ಆಕೆ ಆತನನ್ನು ಥಳಿಸುತ್ತಿರುವುದನ್ನು ಹಾಗೂ ಆತನ ದೇಹವನ್ನು ಸಿಗರೇಟಿನಿಂದ ಸುಟ್ಟು ಹಾಕುತ್ತಿರುವುದು ಬಯಲಾಗಿದೆ.

ಒಂದು ಮೀಟರ್‌ಗೆ ಒಂದೇ ರೂಪಾಯಿ; ಬಿಲ್‌ಕುಲ್ ಒಪ್ಪದ ಮೈಸೂರು ನಗರಪಾಲಿಕೆ

ನನೆಗುದಿಗೆ ಬಿದ್ದ ಪೈಪ್‌ಲೈನ್ ಮೂಲಕ ಅಡುಗೆ ಅನಿಲ ಸರಬರಾಜು ಮಾಡುವ ಬಹು ನಿರೀಕ್ಷಿತ ಯೋಜನೆ

● ಬಾಪುಲಿಂಗರಾಜ್ ಅರಸ್



ಮೈಸೂರು,ಮೇ 6– ಸಾಂಸ್ಕೃತಿಕ ನಗರ ಮೈಸೂರಿನ ಮನೆ ಮನೆಗೆ ಪೈಪ್ ಲೈನ್ ಮೂಲಕ ಅಡುಗೆ ಅನಿಲ ಸರಬರಾಜು ಮಾಡುವ ಮಹತ್ವಾಕಾಂಕ್ಷಿ ಯೋಜನೆಯು ನಗರಪಾಲಿಕೆ ಅಧಿಕಾರಿಗಳ ಇಚ್ಛಾಶಕ್ತಿ ಕೊರತೆಯಿಂದಾಗಿ ನನೆಗುದಿಗೆ ಬಿದ್ದಿದೆ. ಆದರೆ ಮೈಸೂರು ಹೊರವಲಯ ಹೂಟಗಳ್ಳಿ ನಗರಸಭಾ ವ್ಯಾಪ್ತಿಯಲ್ಲಿ ಗ್ಯಾಸ್ ಪೈಪ್‌ಲೈನ್ ಕಾಮಗಾರಿ ನಿರಂತರವಾಗಿ ನಡೆಯುತ್ತಿದೆಯಾದರೂ ಮೈಸೂರು ನಗರಪ್ರದೇಶದಲ್ಲಿ ಕಳೆದ 6 ತಿಂಗಳಿಂದಲೂ ಸ್ಥಗಿತಗೊಂಡಿದೆ.









ವಿದೇಶದಲ್ಲಿರುವಂತೆ ಪೈಪ್‌ಲೈನ್ ಮೂಲಕ ಮೈಸೂರಿಗರಿಗೆ ಅಡುಗೆ ಅನಿಲ ಸರಬರಾಜು ಮಾಡುವ ಯೋಜನೆಗೆ ಬಹಳಷ್ಟು ಅಡೆತಡೆಗಳ ನಡುವೇ ಮೈಸೂರು-ಕೊಡಗು ಸಂಸದ ಪ್ರತಾಪ್ ಸಿಂಹ ಅವರ ಅವಿರತ ಪ್ರಯತ್ನದಿಂದಾಗಿ 2019ರಲ್ಲಿ ಚಾಲನೆ ನೀಡಲಾಯಿತು. ಈ ಯೋಜನೆಯನ್ನು ಅಟ್ಲಾಂಟಿಕ್ ಗಲ್ಫ್ ಅಂಡ್ ಫೆಸಿಫಿಕ್ (ಎಜಿ ಅಂಡ್ ಪಿ) ವಿದೇಶಿ ಮೂಲದ ಖಾಸಗಿ ಕಂಪನಿ ಕೈಗೆತ್ತಿಕೊಂಡಿದೆ.

ಈ ಯೋಜನೆಗೆ ಆರಂಭದಲ್ಲೇ ನಗರಪಾಲಿಕೆ ಸದಸ್ಯರು ತೀವ್ರ ವಿರೋಧ ವ್ಯಕ್ತಪಡಿಸಿದ್ದರು. ಯೋಜನೆಗೆ ಹಳ್ಳ ತೋಡುವುದರಿಂದ ರಸ್ತೆಗಳು ಹಾಳಾಗುತ್ತವೆ. ಅದನ್ನು ಸರಿಪಡಿಸಲು ಕೋಟ್ಯಾಂತರ ರೂ. ವೆಚ್ಚವಾಗುತ್ತದೆ ಎಂಬುದು ಪಾಲಿಕೆ ಸದಸ್ಯರ ವಾದವಾಗಿತ್ತು. ಅದರೆ ಈ ಯೋಜನೆಯಲ್ಲಿ ಪೈಪ್‌ಲೈನ್ ಅಳವಡಿಸಿದ ನಂತರ ರಸ್ತೆಯನ್ನು ಸರಿಪಡಿಸುವುದೂ ಕೂಡ ಕಂಪೆನಿಯ ಹೊಣೆಯಾಗಿದ್ದು, ಪಾಲಿಕೆಗೆ ಯಾವುದೇ ಹೊರೆ ಆಗುವುದಿಲ್ಲ ಎಂದು ಮನವರಿಕೆ ಮಾಡಿದರೂ ಹಲವು ಸದಸ್ಯರು ಒಪ್ಪಲೇ ಇಲ್ಲ. ಒಂದು ಹಂತದಲ್ಲಿ ಯೋಜನೆಗೆ ನಗರಪಾಲಿಕೆಯಿಂದ ಅನುಮತಿ ದೊರೆಯುವುದೇ ಇಲ್ಲ ಎಂಬಂತಹ ಪರಿಸ್ಥಿತಿ ಎದುರಾಯಿತು.

ಆಗ ಮಧ್ಯೆ ಪ್ರವೇಶಿಸಿದ ಸಂಸದ ಪ್ರತಾಪ್ ಸಿಂಹ, ಅಂದು ಮೇಯರ್ ಆಗಿದ್ದ ಸುನಂದ ಪಾಲನೇತ್ರ ಅಧ್ಯಕ್ಷತೆಯಲ್ಲಿ ನಡೆದ ಪಾಲಿಕೆ ಸಭೆಯಲ್ಲಿ ತಾವೇ ಖುದ್ದು ಹಾಜರಾಗಿ ಕೆಲ ಸದಸ್ಯರ ವಿರೋಧದ ನಡುವೆಯೂ ಯೋಜನೆಗೆ ಕೌನ್ಸಿಲ್ ಅನುಮತಿ ದೊರಕಿಸಿ ಕೊಟ್ಟಿದ್ದರು. ಕಂಪನಿ ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿ ಗ್ಯಾಸ್ ಪ್ಲಾಂಟ್‌ಗಳನ್ನು ನಿರ್ಮಿಸಿತಲ್ಲದೇ ಮತ್ತೊಂದೆಡೆ ಪೈಪ್‌ಲೈನ್ ಕಾಮಗಾರಿ ಆರಂಭಿಸಿತು.

ನಂತರ ಶಿವಕುಮಾರ್ ಅವರು ಮೇಯರ್ ಆಗಿದ್ದ ವೇಳೆ ಈ ಕಾಮಗಾರಿಗೆ ಮೀಟರ್‌ವೊಂದಕ್ಕೆ 1857 ರೂ. ಶುಲ್ಕ ನಿಗದಿಪಡಿಸಲಾಯಿತು. ಈ ಶುಲ್ಕ ಅಧಿಕವಾದರೂ ರಿಂಗ್ ರಸ್ತೆ ಸುತ್ತಮುತ್ತಲ ಪ್ರದೇಶಗಳಲ್ಲಿ ಪೈಪ್‌ಲೈನ್ ಕಾಮಗಾರಿಗೆ ಈ ದರದಲ್ಲೇ ಕಂಪೆನಿಯು 45 ಕಿ.ಮೀ. ಪೈಪ್‌ಲೈನ್ ಅಳವಡಿಸಿ, ಪ್ರಾಯೋಗಿಕವಾಗಿ 800 ಮನೆಗಳಿಗೆ ಗ್ಯಾಸ್ ಸಂಪರ್ಕ ಕಲ್ಪಿಸಿದೆ.

ಈ ನಡುವೆ ನಂಜನಗೂಡಿನ ಕೈಗಾರಿಕೆಗಳ ಬೇಡಿಕೆಯಂತೆ ಅಲ್ಲಿ ಒಂದು ಪ್ಲಾಂಟ್ ನಿರ್ಮಿಸಿ 6 ಕಿ.ಮೀ ಪೈಪ್‌ಲೈನ್ ಕಾಮಗಾರಿ ಪೂರೈಸಿ ಅಲ್ಲಿನ ಕೈಗಾರಿಕೆಗಳಿಗೆ ಪೈಪ್ ಮೂಲಕ ಗ್ಯಾಸ್ ಪೂರೈಕೆ ಮಾಡಲಾಗುತ್ತಿದೆ.

ಇತ್ತ ಶುಲ್ಕ ನಿಗದಿ ವಿಚಾರದಲ್ಲಿ ಇತರ ರಾಜ್ಯಗಳ ಉದಾಹರಣೆ ನೀಡಿ ಕಂಪನಿ ರಾಜ್ಯ ಸರ್ಕಾರವನ್ನು ಸಂಪರ್ಕಿಸಿದ್ದು, ಸರ್ಕಾರ 1 ಮೀಟರ್‌ಗೆ 1 ರೂ. ನಂತೆ ಶುಲ್ಕ ನಿಗದಿಪಡಿಸಿ ಕಳೆದ ನವೆಂಬರ್‌ನಲ್ಲಿ ಸರ್ಕಾರಿ ಆದೇಶ ಹೊರಡಿಸಿದೆ. ಆದರೆ, ಮೈಸೂರು ನಗರಪಾಲಿಕೆ ಅಧಿಕಾರಿಗಳು ಸರ್ಕಾರಿ ಆದೇಶವಿದ್ದರೂ ನಮಗೆ ನಗರಾಭಿವೃದ್ಧಿ ಇಲಾಖೆಯಿಂದ ಆದೇಶ ಬರಬೇಕೆಂದು ತಿಳಿಸಿ, ನಗರದ ಇತರೆಡೆ ಒಂದು ರೂ.ಶುಲ್ಕದಂತೆ ಕಾಮಗಾರಿಗೆ ಅನುಮತಿ ನೀಡಲು ಮೀನಾಮೇಷ ಎಣಿಸುತ್ತಿದ್ದಾರೆ. ಹೀಗಾಗಿ ಕಳೆದ 6 ತಿಂಗಳಿಂದ ಈ ಕಾಮಗಾರಿ ನನೆಗುದಿಗೆ ಬಿದ್ದಿದೆ. ಇದರ ಪರಿಣಾಮವಾಗಿ ಮೈಸೂರಿನ ಸುಮಾರು 3.75 ಲಕ್ಷ ಮನೆಗಳಿಗೆ ಪೈಪ್‌ಲೈನ್ ಮೂಲಕ ಅಡುಗೆ ಅನಿಲ ಸರಬರಾಜು ಮಾಡುವ ಯೋಜನೆ ಸ್ಥಗಿತಗೊಂಡಿದೆ. ಕಲಬುರಗಿಯಲ್ಲಿ ಸರ್ಕಾರಿ ಆದೇಶದಂತೆ ಮೀಟರ್‌ಗೆ ಒಂದು ರೂ. ಶುಲ್ಕದಂತೆ ಪೈಪ್‌ಲೈನ್ ಕಾಮಗಾರಿ ನಡೆಯುತ್ತದೆ. ವಿಚಿತ್ರವೆಂದರೆ ಮೈಸೂರಿನ ಹೊರವಲಯದಲ್ಲಿರುವ ಹೂಟಗಳ್ಳಿ ನಗರಸಭೆಯೂ ಕೂಡ ಮೀಟರ್‌ಗೆ ಒಂದು ರೂನಂತೆ ಯೋಜನೆಗೆ ಅನುಮತಿ ನೀಡಿದ್ದು ಅಲ್ಲಿ 50 ಕಿ.ಮೀ ಉದ್ದದ ಪೈಪ್‌ಲೈನ್ ಕಾಮಗಾರಿ ನಡೆಯುತ್ತದೆ. ಮನೆಗಳಿಗೆ ಗ್ಯಾಸ್ ಸಂಪರ್ಕ ನೀಡುವ ಕೆಲಸವೂ ನಡೆಯುತ್ತದೆ. ಆದರೆ ಮೈಸೂರು ನಗರದಲ್ಲಿ ಮಾತ್ರ ಪಾಲಿಕೆ ಅಧಿಕಾರಿಗಳ ಇಚ್ಛಾಶಕ್ತಿ ಕೊರತೆಯಿಂದ ಈ ಯೋಜನೆ ಹಳ್ಳ ಹಿಡಿದಿದೆ.

> “ಒಂದು ಮೀಟರ್ ಗ್ಯಾಸ್ ಪೈಪ್ ಅಳವಡಿಸಲು ನಗರಪಾಲಿಕೆ ಎರಡು ಸಾವಿರ ರೂಪಾಯಿ ನಿಗದಿ ಮಾಡಿತ್ತು. ಈ ಸಂಬಂಧ ನಗರಪಾಲಿಕೆ ಕೌನ್ಸಿಲ್ ಸಭೆಯಲ್ಲಿ ತೀರ್ಮಾನ ಕೂಡ ಕೈಗೊಳ್ಳಲಾಗಿತ್ತು. ಇದರಂತೆ ಗ್ಯಾಸ್ ಕಂಪನಿ ಎರಡು ಸಾವಿರ ರೂಪಾಯಿ ಪಾವತಿ ಮಾಡಿ ಈಗಾಗಲೇ ಪೈಪ್‌ಲೈನ್ ಅಳವಡಿಸಿತ್ತು. ಆದರೆ ಈಗ ಒಂದು ಮೀಟರ್‌ಗೆ ಎರಡು ಸಾವಿರ ರೂಪಾಯಿ ನೀಡಲು ಸಾಧ್ಯವಿಲ್ಲ. ಈ ದರ ದುಬಾರಿಯಾಗಿದ್ದು, ಒಂದು ಮೀಟರ್‌ಗೆ ಒಂದು ರೂಪಾಯಿ ನೀಡುತ್ತೇವೆ ಎಂದು ಹೇಳುತ್ತಿದೆ. ಇದಕ್ಕೆ ನಗರಪಾಲಿಕೆ ಸಮ್ಮತಿಸದ ಕಾರಣ ಸರ್ಕಾರದ ಮಟ್ಟದಲ್ಲಿ ಮಾತುಕತೆ ನಡೆಸಿ ಗ್ಯಾಸ್ ಕಂಪನಿ ಸರ್ಕಾರದಿಂದ ಆದೇಶ ಹೊರಡಿಸಿತು. ಹೊಸ ಮಾದರಿಯ ಗ್ಯಾಸ್ ಪೈಪ್ ಸಂಪರ್ಕ ನೀಡುವ ಯೋಜನೆಯನ್ನು ಸ್ಥಳೀಯ ಸಂಸ್ಥೆಗಳು ಉತ್ತೇಜಿಸಬೇಕು. ಈ ನಿಟ್ಟಿನಲ್ಲಿ ಒಂದು ಮೀಟರ್‌ಗೆ ಒಂದು ರೂಪಾಯಿ ಪಡೆದು ಪೈಪ್‌ಲೈನ್ ಅಳವಡಿಸಲು ನಗರಪಾಲಿಕೆ ಅನುಮತಿ ನೀಡುವಂತೆ ಸರ್ಕಾರ ಸೂಚನೆ ನೀಡಿದೆ. ಆದರೆ ಸರ್ಕಾರ ನೀಡಿರುವ ಆದೇಶವನ್ನು ನಗರಪಾಲಿಕೆ ಒಪ್ಪಲು ಸಾಧ್ಯವಿಲ್ಲ. ಈಗಾಗಲೇ ಜಿಯೋ ಸೇರಿದಂತೆ ಹಲವು ಕಂಪನಿಗಳಿಗೆ ಎರಡು ಸಾವಿರ ರೂಪಾಯಿ ನಿಗದಿ ಮಾಡಲಾಗಿದೆ. ಈಗ ಗ್ಯಾಸ್ ಕಂಪನಿಗೆ ಒಂದು ರೂಪಾಯಿಗೆ ನೀಡಿದರೆ, ಮುಂದೆ ಬರುವ ಎಲ್ಲಾ ಕಂಪನಿಗಳಿಗೆ ಇದೇ ದರ ನಿಗದಿ ಮಾಡಬೇಕಾಗುತ್ತದೆ. ಆದ ಕಾರಣ ಸರ್ಕಾರದ ಆದೇಶ ಒಪ್ಪಲು ನಗರಪಾಲಿಕೆ ಸಿದ್ಧವಿಲ್ಲ. ಜನಪ್ರತಿನಿಧಿಗಳ ಅಧಿಕಾರಾವಧಿ ಪೂರ್ಣಗೊಂಡ ನಂತರವೂ ಅಧಿಕಾರಿಗಳು ಈ ಸಂಬಂಧ ಯಾವುದೇ ತೀರ್ಮಾನ ಮಾಡಿಲ್ಲ. **–ಶಿವಕುಮಾರ್, ಮಾಜಿ ಮೇಯರ್**



ಮೈಸೂರು ಮಿತ್ರ ಮಂಗಳವಾರ 7 ಮೇ 2024

ನಿರಾಣಿ ಶುಗರ್ಸ್‌ನಿಂದ ಪಿಎಸ್‌ಎಸ್‌ಕೆ ನೌಕರರಿಗೆ ಅನ್ಯಾಯ ಆರೋಪ

- ಸಿಜಿಎಂಗೆ ಕಾರ್ಖಾನೆಯ ನೌಕರರ ಘೇರಾವ್
- ಸಮಸ್ಯೆ ಇತ್ಯರ್ಥಕ್ಕೆ ರೈತಸಂಘದಿಂದ 10 ದಿನ ಗಡುವು



ನಿರಾಣಿ ಶುಗರ್ಸ್ ಸಿಜಿಎಂ ಸಂಜೀವ್ ಕುಮಾರ್ ಅವರೊಂದಿಗೆ ರೈತ ಮುಖಂಡರು ಮಾತುಕತೆ ನಡೆಸುತ್ತಿರುವುದು.

ಪಾಂಡವಪುರ, ಮೇ 6– ರಜಾ ನಗದೀಕರಣ ಮತ್ತು ಶಾಸನ ಬದ್ಧ ಬೋನಸ್ ನೀಡಲು ತಕರಾರು ಮಾಡುತ್ತಿರುವ ನಿರಾಣಿ ಶುಗರ್ಸ್ ಸಂಸ್ಥೆಯಿಂದ ನೌಕರರಿಗೆ ಅನ್ಯಾಯವಾಗಿದೆ ಎಂದು ಆರೋಪಿಸಿ ಪಿಎಸ್‌ಎಸ್‌ಕೆ ನೌಕರರು ಸಿಜಿಎಂ ಸಂಜೀವ್ ಕುಮಾರ್ ಅವರಿಗೆ ಘೇರಾವ್ ಹಾಕಿ, ಕೂಡಲೇ ತಮ್ಮ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಿದರು.

ಪಿಎಸ್‌ಎಸ್‌ಕೆ ಸಕ್ಕರೆ ಕಾರ್ಖಾನೆಯನ್ನು 40 ವರ್ಷ ಗುತ್ತಿಗೆಗೆ ಪಡೆದಿರುವ ನಿರಾಣಿ ಶುಗರ್ಸ್, ಪಿಎಸ್‌ಎಸ್‌ಕೆ ಕಾರ್ಮಿಕರನ್ನೂ ಸಹ ಕೆಲಸಕ್ಕೆ ತೆಗೆದುಕೊಳ್ಳಲು ಸರ್ಕಾರದಿಂದ ನಿರ್ದೇಶನ ಪಡೆದಿದೆ. ಗುತ್ತಿಗೆ ಪಡೆದು ಈಗಾಗಲೇ 4 ವರ್ಷ ಕಬ್ಬು ನುರಿಸಿದೆ. 3 ವರ್ಷದಿಂದ ತಮ್ಮಲ್ಲಿ ಕೆಲಸ ಮಾಡುತ್ತಿರುವ ಪಿಎಸ್‌ಎಸ್‌ಕೆ ಕಾರ್ಮಿಕರಿಗೆ ರಜಾ ನಗದೀಕರಣ ಮತ್ತು ಶಾಸನ ಬದ್ಧ ಬೋನಸ್ ನೀಡಿಲ್ಲ ಎಂದು ಕಾರ್ಮಿಕರು ದೂರಿದರು.

ತಾವು ಕಡಿಮೆ ಸಂಬಳದಲ್ಲಿ ಕೆಲಸ ಮಾಡುತ್ತಿದ್ದು, ರಜಾ ನಗದೀಕರಣ ಮತ್ತು ಬೋನಸ್ ಹಣ ಬಂದಲ್ಲಿ, ತಮ್ಮ ಮಕ್ಕಳ ಶಾಲಾ ದಾಖಲಾತಿಗೆ ಅನುಕೂಲವಾಗುತ್ತದೆ. ಜತೆಗೆ ಆರೋಗ್ಯ ವೆಚ್ಚ ಸರಿದೂಗಿಸಲು ಸಾಧ್ಯವಾಗುತ್ತದೆ. ಈಗಾಗಲೇ ಜನವರಿ ತಿಂಗಳಿನಿಂದಲೇ ಮನವಿ ಸಲ್ಲಿಸಿದ್ದು, ಇಲ್ಲಿಯ ತನಕವೂ ಕಾರ್ಖಾನೆ ಆಡಳಿತ ಮಂಡಳಿ ತಮಗೆ ಹಣ ನೀಡಿಲ್ಲ. ಇದರಿಂದ ತಮಗೆ ಆರ್ಥಿಕ ಮುಗ್ಗಟ್ಟು ಎದುರಾಗಿದೆ ಎಂದು ಕಾರ್ಮಿಕರು ತಮ್ಮ ಅಳಲು ತೋಡಿಕೊಂಡರು.

ಅಲ್ಲದೇ ಕಾರ್ಮಿಕರ ವೇತನದಲ್ಲಿ ಪಿಎಫ್ ಹಣ ಕಟಾವು ಮಾಡಲಾಗುತ್ತಿದೆ. ಆದರೆ, ಅದರ ಅಕೌಂಟ್ ನಂಬರ್ ನೀಡುತ್ತಿಲ್ಲ. ಎರಡು ದಿನದಿಂದ ನಾವು ಕಾರ್ಖಾನೆಗೆ ಬಂದಿದ್ದರೂ ಹಾಜರಾತಿ ನೀಡಿಲ್ಲ ಕ್ಯಾಂಟೀನ್ ಸೌಲಭ್ಯ ತೀರ ಕಳಪೆ, ಸಮಯಕ್ಕೆ ಸರಿಯಾಗಿ ವೇತನ ನೀಡುತ್ತಿಲ್ಲ ಎಂದು ಕಾರ್ಮಿಕರು ತಮ್ಮ ನೋವು ಹೇಳಿದರು.

ಸ್ಥಳಕ್ಕೆ ರೈತಸಂಘದ ಜಿಲ್ಲಾ ಅಧ್ಯಕ್ಷ ಎ.ಎಲ್.ಕೆಂಪೂಗೌಡ ಮತ್ತು ತಾಲೂಕು ಅಧ್ಯಕ್ಷ ಕೆನ್ನಾಳು ಪಿ.ನಾಗರಾಜು ಧಾವಿಸಿ ಸಿಜಿಎಂ ಸಂಜೀವ್ ಕುಮಾರ್ ಅವರನ್ನು ತರಾಟೆಗೆ ತೆಗೆದುಕೊಂಡು ಕೂಡಲೇ ಕಾರ್ಮಿಕರ ಸಮಸ್ಯೆ ಇತ್ಯರ್ಥಕ್ಕೆ ಒತ್ತಾಯಿಸಿದರು.

ಈ ವೇಳೆ ಸಿಜಿಎಂ ಸಂಜೀವ್ ಕುಮಾರ್ ಮಾತನಾಡಿ, ರಜಾ ನಗದೀಕರಣ ಹಣವನ್ನು ಕಾರ್ಮಿಕರು ನಿವೃತ್ತಿಯಾದಾಗ ನೀಡಲು ಮತ್ತು ಶಾಸನ ಬದ್ಧ ಬೋನಸ್ ಹಣವನ್ನು ದೀಪಾವಳಿಯಂದು ಕೊಡಲು ಆಡಳಿತ ಮಂಡಳಿ ತೀರ್ಮಾನಿಸಿದೆ ಎಂದು ಹೇಳಿದರು. ಕಾರ್ಮಿಕರಲ್ಲಿ ಶಿಸ್ತಿನ ಕೊರತೆ ಇದೆ. ನಾನು ಭಾನುವಾರದಂದು ಕಾರ್ಖಾನೆಗೆ ಬಂದಾಗ ನನ್ನನ್ನು ಕಾರ್ಮಿಕರು ಗೇಟ್‌ನಲ್ಲಿ ತಡೆದರು ಎಂದು ಸಿಜಿಎಂ ಕಾರ್ಮಿಕರ ವಿರುದ್ಧ ದೂರಿದಾಗ, ಪಿಎಸ್‌ಎಸ್‌ಕೆ ಮಾಜಿ ಉಪಾಧ್ಯಕ್ಷರೂ ಆದ ರೈತ ಸಂಘದ ತಾಲೂಕು ಅಧ್ಯಕ್ಷ ಪಿ.ನಾಗರಾಜು ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿ ಮೊದಲು ಆಡಳಿತ ಮಂಡಳಿ ಮತ್ತು ಉನ್ನತ ಹುದ್ದೆಯಲ್ಲಿರುವ ನೀವು ಶಿಸ್ತು ಕಲಿಯಿರಿ, ಕಾರ್ಮಿಕರಿಗೆ ಕಾಲಕಾಲಕ್ಕೆ ನೀಡಬೇಕಿದ್ದ ಭತ್ಯೆ ಮತ್ತಿತರ ಶಾಸನ ಬದ್ಧ ಅನುಕೂಲಗಳನ್ನು ಸಮಯಕ್ಕೆ ಸರಿಯಾಗಿ ಕೊಟ್ಟಿದ್ದರೆ ಅವರೇಕೆ ನಿಮ್ಮನ್ನು ಗೇಟ್ ಹತ್ತಿರ ತಡೆಯುತ್ತಿದ್ದರು. ನೀವು ಅವರ ತಾಳ್ಮೆಯನ್ನು ಪರೀಕ್ಷಿಸಬೇಡಿ, ಕೂಡಲೇ ಅವರಿಗೆ ಕೊಡಬೇಕಿರುವ ಅಗತ್ಯ ಅನುಕೂಲಗಳನ್ನು ಒದಗಿಸಿ ಎಂದು ಕಿಡಿಕಾರಿದರಲ್ಲದೇ, 10 ದಿನದೊಳಗೆ ಕಾರ್ಮಿಕರ ಸಮಸ್ಯೆ ಇತ್ಯರ್ಥ ಪಡಿಸುವಂತೆ ಗಡುವು ನೀಡಿದರು.

ರೈತಮುಖಂಡರ ಆಕ್ರೋಶಕ್ಕೆ ಮಣಿದ ಸಿಜಿಎಂ ಸಂಜೀವ್ ಕುಮಾರ್ ಈ ಬಗ್ಗೆ ಕೂಡಲೇ ಆಡಳಿತ ಮಂಡಳಿಗೆ ವಿಷಯ ತಿಳಿಸಿ ಕಾರ್ಮಿಕರಿಗೆ ಅನುಕೂಲ ಮಾಡಿಕೊಡುವುದಾಗಿ ಭರವಸೆ ನೀಡಿದ ಬಳಿಕ ಪ್ರತಿಭಟನೆ ಹಿಂಪಡೆಯಲಾಯಿತು.

ರೈತಮುಖಂಡರಾದ ಕೆನ್ನಾಳು ವಿಜಯ ಕುಮಾರ್, ಎಣ್ಣೆಹೊಳೆಕೊಪ್ಪಲು ಮಂಜು, ರಘು, ಪಿಎಸ್‌ಎಸ್‌ಕೆ ಎಂಪ್ಲಾಯೀಸ್ ಯೂನಿಯನ್ ಅಧ್ಯಕ್ಷ ಎಂ.ಪುಟ್ಟಮಾದೇಗೌಡ, ಉಪಾಧ್ಯಕ್ಷ ಡಿ.ಲೋಕೇಶ್, ಕಾರ್ಯದರ್ಶಿ ಎನ್.ಮಹೇಶ್, ಖಜಾಂಚಿ ಸಿದ್ದೇಗೌಡ, ಸಹ ಕಾರ್ಯದರ್ಶಿ ಡಿ.ಸುರೇಶ್ ಹಾಗೂ ಪಿಎಸ್‌ಎಸ್‌ಕೆ ನೌಕರರು ಇದ್ದರು.

ಪ್ರಜ್ವಲ್ ರೇವಣ್ಣ ಬಂಧನಕ್ಕೆ ಆಗ್ರಹಿಸಿ ಪ್ರತಿಭಟನೆ



ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಬಂಧಿಸುವಂತೆ ಆಗ್ರಹಿಸಿ ಮಹಿಳಾ ಮತ್ತು ಪ್ರಗತಿಪರ ಸಂಘಟನೆಗಳು ಪ್ರತಿಭಟನೆ ನಡೆಸಿದವು.

ಮಂಡ್ಯ,ಮೇ 6– ನೂರಾರು ಹೆಣ್ಣು ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿ ತಲೆ ಮರೆಸಿಕೊಂಡಿರುವ ಸಂಸದ ಪ್ರಜ್ವಲ್ ರೇವಣ್ಣನನ್ನು ಕೂಡಲೇ ವಿದೇಶದಿಂದ ಕರೆತಂದು ತನಿಖೆಗೊಳಪಡಿಸಬೇಕು. ಈ ಪ್ರಕರಣದ ಸಂತ್ರಸ್ತರಿಗೆ ಬಲಾಢ್ಯ ಆರೋಪಿಗಳಿಂದ ಅಪಾಯವಿರುವುದರಿಂದ ಅವರಿಗೆ ರಕ್ಷಣೆ ನೀಡಬೇಕೆಂದು ಆಗ್ರಹಿಸಿ ಮಂಡ್ಯ ಜಿಲ್ಲೆಯ ಮಹಿಳಾ ಮತ್ತು ಪ್ರಗತಿಪರ ಸಂಘಟನೆಗಳು ಮಂಡ್ಯ ನಗರದಲ್ಲಿ ಪ್ರತಿಭಟನೆ ನಡೆಸಿದವು.

ನಗರದ ಸಂಜಯ ವೃತ್ತದಲ್ಲಿ ಪ್ರತಿಭಟನೆ ನಡೆಸಿದ ಪ್ರತಿಭಟನಕಾರರು, ಹೆಣ್ಣು ಮಕ್ಕಳ ಗೌಪ್ಯತೆಗೆ ಧಕ್ಕೆಯಾಗದಂತೆ ಅತ್ಯಂತ ಸೂಕ್ಷ್ಮವಾಗಿ ತನಿಖೆ ನಡೆಯಬೇಕು. ಸುಭದ್ರತೆ ಮತ್ತು ಘನತೆಯಿಂದ ಜೀವನ ಮುಂದುವರೆಸಲು ಅವಕಾಶವಾಗಬೇಕು. ಲೈಂಗಿಕ ದೌರ್ಜನ್ಯವೆಸಗಿದ ವ್ಯಕ್ತಿಯನ್ನು ತಮ್ಮ ಅಭ್ಯರ್ಥಿಯನ್ನಾಗಿಸಿ ಕರ್ನಾಟಕದ ಹೆಣ್ಣುಮಕ್ಕಳನ್ನು ಮತ್ತು ಜನತೆಯನ್ನು ಮೂರ್ಖರನ್ನಾಗಿಸಲು ಪ್ರಯತ್ನಿಸಿದ ಬಿಜೆಪಿ–ಜೆಡಿಎಸ್ ಪಕ್ಷಗಳು ಬಹಿರಂಗ ಕ್ಷಮಾಪಣೆ ಕೇಳಬೇಕು. ಇತ್ತೀಚೆಗೆ ಕರ್ನಾಟಕದಲ್ಲಿ ನಡೆದಿರುವ ಮಹಿಳೆಯರ ಮೇಲಿನ ಎಲ್ಲಾ ದೌರ್ಜನ್ಯದ ಪ್ರಕರಣಗಳ ನಿಷ್ಪಕ್ಷಪಾತ ತನಿಖೆ ಮತ್ತು ಶಿಕ್ಷೆಯನ್ನು ಖಾತ್ರಿಪಡಿಸಲು, ಹಾಗೆಯೇ ಮುಂದಿನ ದಿನಗಳಲ್ಲಿ ಇಂತಹ ಘಟನೆಗಳನ್ನು ನಿಯಂತ್ರಿಸುವ ಮಾರ್ಗಸೂಚಿ ಕ್ರಮಗಳಿಗಾಗಿ ಉನ್ನತ ಮಟ್ಟದ ಸಮಿತಿಯೊಂದನ್ನು ಸರ್ಕಾರ ಕೂಡಲೇ ರಚಿಸಬೇಕೆಂದು ಆಗ್ರಹಿಸಿದರು.

ಹುಬ್ಬಳ್ಳಿಯಲ್ಲಿ ನಡೆದ ನೇಹಾ ಕೊಲೆ ಪ್ರಕರಣದ ಬೆನ್ನಲ್ಲೇ ಪ್ರಜ್ವಲ್ ರೇವಣ್ಣ ಸುಮಾರು ಮೂರು ಸಾವಿರದಷ್ಟು ಹೆಣ್ಣು ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಸಂಗತಿ ಬೆಳಕಿಗೆ ಬಂದಿದೆ. ಪ್ರಕರಣದಲ್ಲಿ ಆತನ ತಂದೆ ಹಿರಿಯ ರಾಜಕಾರಣಿ ಎಚ್.ಡಿ.ರೇವಣ್ಣ ಅವರ ಹೆಸರೂ ಕೇಳಿ ಬಂದಿದ್ದು, ಸಾಕ್ಷಿಯೊಬ್ಬರನ್ನು ಅಪಹರಿಸಲು ಪ್ರಯತ್ನಿಸಿದ ಆರೋಪದ ಮೇಲೆ ನಿನ್ನೆ ಅವರ ಬಂಧನವಾಗಿರುವುದು, ಈ ಪ್ರಕರಣದ ಬೇರುಗಳು ಬಹಳ ಅಗಲಕ್ಕೆ ಹರಡಿವೆಯೆಂಬುದನ್ನು ತೋರಿಸುತ್ತಿದೆ. ಆದ್ದರಿಂದ ಈ ಬಗ್ಗೆ ಸಮಗ್ರ ತನಿಖೆ ನಡೆಸಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಪ್ರಗತಿಪರ ಮುಖಂಡ ಪ್ರೊ.ಜಿ.ಟಿ.ವೀರಪ್ಪ, ರೈತಸಂಘದ ಲಿಂಗಾಪ್ಪಾಜಿ, ವಿಜಯಕುಮಾರ್, ಕರ್ನಾಟಕ ಜನಶಕ್ತಿ ರಾಜ್ಯ ಕಾರ್ಯದರ್ಶಿ ಪೂರ್ಣಿಮ, ಜಿಲ್ಲಾ ಕಾರ್ಯದರ್ಶಿ ಸಿದ್ದರಾಜು, ಜಾಗೃತ ಕರ್ನಾಟಕದ ಎನ್.ನಾಗೇಶ್, ಸುಬ್ರಮಣ್ಯ, ಮಹಿಳಾ ಮುನ್ನಡೆಯ ಶಿಲ್ಪ ಸೌಮ್ಯ ಮುಖಂಡರಾದ ನಗರಕೆರೆ ಜಗದೀಶ್, ರಾಧಾಮಣಿ, ಹನುಮಂತಯ್ಯ ಉಪಸ್ಥಿತರಿದ್ದರು.

ಜಿಪಂ ಸಿಇಓರಿಂದ ಬಹುಗ್ರಾಮ ಕುಡಿಯುವ ನೀರು ಯೋಜನೆ ಪರಿಶೀಲನೆ



ಶ್ರೀರಂಗಪಟ್ಟಣ, ಮೇ,06:–ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶೇಖ್ ತನ್ವೀರ್ ಆಸಿಫ್ ಅವರು ಇಂದು ಶ್ರೀರಂಗಪಟ್ಟಣ ತಾಲೂಕಿನ ಮರಳಗಾಲ ಗ್ರಾಮದಲ್ಲಿ ನಡೆಯುತ್ತಿರುವ ಬಹುಗ್ರಾಮ ಕುಡಿಯುವ ನೀರು ಯೋಜನೆ ಕಾಮಗಾರಿ ಪರಿಶೀಲನೆ ನಡೆಸಿದರು.

ಈ ಯೋಜನೆಯಲ್ಲಿ ಜಲಧಾರೆ ಯೋಜನೆ –3, ಡಬ್ಲ್ಯುಟಿಪಿಯನ್ನು ನಿರ್ಮಾಣ ಮಾಡಲು ಸ್ಥಳದ ಅವಶ್ಯಕತೆ ಇದ್ದು, ಸ್ಥಳ ನೀಡುವಂತೆ ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸುವುದಾಗಿ ತಿಳಿಸಿದರು.

ತದನಂತರ ವಡೆಯಂಡನಹಳ್ಳಿಯ ಬಹುಗ್ರಾಮ ಕುಡಿಯುವ ನೀರು ಯೋಜನೆಯನ್ನು ಪರಿಶೀಲಿಸಿ ಮತ್ತು ಎಮ್‌ಟಿಬಿ ಮತ್ತು ಜೆಡ್‌ಬಿಟಿ ಟ್ಯಾಂಕ್ ನಿರ್ಮಾಣ ಮಾಡಲು ಸಾಮಗ್ರಿಗಳನ್ನು ಸಾಗಿಸಲು, ಅರಣ್ಯ ಇಲಾಖೆ ಯಿಂದ ತಡೆಹಿಡಿದಿದ್ದು, ಪ್ರಾದೇಶಿಕ ಅರಣ್ಯ ಸಂರಕ್ಷಣಾಧಿಕಾರಿಯವರನ್ನು ಸ್ಥಳಕ್ಕೆ ಕರೆಯಿಸಿ ಮಾತನಾಡಿದ್ದಲ್ಲದೆ ಉಪ ಅರಣ್ಯ ಸಂರಕ್ಷಣಾಧಿಕಾ ರಿರವರೊಂದಿಗೆ ದೂರವಾಣಿ ಮೂಲಕ ಮಾತನಾಡಿ ಕೆಲಸ ಶುರು ಮಾಡಲು ಅನುವು ಮಾಡಿಕೊಟ್ಟರು.



ಮಂಡ್ಯ ನಗರದಲ್ಲಿ ಜನತಾ ಶಿಕ್ಷಣ ಟ್ರಸ್ಟ್ ಪಿಇಎಸ್ ವಿಜ್ಞಾನ ಕಲಾ ಮತ್ತು ವಾಣಿಜ್ಯ ಕಾಲೇಜು ಮಂಡ್ಯ ಇವರು ಆಯೋಜಿಸಿದ್ದ ನಿತ್ಯ ಸಚಿವ ಕೆ.ವಿ.ಶಂಕರಗೌಡ ಅವರ 28ನೇ ವರ್ಷದ ಸ್ಮರಣಾರ್ಥ ರಾಜ್ಯಮಟ್ಟದ ಜನಪದ ಗೀತೆ ಸ್ಪರ್ಧೆ ಕಾರ್ಯಕ್ರಮವನ್ನು ರಂಗನಟಿ ಮತ್ತು ಜಾನಪದ ಗಾಯಕಿ ಸವಿತಾ ಉದ್ಘಾಟಿಸಿದರು.

ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ

ಮಂಡ್ಯ, ಮೇ. 6– 2024ನೇ ಸಾಲಿನ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಬೆಂಗಳೂರಿನ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಮತ್ತು ಪರಿಸರ ಸಂಘವು ಜಂಟಿಯಾಗಿ 'ಭೂಮಿ ಮತ್ತು ಮಣ್ಣಿನ ಮೇಲೆ ಹವಾಮಾನ ಬದಲಾವಣೆಯ ಪರಿಣಾಮಗಳು' ಎಂಬ ಶೀರ್ಷಿಕೆಯಡಿಯಲ್ಲಿ ಒಂದು ದಿನದ ರಾಷ್ಟ್ರೀಯ ಕಾರ್ಯಾಗಾರವನ್ನು ಜೂನ್ 8 ರಂದು ಅಕಾಡೆಮಿಯಲ್ಲಿ ಹಮ್ಮಿಕೊಳ್ಳಲಾಗುತ್ತಿದ್ದು, ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆಯನ್ನು ಆಯೋಜಿಸಲಾಗಿದೆ.

ಪ್ರಬಂಧ ಸ್ಪರ್ಧೆಯು 'ಮಣ್ಣು ಮತ್ತು ಭೂಮಿಯ ಮೇಲೆ ಹವಾಮಾನ ಬದಲಾವಣೆಯ ಪರಿಣಾಮಗಳು'/ Impacts of Climate Change on Soil and land (ಕನ್ನಡ&ಇಂಗ್ಲೀಷ್) ಎಂಬ ವಿಷಯವಾಗಿದ್ದು, 1000 ಪದಗಳ ಮಿತಿಯೊಳಗಿರಬೇಕು. ಆಸಕ್ತ ವಿದ್ಯಾರ್ಥಿಗಳು ಮೇ 27 ರೊಳಗೆ ಪ್ರಬಂಧಗಳನ್ನು ಅಕಾಡೆಮಿಯ ವಿಳಾಸಕ್ಕೆ ಅಂಚೆ ಮೂಲಕ ಕಳುಹಿಸುವುದು. ಭಾಗವಹಿಸುವ ವಿದ್ಯಾರ್ಥಿಗಳು ತಮ್ಮ ಹೆಸರು, ಇ–ಮೇಲ್, ಮೊ. ಸಂ, ಶಾಲೆಯ ಹೆಸರು, ಪ್ರಬಂಧದ ಭಾಷೆಯನ್ನು ಅಕಾಡೆಮಿಯ ಇ–ಮೇಲ್ essayksta@gmail.com ಗೆ ಕಳುಹಿಸಬೇಕು. ಹೆಚ್ಚಿನ ಮಾಹಿತಿಗಾಗಿ ಅಕಾಡೆಮಿಯ ವೆಬ್‌ಸೈಟ್ https://kstacademy.in ಅನ್ನು ಸಂಪರ್ಕಿಸಬಹುದು ಎಂದು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಎ.ಎಂ.ರಮೇಶ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

ಡಿ.ಕೆ.ಶಿವಕುಮಾರ್ ಕಥಾನಾಯಕ

ರಹಸ್ಯ ಸಭೆ ನಡೆಸಿದ್ದ ಸಿಎಂ, ಡಿಸಿಎಂ: ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿಕೆಶಿ ಅವರ ನೇತೃತ್ವದಲ್ಲಿ ಪೊಲೀಸ್ ಇಲಾಖೆಯ ಉನ್ನತಾಧಿಕಾರಿಗಳ ಸಭೆಯನ್ನು ಗೌಪ್ಯವಾಗಿ ನಡೆಸಲಾಗಿದೆ. ಪ್ರಜ್ವಲ್ ರೇವಣ್ಣ ಅವರ ಪ್ರಕರಣದಲ್ಲಿ ಯಾರನ್ನು ಆರೋಪಿಗಳನ್ನಾಗಿ ಮಾಡಬೇಕು, ಮಾಡಬಾರದು ಎಂಬ ಬಗ್ಗೆ ಸುದೀರ್ಘವಾಗಿ ಚರ್ಚೆಯಾಗಿದೆ. ಅವರ ಆಮಿಷಕ್ಕೆ ಬಲಿಯಾಗದ ನನ್ನನ್ನು ವಿಡಿಯೋ ಲೀಕ್ ಪ್ರಕರಣದಲ್ಲಿ ಮೊದಲ ಆರೋಪಿಯನ್ನಾಗಿ ಮಾಡಲು ಎಸ್‌ಐಟಿ ಹುನ್ನಾರ ನಡೆಸಿದೆ ಎಂದು ದೇವರಾಜೇಗೌಡರು ಗಂಭೀರ ಆರೋಪ ಮಾಡಿದರು.

ಡಿ.ಕೆ.ಶಿವಕುಮಾರ್ ಅವರು ನನಗೆ ಹತ್ತು ಹಲವು ಆಮಿಷಗಳನ್ನು ಒಡ್ಡಿದ್ದರು. ಶಿವರಾಮೇಗೌಡರನ್ನು ನನ್ನ ಜತೆ ಮಾತುಕತೆಗೆ ಕಳಿಸಿದ್ದರು. ತಾರಾ ಹೋಟೆಲ್‌ಗಳಲ್ಲಿ ನನ್ನ ಹಾಗೂ ಶಿವರಾಮೇಗೌಡರ ಭೇಟಿ ಹತ್ತು ಬಾರಿ ನಡೆದಿದೆ. ಸರಕಾರಕ್ಕೆ ವಿರುದ್ಧವಾದ ಯಾವುದೇ ಹೆಜ್ಜೆ ಇಡಬಾರದು ಎಂದು ನನ್ನ ಮೇಲೆ ಒತ್ತಡ ಹಾಕಿದರು ಎಂದು ಅವರು ತಿಳಿಸಿದರು. ಇದಕ್ಕೆ ಪೂರಕವಾಗಿ ಶಿವರಾಮೇಗೌಡರು ಡಿಸಿಎಂ ಡಿಕೆಶಿ ಒಡ್ಡಿರುವ ಆಮಿಷವನ್ನು ಉಲ್ಲೇಖಿಸಿ ಮಾತನಾಡಿರುವ ಮೊಬೈಲ್ ಸಂಭಾಷಣೆಯನ್ನು ಇದೇ ವೇಳೆ ಬಿಡುಗಡೆ ಮಾಡಿದರು.

ಡಿ.ಕೆ.ಶಿವಕುಮಾರ್ ಅವರೇ ನನ್ನನ್ನು ನೇರವಾಗಿ ಕರೆಸಿಕೊಂಡಿದ್ದರು. ಎಲ್.ಆರ್.ಶಿವರಾಮೇಗೌಡ ಹಾಗೂ ಡಿ.ಕೆ.ಶಿವಕುಮಾರ್ ಈ ಕೇಸ್ ವಿಚಾರವಾಗಿ ನನ್ನ ಬಳಿ ಪದೇಪದೆ ಚರ್ಚೆ ನಡೆಸಿದರು. ಸಂತ್ರಸ್ತರು ಬಂದು ದೂರು ಕೊಡುತ್ತಾರಾ? ಅಥವಾ ಅವರಿಗೆ ನ್ಯಾಯ ಕೊಡಿಸೋದು ಹೇಗೆ ಎನ್ನುವ ಬಗ್ಗೆ ಅವರು ಚರ್ಚೆ ನಡೆಸಲಿಲ್ಲ. ಆದರೆ, ಪೆನ್‌ಡ್ರೈವ್ ಲೀಕ್ ಮಾಡುವ ಬಗ್ಗೆ ಬಹಳ ಮುತುವರ್ಜಿಯಿಂದ ಮಾತನಾಡಿದರು. ಈಗ ನೋಡಿದರೆ ನನ್ನನ್ನೇ ಕೇಸ್‌ನಲ್ಲಿ ಸಿಲುಕಿಸಲು ನೋಡುತ್ತಿದ್ದಾರೆ ಎಂದು ಅವರು ಕಿಡಿಕಾರಿದರು.

ಡಿಕೆಶಿ ಹೆಸರು ತೆಗೆಯುವಂತೆ ಎಸ್‌ಐಟಿ ಒತ್ತಡ: ಎಸ್‌ಐಟಿ ಎಸ್‌ಪಿ ಒಬ್ಬರು ಡಿಕೆಶಿ ಹೆಸರು ಡಿಲಿಟ್ ಮಾಡಿ ಎಂದು ಒತ್ತಡ ಹೇರಿದರು. ನಾನು ಒಪ್ಪಲಿಲ್ಲ. ನಿಮಗೆ ತೊಂದರೆ ಆಗುತ್ತದೆ ಎಂದು ಹೆದರಿಸಿದರು. ನಾನು ಕೇರ್ ಮಾಡಲಿಲ್ಲ ಎಂದ ಅವರು; ಎಲ್.ಆರ್.ಶಿವರಾಮೇಗೌಡ ಅವರು, 'ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಬೇಡ. ಡಿಕೆಶಿ, ಸಿದ್ದರಾಮಯ್ಯರನ್ನು ಸಿಲುಕಿಸಬೇಡ' ಎಂದರು. ಕಾರು ಚಾಲಕನನ್ನು ನಾವೇ ವಿದೇಶಕ್ಕೆ ಕಳುಹಿಸಿದ್ದೇವೆ ಎಂದು ಶಿವರಾಮೇಗೌಡ ಮಾತಾಡಿರುವ ಮೊಬೈಲ್ ಆಡಿಯೋವನ್ನು ಬಿಡುಗಡೆ ಮಾಡಿದ ದೇವರಾಜೇಗೌಡ; ಶಿವರಾಮೇಗೌಡ ಮಧ್ಯವರ್ತಿಯಾಗಿ 10ಕ್ಕೂ ಹೆಚ್ಚು ಬಾರಿ ಭೇಟಿ ಮಾಡಿದ್ದಾರೆ. ಪೆನ್‌ಡ್ರೈವ್ ಹಂಚಿರುವ ವ್ಯಕ್ತಿಗಳನ್ನು ಪತ್ತೆ ಮಾಡಲೇ ಇಲ್ಲ ಇವರು. ಅವರ ಲೊಕೇಷನ್, ಫೋನ್ ನಂಬರ್ ಕೊಟ್ಟರೂ ಪತ್ತೆ ಮಾಡಲೇ ಇಲ್ಲ. ಹಾಸನದಲ್ಲಿ ದಾಖಲಾಗಿರುವ ಎಫ್‌ಐಆರ್ ಕೈ ಬಿಟ್ಟರು. ಇದೆಲ್ಲದರ ಸೂತ್ರಧಾರ ರಾಜ್ಯ ಸರಕಾರವೇ ಆಗಿದೆ ಎಂದು ದೇವರಾಜೇಗೌಡ ಗಂಭೀರ ಆರೋಪ ಮಾಡಿದರು.

ವಿಡಿಯೋಗಳನ್ನು ಲೀಕ್ ಮಾಡಿರುವ ಚಾಲಕ ಕಾರ್ತಿಕ್ ವಿರುದ್ಧ ಹಾಸನದಲ್ಲಿ ಎಫ್‌ಐಆರ್ ದಾಖಲಾಗಿದೆ. ಆದರೆ, ಅವನನ್ನು ಈವರೆಗೆ ಬಂಧಿಸಿ ಕ್ರಮ ಜರುಗಿಸಲಿಲ್ಲ. ಅವನು ಎಲ್ಲಿದ್ದಾನೆ? ಏನಾಗಿದ್ದಾನೆ? ಎನ್ನುವುದಕ್ಕೆ ಸರಕಾರ ಉತ್ತರ ಕೊಡಬೇಕು ಎಂದು ಆಗ್ರಹಿಸಿದರು.

ನನ್ನ ಜೀವನದ ಹೋರಾಟ ಇದ್ದದ್ದೇ ಹೆಚ್.ಡಿ.ರೇವಣ್ಣ ಅವರ ವಿರುದ್ಧ. ನನ್ನ ಹೋರಾಟಕ್ಕೆ ನಿಜವಾದ ನ್ಯಾಯ ಸಿಕ್ಕಿದೆ ಎಂದುಕೊಂಡಿದ್ದೆ. ಇದನ್ನೇ ಕೆಲ ಕಿಡಿಗೇಡಿ ರಾಜಕಾರಣಿಗಳು ಅಸ್ತ್ರವಾಗಿ ಬಳಸಿಕೊಳ್ಳುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ ಅವರು; ಎಸ್‌ಐಟಿ ಮುಖ್ಯಸ್ಥರು ಹಾಗೂ ತನಿಖಾಧಿಕಾರಿಗಳನ್ನ ಎರಡು ಸಲ ಭೇಟಿಯಾಗಿದ್ದೇನೆ. ಸಾಕ್ಷಿಯನ್ನಾಗಿ ನನ್ನ ಹೇಳಿಕೆ ಪಡೆದಿದ್ದಾರೆ. ಆದರೆ, ಕೆಲ ಕಹಿ ಸತ್ಯಗಳನ್ನು ಹೇಳಲೇಬೇಕಿದೆ. ತಡೆಯಾಜ್ಞೆ ಇದ್ದರೂ ಅಶ್ಲೀಲ ವೀಡಿಯೋಗಳಿದ್ದ ಪೆನ್‌ಡ್ರೈವ್‌ಗಳನ್ನು ಹಂಚಿರುವ ಬಗ್ಗೆ ಹಾಸನದಲ್ಲಿ ಎಫ್‌ಐಆರ್ ಆಗಿದೆ. ಅಶ್ಲೀಲ ವೀಡಿಯೋ ಆಗಿದ್ದರೂ ಹೆಣ್ಣು ಮಕ್ಕಳ ಮುಖವನ್ನು ಮರೆಮಾಚಿಲ್ಲ ಎಂದು ಅವರು ಕಿಡಿಕಾರಿದರು. ಪ್ರಜ್ವಲ್ ರೇವಣ್ಣ ಅವರ ಮಾಜಿ ಕಾರು ಚಾಲಕ ಕಾರ್ತಿಕ್ ನನ್ನ ಕಚೇರಿಗೆ ಬಂದು ನನ್ನ ಕೈಗೆ ಕಾಪಿ ಕೊಟ್ಟಿದ್ದ. ಇದರ ಜತೆಗೆ ಒಂದು ಪೆನ್‌ಡ್ರೈವ್ ಸಹ ಕೊಟ್ಟಿದ್ದ. ನಾನು ವಿಚಾರಣೆಗೆ ಹೋದಾಗ ಎಸ್‌ಐಟಿ ಅಧಿಕಾರಿಗಳು ನನ್ನ ಹೇಳಿಕೆ ಪಡೆದಿದ್ದಾರೆ. ನನ್ನ ಬಳಿ ಇದ್ದ ದಾಖಲೆಗಳನ್ನು ನೀಡಿದ್ದೇನೆ. ನಾನು ಹೇಳಿಕೆಯಲ್ಲಿ ಬಹಳ ಪ್ರಮುಖ ಅಂಶಗಳನ್ನೇ ಉಲ್ಲೇಖ ಮಾಡಿದ್ದೇನೆ ಎಂದು ಅವರು ಮಾಹಿತಿ ನೀಡಿದರು.

ಪುಟ್ಟರಾಜು ಅಲಿಯಾಸ್ ಪುಟ್ಟಿ ಎನ್ನುವವರ ಮೂಲಕ ಪೆನ್‌ಡ್ರೈವ್ ಬೆಂಗಳೂರಿಗೆ ತಲುಪಿತು. ಮುಖ್ಯಮಂತ್ರಿಗಳು ರಹಸ್ಯ ಸ್ಥಳವೊಂದರಲ್ಲಿ ಹಿರಿಯ ಅಧಿಕಾರಿಗಳನ್ನು ಭೇಟಿ ಮಾಡಿದ್ದಾರೆ ಎಂದು ಆರೋಪ ಮಾಡಿದ ದೇವರಾಜೇಗೌಡರು, ಇಡೀ ಪ್ರಸಂಗದ ಕಥಾನಾಯಕರೇ ಡಿಸಿಎಂ ಡಿಕೆಶಿ ಮತ್ತು ಸಿಎಂ ಸಿದ್ದರಾಮಯ್ಯ ಹಾಗೂ ಮತ್ತೋರ್ವ ಮಧ್ಯವರ್ತಿ (ಎಲ್.ಆರ್.ಶಿವರಾಮೇಗೌಡರು). ಆದರೆ, ನೊಂದ ಮಹಿಳೆಯರಿಗೆ ನ್ಯಾಯ ಕೊಡಿಸುವುದು ಬಿಟ್ಟು ರಾಜಕೀಯ ಸ್ವಾರ್ಥಕ್ಕಾಗಿ ಇವರು ಷಡ್ಯಂತ್ರ ನಡೆಸಿದ್ದಾರೆ. ಅಲ್ಲದೆ, ಈ ಪ್ರಕರಣವನ್ನು ಬಿಜೆಪಿಗೆ ಮೆತ್ತಲು ಪ್ರಯತ್ನ ಮಾಡಿದ್ದಾರೆ. ಅದಕ್ಕೆ ಬೇಸತ್ತು ನಾನು ಮಾಧ್ಯಮಗಳ ಮುಂದೆ ಸತ್ಯ ಹೇಳಿದ್ದೇನೆ ಎಂದು ಅವರು ತಿಳಿಸಿದರು.

ಕರೆ ಮಾಡಿ ಆಮಿಷ ಒಡ್ಡಿದ್ದ ಡಿಕೆಶಿ: ಭಾನುವಾರ ಸಂಜೆವರೆಗೂ ನನ್ನ ಜತೆ ಡಿ.ಕೆ.ಶಿವಕುಮಾರ್, ಎಲ್.ಆರ್.ಶಿವರಾಮೇಗೌಡರು ಸಂಧಾನ ನಡೆಸಿದರು. ನಾನು ಒಪ್ಪದೇ ಹೋದಾಗ ಆ ದಿನವೇ ಹಿರಿಯ ಅಧಿಕಾರಿಗಳ ಸಭೆ ನಡೆಸಿದ್ದಾರೆ. ಮೂರು ದಿನಗಳ ಹಿಂದೆ ರಾತ್ರಿ 12.48 ಗಂಟೆ ವೇಳೆಗೆ ಡಿ.ಕೆ.ಶಿವಕುಮಾರ್ ಅವರೇ ಫೋನ್ ಕರೆ ಮಾಡಿದರು. ಜೆಡಿಎಸ್–ಬಿಜೆಪಿ ಜತೆ ಕೈ ಜೋಡಿಸಿರುವುದರಿಂದ ಮೋದಿ ಅವರನ್ನು ಟಾರ್ಗೆಟ್ ಮಾಡಿ ಇಷ್ಟೆಲ್ಲ ಮಾಡಬೇಕಾಯಿತು. ಅದಕ್ಕೆ ನನ್ನ ಜೊತೆಯಲ್ಲಿ ಬರುವಂತೆ ಕರೆದರು. ಮೇ 29ನೇ ತಾರೀಖು ರಾತ್ರಿ ಡಿ.ಕೆ.ಶಿವಕುಮಾರ್ ಅವರು ನನ್ನ ಬಳಿ ಮಾತನಾಡಿದ್ದಾರೆ. ಇವತ್ತು ನನ್ನ ಬಳಿ ಇರುವ ಪೆನ್‌ಡ್ರೈವ್‌ನಲ್ಲಿ ಇದ್ಯಾವ ವಿಡಿಯೋ ಇಲ್ಲ. ಈಗ ನೋಡಿದರೆ ಬೇರೆ ವಿಡಿಯೋಗಳು ಬರುತ್ತಿವೆ. ಕಾರು ಚಾಲಕ ಬಹಳ ಟೆಕ್ನಾಲಜಿ ಇಟ್ಟುಕೊಂಡಿದ್ದಾನೆ ಎಂದರು ದೇವರಾಜೇಗೌಡ. ಪ್ರಜ್ವಲ್ ರೇವಣ್ಣ ವಿಡಿಯೋದಲ್ಲಿ ಮಿಕ್ಸಿಂಗ್ ಆಗಿದೆ. ಅದಕ್ಕೆ ನನ್ನಲ್ಲಿರುವ ದಾಖಲೆಗಳನ್ನು ಸಿಬಿಐಗೆ ಕೊಡುತ್ತಿದ್ದೇನೆ. 2 ಗಂಟೆ 31 ನಿಮಿಷ ನನ್ನಜತೆ ಮಾತನಾಡಿರುವ ಆಡಿಯೋ ನನ್ನ ಬಳಿಯೇ ಇದೆ. ಇದನ್ನು ಈಗಲೇ ಬಿಡುಗಡೆ ಮಾಡಿದರೆ ಆಡಿಯೋ ಎಲ್ಲವೂ ತಿರುಚುತ್ತಾರೆ. ಹೀಗಾಗಿ ನಾನು ಬಿಡುಗಡೆ ಮಾಡಲ್ಲ. ಸಿಬಿಐ ತನಿಖೆಗೆ ಎಲ್ಲ ದಾಖಲೆ ಕೊಡುತ್ತೇನೆ. ನಮ್ಮ ಸಂಸ್ಕೃತಿ ಹೆಣ್ಣು ಮಕ್ಕಳ ಮಾನ ಹರಾಜು ಹಾಕೋದಲ್ಲ, ಮೈತ್ರಿ ಮಾಡಿಕೊಂಡಿರುವ ಬಿಜೆಪಿಯನ್ನು ಹಣಿಯಲು ಈ ರೀತಿ ಮಾಡಿದ್ದಾರೆ ಎಂದು ಅವರು ದೂರಿದರು.

ಮುಖ್ಯಮಂತ್ರಿಗಳೇ ಈ ಪ್ರಕರಣವನ್ನು ಸಿಬಿಐಗೆ ಕೊಡಿ. ಇಲ್ಲವಾದಲ್ಲಿ ನಾವೇ ವಕೀಲರು ಹೋರಾಟ ಮಾಡಿ ಸಿಬಿಐಗೆ ಕೊಡಿಸುತ್ತೇವೆ ಎಂದು ದೇವರಾಜೇಗೌಡ ಸವಾಲು ಹಾಕಿದರು. ವಕೀಲ ವಿವೇಕ್ ಸುಬ್ಬಾರೆಡ್ಡಿ ಸೇರಿದಂತೆ ಹಲವಾರು ವಕೀಲರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಸತ್ತು ತೇಲುತ್ತಿವೆ ಅಪಾರ ಮೀನುಗಳು



ಕೆರೆಯ ಒಡಲಿಗೆ ಯುಜಿಡಿ ಹಾಗೂ ವಿಷಯುಕ್ತ ರಾಸಾಯನಿಕ ಸೇರದಂತೆ ತಡೆಯಲು ಈವರೆಗೆ ಸಾಧ್ಯವಾಗಿಲ್ಲ. ಹಲವು ತಿಂಗಳ ಬಳಿಕ ಮಳೆಯಾದಾಗ ಪ್ರತಿ ಬಾರಿಯೂ ಮೀನುಗಳು ಬಲಿಯಾಗುತ್ತವೆ. ಈ ಬಾರಿ ಲಕ್ಷಾಂತರ ಮೀನುಗಳು ಸತ್ತಿರುವುದು ಆತಂಕಕಾರಿಯಾಗಿದೆ. ಗಂಭೀರ ಪರಿಸ್ಥಿತಿಯ ಅರಿವಿಲ್ಲದ ಮೈಸೂರು ನಗರಪಾಲಿಕೆ ಹಾಗೂ ಹೂಟಗಳ್ಳಿ ನಗರಸಭೆ ಅಧಿಕಾರಿಗಳು ಪರಸ್ಪರ ದೂಷಿಸಿಕೊಳ್ಳುತ್ತಾರೆಯೇ ವಿನಃ ಕೆರೆ ಹಾಗೂ ಇಲ್ಲಿನ ಜಲಚರಗಳ ಸಂರಕ್ಷಣೆಗೆ ಕಿಂಚಿತ್ತೂ ಯೋಚಿಸಿಲ್ಲ. ಯುಜಿಡಿ ಹಾಗೂ ವಿಷಯುಕ್ತ ರಾಸಾಯನಿಕ ಕೆರೆಯ ಒಡಲು ಸೇರದಂತೆ ಕ್ರಮ ವಹಿಸುವ ಪ್ರಯತ್ನವನ್ನೂ ಮಾಡಿಲ್ಲ. ನಮ್ಮ ಕಡೆಯಿಂದ ಯಾವುದೇ ತೊಂದರೆಯಾಗಿಲ್ಲ ಎಂದು ಸಬೂಬು ಹೇಳಿ, ಜವಾಬ್ದಾರಿಯಿಂದ ನುಣುಚಿ ಕೊಳ್ಳುತ್ತಿದ್ದಾರೆ. ಜಿಲ್ಲಾಡಳಿತದ ಸೂಚನೆಗೂ ಕಿಂಚಿತ್ತೂ ಕಿಮ್ಮತ್ತು ನೀಡದೆ ಉದ್ಧಟತನ ಮುಂದುವರೆಸಿದ್ದಾರೆ.

ಜಟಾಪಟಿ ಅವಾಂತರ: ಮಳೆ ನೀರನ್ನು ತ್ಯಾಜ್ಯ ನೀರು ಸಂಸ್ಕರಣಾ ಘಟಕ(ಎಸ್‌ಟಿಪಿ)ದ ಮೂಲಕ ಶುದ್ಧೀಕರಿಸಿದ ನಂತರ ಕೆರೆಗೆ ಹರಿಸುವ ವ್ಯವಸ್ಥೆ ಇದ್ದರೂ ಎರಡು ರಾಜಕಾಲುವೆಗಳು ಕೆರೆಗೆ ನೇರ ಸಂಪರ್ಕ ಹೊಂದಿವೆ. ಹೂಟಗಳ್ಳಿ ನಗರಸಭೆ ವ್ಯಾಪ್ತಿಯ ರಾಜಕಾಲುವೆ ಮೂಲಕ ಕಾರ್ಖಾನೆಗಳ ರಾಸಾಯನಿಕಯುಕ್ತ ನೀರು ಹಾಗೂ ನಗರ ಪಾಲಿಕೆ ವ್ಯಾಪ್ತಿಯ ರಾಜಕಾಲುವೆಯಿಂದ ಬಡಾವಣೆಗಳ ಯುಜಿಡಿ ನೀರು ಕೆರೆಯ ಒಡಲಿಗೆ ಹರಿಯುತ್ತಿದೆ. ಕೆಲ ಲಾಡ್ಜ್‌ಗಳು, ಹೋಟೆಲ್‌ಗಳು ಇನ್ನಿತರ ವಾಣಿಜ್ಯ ಕಟ್ಟಡಗಳ ಶೌಚಾಲಯದ ಕೊಳಚೆ ನೀರು ರಾಜಕಾಲುವೆ ಮೂಲಕ ಕೆರೆಗೆ ಸೇರುತ್ತಿದೆ. ಆದರೆ ನಮ್ಮ ವ್ಯಾಪ್ತಿಯ ರಾಜಕಾಲುವೆಯಿಂದ ಕೆರೆಗೆ ಮಾರಕವಾಗುವ ತ್ಯಾಜ್ಯ ಹರಿಯುತ್ತಿಲ್ಲ ಎಂಬುದು ನಗರ ಪಾಲಿಕೆ ಹಾಗೂ ನಗರಸಭೆ ಅಧಿಕಾರಿಗಳ ಸಿದ್ಧ ಉತ್ತರ. ಈ ಎರಡೂ ಸ್ಥಳೀಯ ಸಂಸ್ಥೆಗಳ ಜಟಾಪಟಿ, ಶೂನ್ಯ ಪರಿಸರ ಕಾಳಜಿಯಿಂದ ಹೆಬ್ಬಾಳು ಕೆರೆಗೆ ಆಪತ್ತು ಬಂದೊದಗಿದೆ.

ನೆಪಕಷ್ಟೇ ಸೂಕ್ಷ್ಮ ವಲಯ: ಕೆರೆ ಸುತ್ತಲಿನ ನಿಗದಿತ ಪ್ರದೇಶವನ್ನು ಪರಿಸರ ಸೂಕ್ಷ್ಮ ವಲಯ ಎಂದು ಘೋಷಿಸಲಾಗಿದೆ. ಆದರೆ ಒತ್ತುವರಿ ಇನ್ನೂ ನಿಂತಿಲ್ಲ. ಕೆರೆ ಪ್ರದೇಶಕ್ಕೆ ಹೊಂದಿಕೊಂಡಂತೆ ಕೆಲವು ಪಟಾಕಿ ಹಾಗೂ ರಾಸಾಯನಿಕ ಕೈಗಾರಿಕೆಗಳು ಕಾರ್ಯಾಚರಿಸುತ್ತಿವೆ. ಕೆಲ ತಿಂಗಳ ಹಿಂದೆ ಪಟಾಕಿ ಗೋದಾಮಿನಲ್ಲಿ ಅಗ್ನಿ ಅವಘಡ ಸಂಭವಿಸಿ, ಭಾರಿ ಪ್ರಮಾಣದ ಪಟಾಕಿ ಸಿಡಿದು ಕೆರೆಗೂ ಬಿದ್ದಿತ್ತು. ಈ ಘಟನೆಯಿಂದಾದರೂ ಅಧಿಕಾರಿಗಳು ಎಚ್ಚೆತ್ತುಕೊಂಡಿದ್ದರೆ ಜಲಚರಗಳ ಮಾರಣಹೋಮ ತಪ್ಪುತ್ತಿತ್ತು.

ಇಂದು ಪರಿಶೀಲನೆ

ವಿಷಯ ತಿಳಿದ ಕೂಡಲೇ ಇನ್ಫೋಸಿಸ್ ಫೌಂಡೇಷನ್‌ನ ಪ್ರತಿನಿಧಿ ಅನಂತರಾಜ್ ರೊಂದಿಗೆ ಕೆರೆ ಬಳಿ ಪರಿಶೀಲನೆ ನಡೆಸಿದ್ದೇನೆ. ನಮ್ಮ ವ್ಯಾಪ್ತಿಯ ಕೆಮಿಕಲ್ ಫ್ಯಾಕ್ಟರಿಗಳಿಂದ ಡಿಸ್ಚಾರ್ಜ್ ಕುಡುಬಂದಿಲ್ಲ. ಕಾರ್ಪೋರೇಷನ್ ವ್ಯಾಪ್ತಿಯ ರಾಜಕಾಲುವೆಯಿಂದ ಸಾಯುವ ಪದಾರ್ಥಗಳು ಹೆಚ್ಚು ಪ್ರಮಾಣದಲ್ಲಿ ಕೆರೆಗೆ ಸೇರುತ್ತಿದೆ. ಆದಾಗ್ಯೂ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳೊಂದಿಗೆ ಮಂಗಳವಾರ ಜಂಟಿ ಪರಿಶೀಲನೆ ನಡೆಸಲಾಗುವುದು. ಹೂಟಗಳ್ಳಿ ಗ್ರಾಮದಿಂದ ಬೊಮ್ಮನಹಳ್ಳಿ ಕೆರೆ, ಅಲ್ಲಿಂದ ಸಂಪರ್ಕವಿರುವ ಕಾಲುವೆ ಯುದ್ದಕ್ಕೂ ಪರಿಶೀಲನೆ ನಡೆಸಲಾಗುವುದು. ಹೆಬ್ಬಾಳು ಕೆರೆ ಹಿತದೃಷ್ಟಿಯಿಂದ ಆದ್ಯತೆ ಮೇರೆಗೆ ಕಾರ್ಯ ಯೋಜನೆ ರೂಪಿಸಲಾಗುವುದು.



–ಬಿ.ಎನ್.ಚಂದ್ರಶೇಖರ್, ಪೌರಾಯುಕ್ತರು, ಹೂಟಗಳ್ಳಿ ನಗರಸಭೆ

ಅಧಿಕಾರಿಗಳ ನಿರ್ಲಕ್ಷ್ಯ

ಹೆಬ್ಬಾಳು ಕೆರೆಗೆ ತ್ಯಾಜ್ಯ ಹಾಗೂ ಕೊಳಚೆ ನೀರು ಸೇರದಂತೆ ಸೂಕ್ತ ಕ್ರಮ ಕೈಗೊಳ್ಳುವಂತೆ ಮೈಸೂರು ನಗರ ಪಾಲಿಕೆ ಹಾಗೂ ಹೂಟಗಳ್ಳಿ ನಗರ ಸಭೆಗೆ ಮನವಿ ಮಾಡಿದರೂ ಯಾವುದೇ ಕ್ರಮ ವಹಿಸಿಲ್ಲ. ಜಿಲ್ಲಾಧಿಕಾರಿಗಳು ಪರಿಶೀಲಿಸಿದ ವೇಳೆ ಕೆಮಿಕಲ್ ಕಾರ್ಖಾನೆಗಳಿಗೆ ನೋಟಿಸ್ ನೀಡುವಂತೆ ಕೆಐಎಡಿಬಿ ಹಾಗೂ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳಿಗೆ ಸೂಚಿಸಿದ್ದರು. ಆದರೂ ಈ ನಿಟ್ಟಿನಲ್ಲಿ ಯಾವುದೇ ಕ್ರಮವಾಗಿಲ್ಲ. ಕೆಮಿಕಲ್ ಫ್ಯಾಕ್ಟರಿಯವರು ಮಳೆ ಬಂದ ಸಂದರ್ಭದಲ್ಲಿ ವಿಷಯುಕ್ತ ನೀರನ್ನು ಪಂಪ್ ಮಾಡಿ ಚರಂಡಿಗೆ ಬಿಡುತ್ತಾರೆ. ಅದು ರಾಜಕಾಲುವೆ ಮೂಲಕ ಕೆರೆಗೆ ಸೇರಿ ಈ ರೀತಿಯ ಅನಾಹುತವಾಗುತ್ತಿದೆ.



–ಆರ್.ರವಿ(ಡೆಲ್ಲಿ), ಅಧ್ಯಕ್ಷರು ಹೆಬ್ಬಾಳು ಕೆರೆ ಹಿತರಕ್ಷಣಾ ಸಮಿತಿ

ನಿರ್ಲಕ್ಷಿಸಿದರೆ ಕಾದಿದೆ ಆಪತ್ತು...

ಈಗಲೂ ನಿರ್ಲಕ್ಷ್ಯ ತಾಳಿದರೆ ಹೆಬ್ಬಾಳು ಕೆರೆಗೆ ಅಪಾಯ ಕಟ್ಟಿಟ್ಟಬುತ್ತಿ. ಯುಜಿಡಿ ಹಾಗೂ ರಾಸಾಯನಿಕಯುಕ್ತ ನೀರು ನಿರಂತರವಾಗಿ ಕೆರೆಯ ಒಡಲು ಸೇರಿದರೆ ಇಲ್ಲಿನ ವೈವಿಧ್ಯಮಯ ಜಲಚರಗಳು ನಾಶವಾಗುತ್ತವೆ. ಅಕ್ಕಪಕ್ಕದ ವಸತಿ ಪ್ರದೇಶಗಳಲ್ಲಿ ಸಾಂಕ್ರಾಮಿಕ ರೋಗಗಳು ಹರಡಬಹುದು. ಹಚ್ಚ ಹಸಿರಿನ ಪ್ರಕೃತಿ ಮಡಿಲಲ್ಲಿರುವ ಸುಂದರ ಜಲತಾಣ, ಕೊಳಚೆ ಗುಂಡಿಯಾಗಿ ಮುಂದೊಂದು ದಿನ ಕಣ್ಮರೆಯಾಗಬಹುದು. ಹಸಿರು ಮಾಯವಾಗಿ ಭಣಗುಡಬಹುದು. ಅಧಿಕಾರಿಗಳ ಸಣ್ಣ ನಿರ್ಲಕ್ಷ್ಯಕ್ಕೆ ಬಹುದೊಡ್ಡ ನಷ್ಟವಾಗಬಹುದು. ಹಾಗಾಗಿ ಹೆಬ್ಬಾಳು ಕೆರೆ ಸಂರಕ್ಷಣೆಗೆ ಜಿಲ್ಲಾಡಳಿತ ತಕ್ಷಣವೇ ಪರಿಣಾಮಕಾರಿ ಕ್ರಮ ಕೈಗೊಳ್ಳುವ ಅನಿವಾರ್ಯತೆ ಇದೆ.

ಡಿಸಿಗೂ ಡೋಂಟ್ ಕೇರ್...

ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರು ಹೆಬ್ಬಾಳು ಕೆರೆಗೆ 2023ರ ಜುಲೈ ತಿಂಗಳಲ್ಲಿ ಭೇಟಿ ನೀಡಿ, ಪರಿಶೀಲಿಸಿದ್ದರು. ಮೈಸೂರು ನಗರಪಾಲಿಕೆ, ಹೂಟಗಳ್ಳಿ ನಗರಸಭೆ, ಕೆಐಎಡಿಬಿ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಇನ್ಫೋಸಿಸ್ ಪ್ರತಿಷ್ಠಾನದ ಪ್ರತಿನಿಧಿಗಳು ಮತ್ತು ಹೆಬ್ಬಾಳು ಕೆರೆ ಸಂರಕ್ಷಣಾ ಸಮಿತಿಯವರೊಂದಿಗೆ ಸಮಾಲೋಚನೆ ನಡೆಸಿ, ವಾಸ್ತವ ಸ್ಥಿತಿಯನ್ನು ಕಣ್ಣಾರೆ ಕಂಡಿದ್ದರು. ರಾಜಕಾಲುವೆಗಳು ಸಂಪರ್ಕಿಸಿರುವ ಸ್ಥಳದಲ್ಲಿ ಶೇಖರಣೆಯಾಗಿದ್ದ ತ್ಯಾಜ್ಯ ವಿಲೇವಾರಿ ಮಾಡದ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳಿಗೆ ಚಾಟಿ ಬೀಸಿದ್ದರು. ಕಾರ್ಖಾನೆಗಳಿಂದ ರಾಸಾಯನಿಕ ಯುಕ್ತ ನೀರು ಕೆರೆಗೆ ಸೇರುತ್ತಿದೆ. ಕೆಲವು ಕೆಮಿಕಲ್ ಕಾರ್ಖಾನೆಯವರು ವಿಷಯುಕ್ತ ನೀರನ್ನು ಚರಂಡಿಗೆ ಪಂಪ್ ಮಾಡುತ್ತಾರೆ. ಅದು ಮಳೆ ಬಂದಾಗ ಕೆರೆಗೆ ಸೇರಿ ಜಲಚರಗಳು ನಾಶವಾಗುತ್ತಿವೆ ಎಂಬ ಕೆರೆ ಸಂರಕ್ಷಣೆ ಸಮಿತಿ ಸದಸ್ಯರ ದೂರನ್ನು ಗಂಭೀರವಾಗಿ ಪರಿಗಣಿಸಿದ್ದರು. ಅಲ್ಲದೆ ಕೆಐಎಡಿಬಿ ಹಾಗೂ ಮಾಲಿನ್ಯ ನಿಯಂತ್ರಣ ಮಂಡಳಿಯವರು ಪರಿಶೀಲನೆ ನಡೆಸಿ, ಅಂತಹ ಕಾರ್ಖಾನೆಗಳಿಗೆ ನೋಟೀಸ್ ನೀಡಿ, ಕ್ರಮ ವಹಿಸುವಂತೆ ಖಡಕ್ ಸೂಚನೆ ನೀಡಿದ್ದರು. ಆದರೆ 10 ತಿಂಗಳಾದರೂ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲ. ಈ ನಿರ್ಲಕ್ಷ್ಯದಿಂದಲೇ ಇದೀಗ ಲಕ್ಷಾಂತರ ಜಲಚರಗಳ ಸಾಮೂಹಿಕ ಹತ್ಯೆ ನಡೆದಿದೆ ಎಂದು ಸಾರ್ವಜನಿಕರು ಬೇಸರ ವ್ಯಕ್ತಪಡಿಸಿದ್ದಾರೆ.

ಶ್ರೀನಿವಾಸ್ ಪ್ರಸಾದರಿಗೆ ನುಡಿ ನಮನ



ಮೈಸೂರಿನ ಚಾಮುಂಡಿಪುರಂನಲ್ಲಿರುವ ತಗಡೂರು ರಾಮಚಂದ್ರರಾವ್ ಉದ್ಯಾನವನದಲ್ಲಿ ಕೃಷ್ಣರಾಜ ಯುವ ಬಳಗದ ವತಿಯಿಂದ ಸಂಸದ ವಿ.ಶ್ರೀನಿವಾಸ್ ಪ್ರಸಾದರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮೈಸೂರು,ಮೇ 6(ಎಂಟಿವೈ)– ರಾಜ್ಯ ಹಾಗೂ ರಾಷ್ಟ್ರ ರಾಜಕಾರಣದಲ್ಲಿ ಮೌಲ್ಯಗಳನ್ನು ಕಾಪಾಡಿಕೊಂಡು ಅಪರೂಪ ರಾಜಕಾರಣಿ ಎನಿಸಿದ್ದ ವಿ.ಶ್ರೀನಿವಾಸ್‌ಪ್ರಸಾದ್ ಅವರು ರಾಜ್ಯದ ಕಂದಾಯ ಸಚಿವರಾಗಿ ಜಾರಿಗೊಳಿಸಿರುವ ಭೂಮಿ, ಮೈತ್ರಿ ಹಾಗೂ ಮನಸ್ವಿನಿ ಯೋಜನೆಗಳು ಅನೇಕರಿಗೆ ವರದಾನವಾಗಿ ಪರಿಣಮಿಸಿವೆ ಎಂದು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಚಾಮುಂಡಿಪುರಂನಲ್ಲಿರುವ ತಗಡೂರು ರಾಮಚಂದ್ರರಾವ್ ಉದ್ಯಾನವನದಲ್ಲಿ ಕೃಷ್ಣರಾಜ ಯುವ ಬಳಗ ಆಯೋಜಿಸಿದ್ದ ವಿ.ಶ್ರೀನಿವಾಸ್ ಪ್ರಸಾದ್ ಸಂತಾಪ ಸಭೆಯಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಅವರು, ಹಿರಿಯ ರಾಜಕಾರಣಿಯಾಗಿದ್ದ ವಿ.ಶ್ರೀನಿವಾಸ್ ಪ್ರಸಾದ್ ಯಾವುದೇ ಪಕ್ಷದಲ್ಲಿದ್ದರೂ ತಮ್ಮ ತತ್ವ ಸಿದ್ಧಾಂತಗಳಲ್ಲಿ ರಾಜೀ ಮಾಡಿಕೊಳ್ಳುತ್ತಿರಲಿಲ್ಲ. ಅವರು ಅಪರೂಪದ ವ್ಯಕ್ತಿತ್ವವುಳ್ಳ ರಾಜಕಾರಣಿಯಾಗಿದ್ದರು. ಇಂತಹ ವ್ಯಕ್ತಿತ್ವ ಸಿಗುವುದು ಬಹಳ ಅಪರೂಪ. ಎಲ್ಲಾ ಸಮುದಾಯಗಳಿಗೂ ಗೌರವ ನೀಡುತ್ತಿದ್ದ ಅವರು, ಎಲ್ಲಾ ಸಮುದಾಯಕ್ಕೆ ಸೇರಿದ ನಾಯಕರನ್ನು ಬೆಳೆಸಿದ್ದಾರೆ. ಅವರ ನಿಧನದಿಂದ ಸಮುದಾಯಕ್ಕೆ ತುಂಬಲಾರದ ನಷ್ಟ ಉಂಟಾಗಿದೆ ಎಂದು ವಿಷಾದಿಸಿದರು.

ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್ ಮಾತನಾಡಿ, ವಿ.ಶ್ರೀನಿವಾಸ್ ಪ್ರಸಾದ್ ನಿಷ್ಕಳಂಕ ರಾಜಕಾರಣಿ. ಅಪ್ಪಟ ಹೋರಾಟಗಾರರೂ ಆಗಿದ್ದರು. 50 ವರ್ಷದ ರಾಜಕಾರಣದಲ್ಲಿ ಶೋಷಿತರ ನೋವಿಗೆ ಸ್ಪಂದಿಸಿದ್ದಾರೆ. ರಾಜ್ಯ ಮತ್ತು ರಾಷ್ಟ್ರ ರಾಜಕಾರಣದಲ್ಲಿ ತಮ್ಮದೇ ಛಾಪು ಮೂಡಿಸಿದ್ದಾರೆ. ಅವರ ಅಗಲಿಕೆ ರಾಜಕೀಯ ಕ್ಷೇತ್ರಕ್ಕೆ ತುಂಬಲಾರದ ನಷ್ಟವನ್ನುಂಟು ಮಾಡಿದೆ. ಮೈಸೂರು ಭಾಗದಲ್ಲಿ ದೀನ–ದಲಿತರ, ಬಡವರ ಆಶಾಕಿರಣವಾಗಿದ್ದ ಅವರು ತಮ್ಮ ರಾಜಕೀಯ ಜೀವನದುದ್ದಕ್ಕೂ ತುಳಿತಕ್ಕೊಳಗಾದವರ ಶ್ರೇಯೋಭಿವೃದ್ಧಿಗಾಗಿ ಅವಿರತವಾಗಿ ಶ್ರಮಿಸುತ್ತಿದ್ದರು. ಅವರ ಆತ್ಮಕ್ಕೆ ದೇವರು ಶಾಂತಿ ನೀಡಲಿ ಎಂದರು.

ಕಾರ್ಯಕ್ರಮದಲ್ಲಿ ಪಾಲಿಕೆ ಮಾಜಿ ಸದಸ್ಯ ಸುನೀಲ್, ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಕೆ.ಆರ್. ಬ್ಯಾಂಕ್ ಉಪಾಧ್ಯಕ್ಷ ಬಸವರಾಜ ಬಸಪ್ಪ, ಕೃಷ್ಣರಾಜ ಯುವ ಬಳಗದ ಅಧ್ಯಕ್ಷ ನವೀನ್, ಮುಖಂಡರಾದ ಬ್ರಾಡ್‌ವೇ ಕಿರಣ್, ವಿನಯ್ ಕಣಗಾಲ್, ಗೌರಿಶಂಕರ್‌ನಗರದ ಶಿವು, ಪುರುಷೋತ್ತಮ್, ಅರಿವು ಸಂಸ್ಥೆ ಅಧ್ಯಕ್ಷ ಶ್ರೀಕಾಂತ್ ಕಶ್ಯಪ್, ಎಸ್.ಎನ್. ರಾಜೇಶ್, ವರುಣ ಮಹದೇವ್, ಚಕ್ರಪಾಣಿ ಇನ್ನಿತರರು ಪಾಲ್ಗೊಂಡಿದ್ದರು.

ಪ್ರಸಾದ್ ನೈಜ ಅಂಬೇಡ್ಕರ್ ವಾದಿಯಾಗಿದ್ದರು

ಧೀಮಂತ ನಾಯಕನಿಗೆ ಸಾಹಿತಿ ಬನ್ನೂರು ರಾಜು ನುಡಿ ನಮನ

ಮೈಸೂರು,ಮೇ6(ಎಂಟಿವೈ)–ನಡೆ–ನುಡಿಗಳೆರಡರಲ್ಲೂ ಅಂಬೇಡ್ಕರ್ ಅವರ ತತ್ವಾದರ್ಶಗಳನ್ನು ಅಳವಡಿಸಿಕೊಂಡು 5 ದಶಕಗಳ ಸುದೀರ್ಘ ಕಾಲದ ರಾಜಕಾರಣದಲ್ಲಿ ತಮ್ಮದೇ ಆದ ಛಾಪು ಮೂಡಿಸಿ ಶೋಷಿತರೆದೆಯ ಜೀವವಾಗಿದ್ದ ಅಪ್ರತಿಮ ದಲಿತ ನಾಯಕ, ಹಿರಿಯ ರಾಜಕೀಯ ಮುತ್ಸದ್ಧಿ ವಿ.ಶ್ರೀನಿವಾಸಪ್ರಸಾದ್ ಅವರು ನೈಜ ಅಂಬೇಡ್ಕರ್ ವಾದಿಯಾಗಿದ್ದರೆಂದು ಪತ್ರಕರ್ತರೂ ಆದ ಸಾಹಿತಿ ಬನ್ನೂರು ಕೆ.ರಾಜು ಹೇಳಿದರು.



ಮೈಸೂರಿನ ಕೃಷ್ಣಮೂರ್ತಿಪುರಂನ ನಮನ ಕಲಾಮಂಟಪದಲ್ಲಿ ಶ್ರೀಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಸಂಸದ ವಿ.ಶ್ರೀನಿವಾಸಪ್ರಸಾದ್ ಅವರಿಗೆ ನುಡಿನಮನ ಸಲ್ಲಿಸಲಾಯಿತು.

ನಗರದ ಕೃಷ್ಣಮೂರ್ತಿಪುರಂನ ನಮನ ಕಲಾಮಂಟಪದಲ್ಲಿ ಶ್ರೀಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಇಂದು ನಡೆದ ಇತ್ತೀಚೆಗಷ್ಟೇ ನಮ್ಮನ್ನಗಲಿದ ಕೇಂದ್ರ ಮತ್ತು ರಾಜ್ಯದ ಮಾಜಿ ಸಚಿವರೂ, ಹಾಲಿ ಸಂಸದರೂ ಆಗಿದ್ದ ನಾಡು ಮೆಚ್ಚಿದ ಮೌಲ್ಯಾಧಾರಿತ ರಾಜಕಾರಣಿ ವಿ.ಶ್ರೀನಿವಾಸಪ್ರಸಾದ್ ಅವರಿಗೆ ಸಲ್ಲಿಸಿದ ನುಡಿ ನಮನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ದಲಿತರು, ಶೋಷಿತರನ್ನು ತಾವು ಉದ್ಧಾರಮಾಡುವುದಾಗಿ ಅಂಬೇಡ್ಕರ್ ಹೆಸರು ಹೇಳಿಕೊಂಡು ಸ್ವಾರ್ಥ ರಾಜಕಾರಣ ಮಾಡುತ್ತಿರುವ ಕೆಲವು ರಾಜಕಾರಣಿಗಳಿಗೆ ಶ್ರೀನಿವಾಸಪ್ರಸಾದ್ ಅವರು ಸಿಂಹಸ್ವಪ್ನವಾಗಿದ್ದರು ಎಂದರು.

ಶೋಷಿತರ ಎದೆಯ ಹಾಡಾಗಿರುವ ಸಂವಿಧಾನ ಶಿಲ್ಪಿ, ವಿಶ್ವ ಜ್ಞಾನಿ, ಭಾರತ ರತ್ನ ಅಂಬೇಡ್ಕರ್ ಅವರನ್ನು ಕುರಿತು ದಲಿತ ಕವಿ ಸಿದ್ದಲಿಂಗಯ್ಯನವರು ಬರೆದಿರುವ "ನಾಡ ನಡುವಿನಿಂದ ಸಿಡಿದ ನೋವಿನ ಕೂಗೇ, ಆಕಾಶದ ಅಗಲಕ್ಕೂ ನಿಂತ ಆಲವೇ......" ಗೀತೆಯನ್ನು ಎಲ್ಲೇ ಕೇಳಿದರೂ ಭಾವುಕರಾಗಿ ಗಳಗಳನೆ ಅತ್ತುಬಿಡುತ್ತಿದ್ದ ಶ್ರೀನಿವಾಸ್‌ಪ್ರಸಾದರು ಅಂಬೇಡ್ಕರ್ ಅವರನ್ನು ಅಕ್ಷರಶಃ ಮನದಲ್ಲಿ ತುಂಬಿಕೊಂಡಿದ್ದರು. ಶೋಷಿತರ ಬದುಕು ಪಾವನಗೊಳಿಸಿದ ಪುಣ್ಯಾತ್ಮ ಬಾಬಾ ಸಾಹೇಬರ ಕಷ್ಟಕರ ಬದುಕೇ ನಮಗಿಂದು ಸುಖಕರವಾಗಿದೆ ಎಂದು ತಾವು ಬದುಕಿರುವ ತನಕವೂ ಹೇಳುತ್ತಾ ಪ್ರತಿಯೊಬ್ಬರೂ ಅಂಬೇಡ್ಕರ್ ಅವರನ್ನು ಆರಾಧಿಸುವುದಕ್ಕಿಂತ ಹೆಚ್ಚಾಗಿ ಅವರ ತತ್ವಾದರ್ಶಗಳನ್ನು ಅನುಸರಿಸಬೇಕೆಂದು ಹೇಳಿದರು.

ಪ್ರಸಾದ್ ಅವರು ತಮ್ಮಿಡೀ ಜೀವನದಲ್ಲಿ ಯಾರನ್ನೂ ಹೆದರಿಸಲಿಲ್ಲ. ಹಾಗೆಯೇ ಯಾರಿಗೂ ಹೆದರಲಿಲ್ಲ. ತಮ್ಮ ಜನೋಪಯೋಗಿ ಗುಣದಿಂದ ದಲಿತರು ಮಾತ್ರವಲ್ಲದೆ ದಲಿತೇತರ ಪ್ರತಿಯೊಂದು ವರ್ಗವನ್ನೂ ಪ್ರೀತಿಯಿಂದ ಗೆದ್ದರು. ರಾಜಕಾರಣಿಗಳಲ್ಲೇ ಅವರ ವ್ಯಕ್ತಿತ್ವ ವಿಶಿಷ್ಟವಾದದ್ದು. ಪ್ರಸಾದ್ ಎಂದರೆ ಸ್ವಾಭಿಮಾನದ ಪ್ರತೀಕ. ಅವರು ಬಾಲ ಬುಡುಕ ರಾಜಕಾರಣವನ್ನು ಮಾಡಿದ್ದರೆ ಎಂದೋ ಈ ರಾಜ್ಯದ ಮುಖ್ಯಮಂತ್ರಿ ಆಗಿರುತ್ತಿದ್ದರು. ಆದರೆ ಅದು ಅವರಿಗೆ ಒಗ್ಗದ ವಿಷಯವಾಗಿತ್ತು. ತನ್ನ ಜನರೇ ತನ್ನ ಅಧಿಕಾರ. ತನ್ನ ಜನರೇ ತನ್ನ ಸರ್ವಸ್ವವೆಂದು ಶೋಷಿತರ ಸಂರಕ್ಷಣೆಗಾಗಿ ಬದುಕಿದರು. ಈಗ ಅಂತಹ ಧೀಮಂತ ದಲಿತ ನಾಯಕ ಅಮರರಾಗಿದ್ದಾರೆ. ನಾಡಿಗೆ ಅಪಾರ ನಷ್ಟವಾಗಿದ್ದು ಅದರಲ್ಲೂ ಮೈಸೂರು ಭಾಗಕ್ಕೆ ಪ್ರಸಾದ್‌ರಂತಹ ಮತ್ತೊಬ್ಬ ನಿಸ್ವಾರ್ಥ ದಲಿತ ನಾಯಕ ಸಿಗುವುದು ದುರ್ಲಭವೆಂದು ವಿಷಾದಿಸಿದರು.

ಸಂಸ್ಕೃತಿ ಚಿಂತಕ ಡಾ.ಕೆ.ರಘುರಾಮ್ ವಾಜಪೇಯಿ ಅವರು, ಶ್ರೀನಿವಾಸ್‌ಪ್ರಸಾದ್, ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಅವರ 50 ವರ್ಷಗಳ ರಾಜಕೀಯ ಬದುಕು, ಸಾಧನೆ ಹಾಗೂ ಸಿದ್ಧಿ ಕುರಿತಂತೆ ಸುದೀರ್ಘವಾಗಿ ಮಾತನಾಡಿ ನುಡಿ ನಮನ ಸಲ್ಲಿಸಿದರು.

ಸಂಸ್ಕೃತ ವಿದ್ವಾಂಸರಾದ ಲೇಖಕಿ ಡಾ.ಲೀಲಾ ಪ್ರಕಾಶ್ ಮಾತನಾಡಿದರು. ಮೈಸೂರು ಜಿಲ್ಲಾ ಬಿಜೆಪಿಯ ಮಹಿಳಾ ಘಟಕದ ಅಧ್ಯಕ್ಷೆ ರೇಣುಕಾ ರಾಜು ಅಧ್ಯಕ್ಷತೆ ವಹಿಸಿದ್ದರು. ಚಲನಚಿತ್ರರಂಗದ ಯುವ ನಾಯಕ ನಟ ಸುಪ್ರೀತ್, ಸಮಾಜಸೇವಕ ದೊರೆಸ್ವಾಮಿ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್ ಇನ್ನಿತರರಿದ್ದರು. ಪ್ರಾರಂಭದಲ್ಲಿ ಶ್ರೀಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷ ಬಸವ ರಾಜೇಂದ್ರಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿ, ಎಲ್ಲರನ್ನೂ ಆತ್ಮೀಯವಾಗಿ ಸ್ವಾಗತಿಸಿ, ಬರಮಾಡಿಕೊಂಡರು. ಕೊನೆಯಲ್ಲಿ ಎಲ್ಲರೂ ಶ್ರೀನಿವಾಸ್‌ಪ್ರಸಾದ್ ಅವರ ಭಾವಚಿತ್ರಕ್ಕೆ ಪುಷ್ಪ ನಮನದೊಡನೆ ಗೌರವ ಸಲ್ಲಿಸಿದರು.

ಬಿರುಗಾಳಿ ಮಳೆಗೆ ನೆಲಕಚ್ಚಿದ ಬಾಳೆ



ದುದ್ದಗೆರೆ, ಮೇ 6–ಶುಕ್ರವಾರ ಸಂಜೆ ಸುರಿದ ಭಾರೀ ಮಳೆಗೆ ಲಕ್ಷಾಂತರ ರೂ. ಮೌಲ್ಯದ ಕಟಾವಿಗೆ ಬಂದಿದ್ದ ಬಾಳೆ ಫಸಲು ನಾಶವಾಗಿರುವ ಘಟನೆ ಮೈಸೂರು ತಾಲೂಕಿನ ಪುಟ್ಟೇಗೌಡನಹುಂಡಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ರೈತ ಮಂಜುಪ್ರಕಾಶ್ ಅವರಿಗೆ ಸೇರಿದ ಐದು ಎಕರೆ ಜಮೀನಿನಲ್ಲಿ ಬಾಳೆ ಬೆಳೆದಿದ್ದರು. ಆದರೆ ಶುಕ್ರವಾರ ಸುರಿದ ಭಾರೀ ಮಳೆಗೆ ಕಟಾವಿಗೆ ಬಂದಿದ್ದ ಫಸಲು ಸಂಪೂರ್ಣ ನಾಶವಾಗಿದೆ. ರೈತ ಮಂಜುಪ್ರಕಾಶ್ ಮಾತನಾಡಿ, ಲಕ್ಷಾಂತರ ರೂ. ಸಾಲ ಮಾಡಿ ಬಾಳೆ ಬೆಳೆದಿದ್ದು, ಸಾಕಷ್ಟು ಆದಾಯದ ನಿರೀಕ್ಷೆಯಲ್ಲಿದ್ದೆ. ಆದರೆ ಬಿರುಗಾಳಿ ಮಳೆಗೆ ಫಸಲು ನಾಶವಾಗಿದೆ. ಹೀಗಾಗಿ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿ, ಸರ್ಕಾರದಿಂದ ಸೂಕ್ತ ಪರಿಹಾರ ಕೊಡಿಸಬೇಕು ಎಂದು ಒತ್ತಾಯಿಸಿದರು.

ಟಿಎನ್‌ಎನ್ ಆದರ್ಶ ವಿದ್ಯಾರ್ಥಿನಿಲಯಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 6– ಮೈಸೂರಿನ ನರಸಿಂಹರಾಜ ಮೊಹಲ್ಲಾದಲ್ಲಿರುವ ಟಿಎನ್‌ಎನ್ ಆದರ್ಶ ವಿದ್ಯಾರ್ಥಿ ನಿಲಯಕ್ಕೆ 2024–25ನೇ ಸಾಲಿಗೆ 5ನೇ ತರಗತಿಯಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಊಟ, ತಿಂಡಿ ಮತ್ತು ವಸತಿ ಮೂಲ ಸೌಕರ್ಯಗಳು ಉಚಿತವಾಗಿದ್ದು, ಎಲ್ಲಾ ಜಾತಿಯ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದ್ದು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಮೊದಲ ಆದ್ಯತೆ ನೀಡಲಾಗುವುದು. ನಿಗದಿತ ಅರ್ಜಿ ಫಾರಂಗಳನ್ನು ಮೇ ತಿಂಗಳ 6ರಿಂದ ನಿಲಯದ ಆಡಳಿತ ಕಚೇರಿಯಲ್ಲಿ ವಿತರಿಸಲಾಗುವುದು. ಆಸಕ್ತಿಯುಳ್ಳ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ಜಾತಿ, ಆದಾಯ ಪ್ರಮಾಣಪತ್ರ, ವರ್ಗಾವಣೆ ಪತ್ರ, 4 ಭಾವಚಿತ್ರ, ಆಧಾರ್ ಕಾರ್ಡ್ ಮುಂತಾದ ದಾಖಲಾತಿಗಳೊಡನೆ ಅರ್ಜಿ ಸಲ್ಲಿಸುವಂತೆ ನಿಲಯದ ಕಾರ್ಯದರ್ಶಿ ಎಂ.ಪಾಟೀಲ್ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊ.ನಂ. 9739385079, 9686768828 ರ ಮೂಲಕ ಸಂಪರ್ಕಿಸಬಹುದು.



ಮೈಸೂರು ಜಿಲ್ಲಾ ಪರಿಶಿಷ್ಟ ಜಾತಿ ವಿಭಾಗದ ಪ್ರಧಾನ ಕಾರ್ಯದರ್ಶಿಯಾಗಿ ನೇಮಕಗೊಂಡ ಚಿಕ್ಕನಹಳ್ಳಿ ಸಂತೋಷ ಅವರಿಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕೆ.ಮರಿಗೌಡರು ಆದೇಶ ಪ್ರತಿ ವಿತರಿಸಿದರು. ಈ ವೇಳೆ ಮೈಸೂರು ಜಿಲ್ಲಾ ಗ್ರಾಮಾಂತರ ಪರಿಶಿಷ್ಟ ಜಾತಿ ಅಧ್ಯಕ್ಷ ಸಿದ್ದರಾಜು, ಹೊಸಕಾಮನಕೊಪ್ಪಲು ಸ್ವಾಮಿ (ರಾಜೇಶ), ಓಬಿಸಿ ವಿಭಾಗದ ಪ್ರಧಾನ ಕಾರ್ಯದರ್ಶಿ ಯಾಚೇಗೌಡನಹಳ್ಳಿ ನಾಗೇಶ್ ಇನ್ನಿತರರು ಉಪಸ್ಥಿತರಿದ್ದರು.

ಪಿಹೆಚ್.ಡಿ ಪದವೀಧರರು



ಎಂ.ಸಿ. ಶಶಿಕುಮಾರ್

ಮೈಸೂರು, ಮೇ 6– ಡಾ. ಎಂ. ಚಂದ್ರಶೇಖರ ಅವರ ಮಾರ್ಗದರ್ಶನದಲ್ಲಿ ಎಂ.ಸಿ.ಶಶಿಕುಮಾರ್ ಅವರು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ಬಿ.ನಂದೀಶ

ಡಾ. ಖೈಸರ್ ಜಹಾನ್ ಬೇಗಂ ಅವರ ಮಾರ್ಗದರ್ಶನದಲ್ಲಿ ಬಿ. ನಂದೀಶ ಅವರು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ನಿವೃತ್ತ ಸಬ್‌ಇನ್ಸ್‌ಪೆಕ್ಟರ್ ದೇವಮ್ಮ ಇನ್ನಿಲ್ಲ



ಮೈಸೂರು, ಮೇ 6(ಆರ್‌ಕೆ)– ಮೈಸೂರಿನ ಜೆ.ಪಿ.ನಗರದಲ್ಲಿ ವಾಸವಾಗಿದ್ದ ನಿವೃತ್ತ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ದೇವಮ್ಮ(66) ಅವರು ತೀವ್ರ ಹೃದಯಾಘಾತದಿಂದ ಇಂದು ಸಂಜೆ ನಿಧನರಾದರು.

ಎದೆನೋವು ಕಾಣಿಸಿಕೊಂಡ ಕಾರಣ ಅವರನ್ನು ಅಪೊಲೋ ಬಿಜಿಎಸ್ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ, ಚಿಕಿತ್ಸೆ ಫಲಕಾರಿಯಾಗದೆ, ಸಂಜೆ 4 ಗಂಟೆ ವೇಳೆಗೆ ಕೊನೆಯುಸಿರೆಳೆದರು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೃತರು ಪತಿ ನಾರಾಯಣ, ಪುತ್ರ ಪ್ರತಾಪ್, ಪುತ್ರಿ ಮಮತ, ಸೊಸೆ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ನಾಳೆ (ಮೇ 7) ಬೆಳಗ್ಗೆ 11 ಗಂಟೆಗೆ ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಮೈಸೂರಿನ ಮೇಟಗಳ್ಳಿ, ನಜರ್‌ಬಾದ್, ವಿವಿ ಪುರಂ, ಲಕ್ಷ್ಮೀಪುರಂ, ವಿಜಯನಗರ ಹಾಗೂ ಮಹಿಳಾ ಪೊಲೀಸ್ ಠಾಣೆಗಳಲ್ಲಿ ಕರ್ತವ್ಯ ನಿರ್ವಹಿಸಿದ್ದ ದೇವಮ್ಮ ಅವರು 6 ವರ್ಷಗಳ ಹಿಂದೆ ಸಬ್‌ಇನ್ಸ್‌ಪೆಕ್ಟರ್ ಸೇವೆಯಿಂದ ನಿವೃತ್ತರಾಗಿದ್ದರು.

ಚಾಮರಾಜ ಜೋಡಿ ರಸ್ತೆಯಲ್ಲಿ ಫುಟ್‌ಪಾತ್ ತೆರವು



ಮೈಸೂರು, ಮೇ 6(ಆರ್‌ಕೆ)– ಮೈಸೂರಿನ ಚಾಮರಾಜ ಜೋಡಿ ರಸ್ತೆಯಲ್ಲಿ ಇಂದು ಬೆಳಗ್ಗೆ ಕಾರ್ಯಾಚರಣೆ ನಡೆಸಿದ ಮಹಾನಗರ ಪಾಲಿಕೆ ಅಧಿಕಾರಿಗಳು, ಅತಿಕ್ರಮ ಫುಟ್‌ಪಾತ್ ಒತ್ತುವರಿ ತೆರವುಗೊಳಿಸಿದ್ದಾರೆ.

ಆಟೋಮೊಬೈಲ್ ಅಂಗಡಿಯವರು ಹಾಗೂ ಕೆಲ ಸ್ಕೂಟರ್ ಮೆಕ್ಯಾನಿಕ್‌ಗಳು ಶಾಂತಲಾ ಟಾಕೀಸ್ ಬಳಿ ಫುಟ್‌ಪಾತ್ ಒತ್ತುವರಿ ಮಾಡಿದ್ದರಿಂದ ಪಾದಚಾರಿಗಳು ಓಡಾಡಲು ತೊಂದರೆಯಾಗುತ್ತಿದೆ ಎಂದು ಸಾರ್ವಜನಿಕರಿಂದ ದೂರು ಬಂದ ಹಿನ್ನೆಲೆಯಲ್ಲಿ ಕಾರ್ಯಪ್ರವೃತ್ತರಾದ ಪಾಲಿಕೆ ಪರಿಸರ ಇಂಜಿನಿಯರ್ ಮೈತ್ರಿ, ಆರೋಗ್ಯ ನಿರೀಕ್ಷಕರಾದ ಬಸವರಾಜು, ಕೃಷಿ ಹಾಗೂ ಸಿಬ್ಬಂದಿ ಒತ್ತುವರಿ ತೆರವುಗೊಳಿಸಿದರಲ್ಲದೆ 5000 ರೂ. ದಂಡ ವಿಧಿಸಿ ಎಚ್ಚರಿಕೆ ನೀಡಿದ್ದಾರೆ.

ಮೈಸೂರಲ್ಲಿ ಚುನಾವಣಾ ಚೆಕ್‌ಪೋಸ್ಟ್‌ಗಳ ತೆರವು



ಮೈಸೂರು, ಮೇ 6(ಆರ್‌ಕೆ)– ಲೋಕಸಭಾ ಸಾರ್ವತ್ರಿಕ ಚುನಾವಣೆ ಹಿನ್ನೆಲೆಯಲ್ಲಿ ವಾಹನಗಳ ತಪಾಸಣೆಗಾಗಿ ಮೈಸೂರು ನಗರ ಮತ್ತು ಹೆದ್ದಾರಿಗಳಲ್ಲಿ ಸ್ಥಾಪಿಸಲಾಗಿದ್ದ ಚೆಕ್‌ಪೋಸ್ಟ್‌ಗಳನ್ನು ತೆರವುಗೊಳಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ತಿಳಿಸಿದ್ದಾರೆ.



ಚುನಾವಣೆ ಮುಗಿದಿರುವ ಹಿನ್ನೆಲೆಯಲ್ಲಿ ಜಿಲ್ಲಾ ಚುನಾವಣಾಧಿಕಾರಿಗಳ ಸೂಚನೆಯಂತೆ ಚುನಾವಣೆಗಾಗಿ ಸ್ಥಾಪಿಸಲಾಗಿದ್ದ ಚೆಕ್‌ಪೋಸ್ಟ್‌ಗಳನ್ನು ತೆರವುಗೊಳಿಸಿ ಅಲ್ಲಿಗೆ ಮೂರು ಪಾಳಿಯಲ್ಲಿ ನಿಯೋಜಿಸಿದ್ದ ಪೊಲೀಸ್ ಸಿಬ್ಬಂದಿಯನ್ನು ಹಿಂಪಡೆಯಲಾಗಿದೆ ಎಂದು ತಿಳಿಸಿದರು.

ಆದರೆ, ಸುರಕ್ಷತೆ, ಭದ್ರತೆಗಾಗಿ ಮೈಸೂರು ನಗರಕ್ಕೆ ಸಂಪರ್ಕ ಕಲ್ಪಿಸಿರುವ ರಾಜ್ಯ, ರಾಷ್ಟ್ರೀಯ ಹೆದ್ದಾರಿ ಹಾಗೂ ಜಿಲ್ಲಾ ಮಟ್ಟದ ರಸ್ತೆಗಳಲ್ಲಿ ಸ್ಥಾಪಿಸಿರುವ ಶಾಶ್ವತ ಚೆಕ್‌ಪೋಸ್ಟ್‌ಗಳು ಎಂದಿನಂತೆ ಕಾರ್ಯನಿರ್ವಹಿಸುತ್ತಿವೆ ಎಂದು ಪೊಲೀಸ್ ಆಯುಕ್ತ ರಮೇಶ್ ತಿಳಿಸಿದರು.

ಮಹಾಜನ ಕಾಲೇಜಿನಲ್ಲಿ ಹ್ಯಾಕಥಾನ್ ಕಾರ್ಯಾಗಾರ



ಮೈಸೂರು, ಮೇ 6– ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಬಿಸಿಎ ವಿಭಾಗ, ಕಂಪ್ಯೂಟರ್ ಪ್ಯಾರಡೈಸ್ ಹಾಗೂ ಐಕ್ಯೂಎಸಿ ವತಿಯಿಂದ 'ಹ್ಯಾಕಥಾನ್' ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು.

ಕಂಪ್ಯೂಟರ್ ಪ್ಯಾರಡೈಸ್ ಸಂಸ್ಥಾಪಕ ಮತ್ತು ಟಾರಸ್ ಸಲ್ಯೂಷನ್ಸ್‌ನ ಎಸ್.ಆರೋಕಿಯಾ ಸ್ವಾಮಿ ಕಾರ್ಯಕ್ರಮ ಉದ್ಘಾಟಿಸಿ, ಹ್ಯಾಕಥಾನ್‌ಗಳ ಬಗ್ಗೆ ಪ್ರಾಯೋಗಿಕ ಸಲಹೆ, ಸೂಚನೆಗಳನ್ನು ನೀಡಿದರು. ಕಾರ್ಯಾಗಾರದ ಅವಧಿಗಳು, ಸಿದ್ಧಾಂತ, ಅಭ್ಯಾಸದ ಡೈನಾಮಿಕ್ ಮಿಶ್ರಣವಾಗಿದ್ದು, ಹ್ಯಾಕಥಾನ್ ಮೂಲಗಳು, ಅಪ್ಲಿಕೇಶನ್ ಅಭಿವೃದ್ಧಿ ಮತ್ತು ಪೈಥಾನ್ ಬಳಸಿಕೊಂಡು ಡೇಟಾಬೇಸ್ ನಿರ್ವಹಣೆ ಸೇರಿದಂತೆ ವ್ಯಾಪಕ ಶ್ರೇಣಿಯ ವಿಷಯಗಳನ್ನು ಒಳಗೊಂಡಿತ್ತು.

ಲ್ಯಾಬ್‌ನಲ್ಲಿನ ಹ್ಯಾಂಡ್ಸ್–ಆನ್ ಚಟುವಟಿಕೆಗಳು ಭಾಗವಹಿಸಿದವರಿಗೆ ಮೌಲ್ಯಯುತವಾದ ಪ್ರಾಯೋಗಿಕ ಅನುಭವವನ್ನು ಒದಗಿಸಿದವು, ತಂಡದ ಕೆಲಸ ಮತ್ತು ಸಮಸ್ಯೆಗಳನ್ನು ಪರಿಹರಿಸುವ ಕೌಶಲ್ಯಗಳನ್ನು ಪೋಷಕ ಪರಿಸರದಲ್ಲಿ ಬೆಳೆಸುತ್ತವೆ ಎಂದರು.

ಏಕದಿನ ಹ್ಯಾಕಥಾನ್ ಕಾರ್ಯಾಗಾರದಲ್ಲಿ ಭಾಗವಹಿಸಿದವರಿಗೆ ನಿರಂತರವಾಗಿ ವಿಕಸನಗೊಳ್ಳುತ್ತಿರುವ ತಂತ್ರಜ್ಞಾನ ಕಲಿಯಲು, ಸಹಯೋಗಿಸಲು ಮತ್ತು ಹೊಸತನವನ್ನು ಕಂಡುಕೊಳ್ಳಲು ಅನನ್ಯ ಅವಕಾಶಗಳನ್ನು ಒದಗಿಸಿತು. ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ ಮಾತನಾಡುತ್ತಾ, ತಾಂತ್ರಿಕ ಉದ್ಯಮದಲ್ಲಿ ಸಹಯೋಗ ಮತ್ತು ನಾವೀನ್ಯತೆಗಳ ಪರಿವರ್ತಕ ಸಾಮರ್ಥ್ಯವನ್ನು ಭಾಗವಹಿಸಿದವರಿಗೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಬಿಸಿಎ, ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥ ಎ.ರಾಧೇಶ್, ಪರೀಕ್ಷಾಂಗ ನಿರ್ವಹಣಾಧಿಕಾರಿ ಶೃತಿಪೊಣಚ್ಚ, ವಿಭಾಗಗಳ ಅಧ್ಯಾಪಕರು, ಅಧ್ಯಾಪಕೇತರರು, 75 ಸ್ಪರ್ಧಾರ್ಥಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಹಾಸನ ಸಂಸದ ಪ್ರಜ್ವಲ್ ಲೈಂಗಿಕ ದೌರ್ಜನ್ಯ ಪ್ರಕರಣ

ತನಿಖೆ ಶೀಘ್ರ ಪೂರೈಸಿ ಆರೋಪಿ ಶಿಕ್ಷಿಸಲು ಆಗ್ರಹ

ಮೈಸೂರು, ಮೇ 6(ಜಿಎ)–ಹಾಸನ ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣದ ತನಿಖೆಯನ್ನು ಶೀಘ್ರವಾಗಿ ಮುಗಿಸಿ ಆರೋಪಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂದು ಒತ್ತಾಯಿಸಿ ಎಸ್‌ಡಿಪಿಐ ವತಿಯಿಂದ ನಗರದ ಗಾಂಧಿ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ಸಾವಿರಾರು ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ಮತ್ತು ಲೈಂಗಿಕ ದೌರ್ಜನ್ಯ ನಡೆಸಿದ ಆರೋಪಕ್ಕೆ ಗುರಿಯಾಗಿದ್ದಾರೆ. ಈ ನೀಚ ಕೃತ್ಯಗಳನ್ನು ಚಿತ್ರೀಕರಣ ಮಾಡಿಕೊಂಡಿರುವುದಾಗಿ ಸಂತ್ರಸ್ತ ಮಹಿಳೆಯರೇ ದೂರು ನೀಡಿದ್ದಾರೆ. ಪ್ರಕರಣಗಳ ಸಂಖ್ಯೆ ಗಮನಿಸಿದರೆ ಇದು ದೇಶದ ಅತೀ ದೊಡ್ಡ ಸೆಕ್ಸ್ ಸ್ಕ್ಯಾಂಡಲ್ ಎನ್ನುವುದರಲ್ಲಿ ಅನುಮಾನವಿಲ್ಲ. ಈ ನೀಚ ಕೃತ್ಯದಲ್ಲಿ ಶಾಸಕ ರೇವಣ್ಣ ಭಾಗಿಯಾಗಿದ್ದಾರೆ. ಕೋಮು ದ್ವೇಷ ಹರಡುವ ಉದ್ದೇಶದಿಂದ



ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣದ ತನಿಖೆಯನ್ನು ಶೀಘ್ರವಾಗಿ ಮುಗಿಸಿ ಕಠಿಣ ಶಿಕ್ಷೆ ವಿಧಿಸಬೇಕೆಂದು ಒತ್ತಾಯಿಸಿ ಎಸ್‌ಡಿಪಿಐ ವತಿಯಿಂದ ನಗರದ ಗಾಂಧಿ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಹುಬ್ಬಳ್ಳಿಯ ನೇಹಾ ಪ್ರೇಮ ವೈಫಲ್ಯ ಕೊಲೆ ಪ್ರಕರಣವನ್ನು ಹಿಂದೂ–ಮುಸ್ಲಿಂ ನಡುವೆ ವಿವಾದ ಹುಟ್ಟು ಹಾಕುವ ರೀತಿ ಬಿಂಬಿಸಲಾಗುತ್ತಿದೆ. ಆದರೆ, ಮೋದಿಯವರು ಈ ಬಗ್ಗೆ ಒಂದೇ ಒಂದು ಮಾತನ್ನೂ ಆಡಿಲ್ಲ. ಪ್ರಕರಣದಲ್ಲಿ ನೊಂದಿರುವ ಹೆಣ್ಣು ಮಕ್ಕಳು ಹಿಂದೂಗಳಲ್ಲವೇ ಎಂದು ಕಿಡಿಕಾರಿದರು. ದೇಶದಲ್ಲಿ ಪ್ರತಿದಿನ 90ಕ್ಕೂ ಹೆಚ್ಚು ಅತ್ಯಾಚಾರ ಪ್ರಕರಣಗಳು ವರದಿಯಾಗುತ್ತಿವೆ. ಅವುಗಳ ಬಗ್ಗೆ ಮಾತನಾಡಲು ಮೋದಿಗೆ ಬಾಯಿ ಬರುವುದಿಲ್ಲ. ಅವರ ಮೈತ್ರಿ ಪಕ್ಷದ ಸಂಸದ ಇಷ್ಟು ದೊಡ್ಡ ಕೃತ್ಯವೆಸಗಿದ್ದರೂ ಮೌನವಾಗಿದ್ದಾರೆ. ಹುಬ್ಬಳ್ಳಿಯಲ್ಲಿ ಆರೋಪಿ ಮುಸ್ಲಿಂ ಎಂಬ ಕಾರಣಕ್ಕೆ ಪ್ರಕರಣವನ್ನು ರಾಷ್ಟ್ರ ಮಟ್ಟಕ್ಕೆ ಕೊಂಡೊಯ್ದು ಅಶಾಂತಿ ಸೃಷ್ಟಿಸಲು ಪ್ರಯತ್ನಿಸಿದರು. ಹಾಸನದಲ್ಲಿ ಶೋಷಣೆಗೆ ಒಳಗಾಗಿರುವವರು ಹಿಂದೂ ಹೆಣ್ಣು ಮಕ್ಕಳಲ್ಲವೆ? ಅವರಿಗೆ ನ್ಯಾಯ ಕೊಡಿಸುವ ಅವಶ್ಯಕತೆ ಇಲ್ಲವೆ? ಸರ್ಕಾರ ಪ್ರಕರಣದ ತನಿಖೆಯನ್ನು ಶೀಘ್ರವಾಗಿ ಮುಗಿಸಿ ನೀಚ ಕೃತ್ಯದಲ್ಲಿ ಭಾಗಿಯಾಗಿರುವವರಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ರಫತ್‌ಖಾನ್, ರಾಜ್ಯ ಉಪಾಧ್ಯಕ್ಷ ದೇವನೂರು ಪುಟ್ಟನಂಜಯ್ಯ, ರಾಜ್ಯ ಸಮಿತಿ ಸದಸ್ಯ ನೂರುದ್ದೀನ್ ಫಾರೂಕಿ ಸೇರಿದಂತೆ ಹಲವರು ಭಾಗವಹಿಸಿದ್ದರು.

ಹೊಂಬೆಳಕು ಕಾರ್ಯಕ್ರಮದಿಂದ ಮನ ಪರಿವರ್ತನೆ

ವಿರಾಜಪೇಟೆ, ಮೇ.6-ಅರಮೇರಿ ಕಳಂಚೇರಿ ಶ್ರೀಮಠದ ವತಿಯಿಂದ ಪ್ರತಿ ತಿಂಗಳು ನಡೆಯುವ ಹೊಂಬೆಳಕು ಕಾರ್ಯಕ್ರಮದಲ್ಲಿ ಭಾಗವಹಿಸುವ ಪ್ರತಿಯೊಬ್ಬರಿಗೂ ಮನ ಪರಿವರ್ತನೆಯಾಗುತ್ತದೆ ಎಂದು ಆಗ್ರಾದ ಸಿಐಎಸ್‌ಎಫ್ ಸಬ್‌ಇನ್ಸ್‌ಪೆಕ್ಟರ್ ಸಿ.ಎಂ.ನಾರಾಯಣಶಾಸ್ತ್ರಿ ಹೇಳಿದರು.

ಸಮೀಪದ ಅರಮೇರಿ ಕಳಂಚೇರಿ ಮಠದ ಶ್ರೀ ಲಿಂಗರಾಜೇಂದ್ರ ಭವನದಲ್ಲಿ ನಡೆದ ಮಾಸಿಕ ತತ್ತ್ವ ಚಿಂತನಾ ಗೋಷ್ಠಿಯ 219ನೇ ಹೊಂಬೆಳಕು ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ಅವರು, ಇಂತಹ ಕಾರ್ಯಕ್ರಮಗಳಲ್ಲಿ ಹೆಚ್ಚಾಗಿ ಭಾಗವಹಿಸಬೇಕು. ಇತ್ತೀಚೆಗೆ ಹೊರ ರಾಜ್ಯದ ಯುವಕರೇ ಹೆಚ್ಚಾಗಿ ಸೇನೆಗೆ ಸೇರುತ್ತಿದ್ದು, ಕೊಡಗಿನ ಯುವಕರು ಕಡಿಮೆಯಾಗುತ್ತಿದ್ದಾರೆ. ಆದ್ದರಿಂದ ಕೊಡಗಿನ ಯುವಕರು ದೇಶ ಸೇವೆಗೆ ಮುಂದಾಗಬೇಕು ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಚೆಟ್ಟಳ್ಳಿ ಗ್ರಾಮದ ಕೃಷಿಕ ಹೆಚ್.ಎಸ್.ತಿಮ್ಮಪ್ಪಯ್ಯ, ಅರಮೇರಿ ಕಳಂಚೇರಿ ಮಠದ ಹೊಂಬೆಳಕು ಕಾರ್ಯಕ್ರಮದಿಂದ ಎಲ್ಲರ ಮನಸ್ಸಿನ ಚಿಂತೆಗಳನ್ನು ದೂರ ಮಾಡುವ ಮೂಲಕ ಶಾಂತಿ ಮಂತ್ರದಿಂದ ಮನಪರಿವರ್ತನೆಯಾಗಲಿದೆ ಎಂದು ಹೇಳಿದರು.

ಸಾನಿಧ್ಯ ವಹಿಸಿದ್ದ ಅರಮೇರಿ ಕಳಂಚೇರಿ ಮಠಾಧ್ಯಕ್ಷರಾದ ಶ್ರೀ ಶಾಂತಮಲ್ಲಿಕಾರ್ಜುನಸ್ವಾಮೀಜಿ ಮಾತನಾಡಿ, 19 ವರ್ಷಗಳಿಂದಲೂ ಪ್ರತಿ ತಿಂಗಳ ಮೊದಲ ಭಾನುವಾರ ತತ್ತ್ವ ಚಿಂತನಾ ಗೋಷ್ಠಿಯ ಹೊಂಬೆಳಕು ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಅನೇಕ ಮಹಾನೀಯರು, ನಿವೃತ್ತ ಅಧಿಕಾರಿಗಳು, ಸಮಾಜ ಸೇವಕರು, ಉತ್ತಮ ಕೃಷಿಕರು, ಮಠಾಧೀಶರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಹಿತವಚನ ನೀಡಿದ್ದಾರೆ. ಉತ್ತಮ ಸಂಸ್ಕಾರ ಹಾಗೂ ದೇಶ ರಕ್ಷಣೆ ಕುರಿತು ಪೋಷಕರು ತಮ್ಮ ಮಕ್ಕಳಿಗೆ ತಿಳಿಸಬೇಕು ಎಂದು ಸಲಹೆ ನೀಡಿದರು.



ಅರಮೇರಿ ಕಳಂಚೇರಿ ಮಠದಲ್ಲಿ ನಡೆದ ಹೊಂಬೆಳಕು ಕಾರ್ಯಕ್ರಮವನ್ನು ಶ್ರೀ ಶಾಂತಮಲ್ಲಿಕಾರ್ಜುನಸ್ವಾಮೀಜಿ, ಕೃಷಿಕ ಹೆಚ್.ಎಸ್.ತಿಮ್ಮಪ್ಪಯ್ಯ ಉದ್ಘಾಟಿಸಿದರು. ಸಬ್‌ಇನ್ಸ್‌ಪೆಕ್ಟರ್ ಸಿ.ಎಂ.ನಾರಾಯಣಶಾಸ್ತ್ರಿ ಇದ್ದರು.

ಕಾರ್ಯಕ್ರಮದಲ್ಲಿ ಪಕ್ಷಿ ವೀಕ್ಷಕ ಡಾ.ಎಸ್.ವಿ.ನರಸಿಂಹನ್, ಭಾರತಿಯ ಸೇನೆಯ ನಿವೃತ್ತ ಮೇಜರ್ ಎಸ್.ಕೆ.ವೆಂಕಟಗಿರಿ, ಎಸ್‌ಬಿಐ ನಿವೃತ್ತ ಅಧಿಕಾರಿ ಕೆ.ಕೆ.ಶ್ಯಾಮ್, ಕೃಷಿಕ ಗಿರೀಶ್ ಕಿಗ್ಗಾಲು, ನಿವೃತ್ತ ಶಿಕ್ಷಕ ಲಕ್ಷ್ಮಿನಾರಾಯಣ ಹಾಜರಿದ್ದರು.

ದಡ ಸೇರಿದ ರ್‍ಯಾಫ್ಟಿಂಗ್ ಬೋಟ್‌ಗಳು

● ದುಬಾರೆಯಲ್ಲಿ ಸಂಪೂರ್ಣ ಬರಿದಾದ ಕಾವೇರಿ ನದಿ ● ಪ್ರವಾಸಿಗರ ಸಂಖ್ಯೆ ಕಡಿಮೆ

ಮಡಿಕೇರಿ, ಮೇ.6-ಜಿಲ್ಲೆಯ ಕೆಲವೆಡೆಗಳಲ್ಲಿ ಅಲ್ಪಸ್ವಲ್ಪ ಮಳೆಯಾದರೂ, ಸಾಕಷ್ಟು ಪ್ರಮಾಣದಲ್ಲಿ ಮಳೆಯಾಗದೇ ಇರುವುದರಿಂದ ಬಿರು ಬಿಸಿಲಿಗೆ ಕೊಡಗಿನ ಪ್ರಮುಖ ಪ್ರವಾಸಿ ತಾಣವಾದ ದುಬಾರೆಯಲ್ಲಿ ಬೋರ್ಗರೆಯುತ್ತಾ ಹರಿಯುವ ಕಾವೇರಿ ನದಿ ಸಂಪೂರ್ಣವಾಗಿ ಬರಿದಾಗಿದೆ.

ಈ ಹಿನ್ನೆಲೆಯಲ್ಲಿ ದುಬಾರೆಗೆ ಬರುವ ಪ್ರವಾಸಿಗರ ಸಂಖ್ಯೆಯಲ್ಲೂ ಇಳಿಕೆಯಾಗಿದೆ. ಪ್ರವಾಸಿಗರಿಗೆ ಮುದ ನೀಡುತ್ತಿದ್ದ ರ್‍ಯಾಫ್ಟಿಂಗ್, ಜಲಕ್ರೀಡೆಗಳು ಸ್ಥಗಿತಗೊಂಡ ಕಾರಣ ರ್‍ಯಾಫ್ಟಿಂಗ್ ಬೋಟ್‌ಗಳು ದಡ ಸೇರಿವೆ. ರ್‍ಯಾಫ್ಟಿಂಗ್ ಅನ್ನು ನಂಬಿ ಬದುಕು ಕಟ್ಟಿಕೊಂಡಿದ್ದ ಎಷ್ಟೋ ಜನ ಅಕ್ಷರಶಃ ಬೀದಿಗೆ ಬೀಳುವಂತಾಗಿದೆ.

ಕೊಡಗಿಗೆ ಅತ್ಯಧಿಕ ಸಂಖ್ಯೆಯಲ್ಲಿ ಪ್ರವಾಸಿಗರು ಭೇಟಿ ನೀಡುವ ಪ್ರವಾಸಿ ತಾಣವೆಂದರೆ ಅದು ದುಬಾರೆ, ಕಾವೇರಿ ನದಿಯಲ್ಲಿ ನೀರಿದ್ದರೇ ಮಾತ್ರ ದುಬಾರೆ ನೋಡಲು ಚೆಂದ. ಆದರೆ, ಸುಡು ಬಿಸಿಲಿಗೆ ಕಾವೇರಿಯಲ್ಲಿ ನೀರಿನ ಹರಿವು ಕ್ಷೀಣವಾಗಿರುವುದರಿಂದ ದುಬಾರೆಯಲ್ಲಿ ಪ್ರವಾಸಿಗರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ. ಈ ಹಿನ್ನೆಲೆಯಲ್ಲಿ ದುಬಾರೆಯಲ್ಲಿ ವ್ಯಾಪಾರೋದ್ಯಮ ಹಿಂದೆಂದೂ ಕಂಡು ಕೇಳರಿಯದ ರೀತಿ ಕುಸಿತಗೊಂಡಿದ್ದು, ದುಬಾರೆ ಪ್ರವಾಸಿ ತಾಣವನ್ನೇ ನಂಬಿ ಬದುಕು ಕಟ್ಟಿಕೊಂಡವರು ಕಂಗಾಲಾಗುವಂತಾಗಿದೆ.


ದುಬಾರೆಯಲ್ಲಿ ರ್‍ಯಾಫ್ಟಿಂಗ್ ಹಾಗೂ ಜಲಕ್ರೀಡೆ ಸ್ಥಗಿತಗೊಂಡಿರುವುದರಿಂದ ಬೋಟ್‌ಗಳು ದಡ ಸೇರಿರುವುದು.

ದುಬಾರೆ ರಿವರ್ ರ್‍ಯಾಫ್ಟಿಂಗ್ ಅನ್ನು ನಂಬಿಕೊಂಡು ಸುಮಾರು 41 ರ್‍ಯಾಫ್ಟಿಂಗ್ ಮಾಲೀಕರು, 80 ಆಪರೇಟರ್ಸ್ ಹಾಗೂ ವಿವಿಧ ಬಗೆಯ ತಿಂಡಿ-ತಿನಿಸು, ಹಣ್ಣು-ಹಂಪಲು, ತಂಪುಪಾನೀಯ ಅಂಗಡಿಗಳನ್ನಿಟ್ಟುಕೊಂಡು ಸುಮಾರು 50 ರಿಂದ 60 ವ್ಯಾಪಾರಿಗಳು ಜೀವನ ಸಾಗಿಸುತ್ತಿದ್ದಾರೆ. ಆದರೆ, ಪ್ರವಾಸಿಗರು ಇಲ್ಲದ ಕಾರಣ ಮುಂದೇನು ಅನ್ನೋ ಚಿಂತೆ ವ್ಯಾಪಾರಸ್ಥರನ್ನು ಕಾಡುತ್ತಿದೆ.

> ಇಲ್ಲಿನ ಕಾವೇರಿ ನದಿಯಲ್ಲಿ ನೀರಿದ್ದರೇ ಮಾತ್ರ ದುಬಾರೆ ನೋಡಲು ಚೆಂದ. ಹೆಚ್ಚು ಪ್ರವಾಸಿಗರು ಭೇಟಿ ನೀಡುವ ದುಬಾರೆಯಲ್ಲಿ ಕಾವೇರಿ ನೀರು ಕ್ಷೀಣಗೊಂಡ ಹಿನ್ನೆಲೆಯಲ್ಲಿ ಪ್ರವಾಸೋದ್ಯಮಕ್ಕೆ ದೊಡ್ಡ ಪೆಟ್ಟು ಬಿದ್ದಿದೆ. ಪ್ರವಾಸೋದ್ಯಮ ಮಾತ್ರವಲ್ಲದೇ, ವ್ಯವಸಾಯದ ಮೇಲೂ ಗಂಭೀರ ಪರಿಣಾಮ ಬೀರಿದೆ.
> -ರತೀಶ್, ರಿವರ್ ರ್‍ಯಾಫ್ಟಿಂಗ್ ಅಸೋಸಿಯೇಷನ್ ಸದಸ್ಯ


> ಸುಮಾರು 12 ವರ್ಷಗಳಿಂದ ದುಬಾರೆಯಲ್ಲಿ ವ್ಯಾಪಾರ ಮಾಡುತ್ತಿದ್ದು, ಇಂಥ ಸ್ಥಿತಿ ಹಿಂದೆಂದೂ ನೋಡಿರಲಿಲ್ಲ. ಪ್ರವಾಸಿಗರು ಇಲ್ಲದೇ ದಿನಕ್ಕೆ 60 ರೂ. ವ್ಯಾಪಾರ ಮಾಡುವುದು ಕಷ್ಟವಾಗಿದೆ.
> -ಮಹಿಳಾ ವ್ಯಾಪಾರಿ, ದುಬಾರೆ

ಸಂತ ಸೆಬಾಸ್ಟೀನ್ ಚರ್ಚ್ ವಾರ್ಷಿಕೋತ್ಸವ

ಸುಂಟಿಕೊಪ್ಪ, ಮೇ.6-ಏಳನೇ ಹೊಸಕೋಟೆಯ ಸಂತ ಸೆಬಾಸ್ಟೀನ್ ಚರ್ಚ್‌ನ ವಾರ್ಷಿಕೋತ್ಸವದ 2 ದಿನದ ವಿಶೇಷ ಪೂಜೆ, ಆರಾಧನೆ, ಮಕ್ಕಳಿಗೆ ಪ್ರಥಮ ಪರಮ ಪ್ರಸಾದ ಹಾಗೂ ಸಂತ ಸಬಾಸ್ಟೀನ್ ಮೂರ್ತಿಯ ಮೆರವಣಿಗೆ ನಡೆಸಲಾಯಿತು.

ಚರ್ಚ್‌ನ ಧರ್ಮ ಗುರು ರೆ.ಫಾದರ್ ಸೆಬಾಸ್ಟೀನ್ ಪೂವತ್ತಿಗಲ್ ಧ್ವಜಾರೋಹಣ ನೆರವೇರಿಸುವ ಮೂಲಕ ಆರಾಧನೆ ಹಾಗೂ ವಿಶೇಷ ಬಲಿ ಪೂಜೆ ಸಲ್ಲಿಸಿದರು. ವಾರ್ಷಿಕೋತ್ಸವದ ಅಂಗವಾಗಿ ಮಡಿಕೇರಿ, ಸುಂಟಿಕೊಪ್ಪ ಕೊಡಗರಹಳ್ಳಿ, ಕಂಬಿಬಾಣೆ, ಕುಶಾಲನಗರ ಸೇರಿದಂತೆ ವಿವಿಧೆಡೆಯಿಂದ ನೂರಾರು ಕ್ರೈಸ್ತರು ಆಗಮಿಸಿ, ಅಂಬು ಕಾಣಿಕೆಯ ಹರಕೆ ತೀರಿಸಿದರು.

ಬೆಳ್ತಂಗಡಿ ಧರ್ಮಕ್ಷೇತ್ರದ ಧರ್ಮಗುರು ವಂ.ರೆ.ಫಾದರ್ ಟೋಮಿ ಕಳ್ಳಿಪಾತ್ ಅವರು ಬಲಿ ಪೂಜೆ ಹಾಗೂ ಮಕ್ಕಳಿಗೆ ಪರಮ ಪ್ರಸಾದ ನೀಡಿದರು. ನಂತರ ಸಂತ ಸಬಾಸ್ಟೀನ್ ಮೂರ್ತಿಯನ್ನು ಚರ್ಚ್ ಆವರಣದಲ್ಲಿ ಮೆರವಣಿಗೆ ನಡೆಸಲಾಯಿತು. ಆಶೀರ್ವಚನ ನೀಡುವ ಮೂಲಕ 2 ದಿನದ ವಾರ್ಷಿಕೋತ್ಸವ ಸಮಾರಂಭಕ್ಕೆ ತೆರೆ ಎಳೆಲಾಯಿತು. ಇದೇ ಸಂದರ್ಭ ಚರ್ಚ್ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದ ಮರ ಕೆಲಸಗಾರರನ್ನು ಸನ್ಮಾನಿಸಲಾಯಿತು.


ಹೊಸಕೋಟೆಯ ಸಂತ ಸೆಬಾಸ್ಟೀನ್ ಚರ್ಚ್‌ನ ವಾರ್ಷಿಕೋತ್ಸವದಲ್ಲಿ ಭಕ್ತರು ಭಾಗವಹಿಸಿದ್ದರು.

ಮಕ್ಕಳಿಗೆ ಪುಸ್ತಕ ಓದುವ ಹವ್ಯಾಸ ಬೆಳಸಿ



ಮಡಿಕೇರಿಯ ಪತ್ರಿಕಾ ಭವನದಲ್ಲಿ ಕೊಡವ ಮಕ್ಕಡ ಕೂಟದ 90ನೇ ಪುಸ್ತಕ ಹಾಗೂ ಲೇಖಕಿ ಯಶೋಧಾ ಪೇರಿಯಂಡ ಅವರ ಎರಡನೇ ಪುಸ್ತಕ 'ಮಕ್ಕಕ್ ಕೊದಿಮೊದ'ವನ್ನು ಬಿಡುಗಡೆಗೊಳಿಸಲಾಯಿತು.

ಮಡಿಕೇರಿ, ಮೇ.6-ಇತ್ತೀಚಿನ ದಿನಗಳಲ್ಲಿ ಪ್ರತಿ ಮನೆಗಳಲ್ಲಿ ತಂದೆ-ತಾಯಿ, ಮಕ್ಕಳು ಸೇರಿದಂತೆ ಎಲ್ಲರೂ ಮೊಬೈಲ್‌ನಲ್ಲೇ ಮುಳುಗಿರುತ್ತಾರೆ. ಪೋಷಕರು ಮೊಬೈಲ್ ಬಿಟ್ಟು ಮಕ್ಕಳಿಗೆ ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಬೇಕು ಎಂದು ಎಂ.ಬಾಡಗ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ನಿವೃತ್ತ ಮುಖ್ಯಶಿಕ್ಷಕಿ ಮಡೆಯಂಡ ಉಮ್ಮಯ್ಯ ತಿಮ್ಮಯ್ಯ ಕಿವಿಮಾತು ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಕೊಡವ ಮಕ್ಕಡ ಕೂಟದ 90ನೇ ಪುಸ್ತಕ ಹಾಗೂ ಲೇಖಕಿ ಯಶೋಧಾ ಪೇರಿಯಂಡ ಅವರ ಎರಡನೇ ಪುಸ್ತಕ 'ಮಕ್ಕಕ್ ಕೊದಿಮೊದ'ವನ್ನು ಬಿಡುಗಡೆಗೊಳಿಸಿ ಮಾತನಾಡಿದ ಅವರು, ಬರಹಗಾರರ ಸಂಖ್ಯೆ ಹೆಚ್ಚಾಗುತ್ತಿದೆ. ಕಥೆ, ಕವನ ರಚನೆಯಲ್ಲಿ ಆಸಕ್ತಿ ತೋರುತ್ತಿದ್ದಾರೆ. ಆದರೆ, ಬರಹಗಾರರಿಗಷ್ಟೇ ಆಸಕ್ತಿ ಇದ್ದರೆ ಸಾಲದು. ಓದುಗರ ಸಂಖ್ಯೆಯೂ ಹೆಚ್ಚಾಗಬೇಕು. ಇಂದು ಮೊಬೈಲ್‌ನಲ್ಲೇ ಕಾಲಕಳೆಯುವ ಹೆಚ್ಚು ಜನರು ಇದ್ದಾರೆ ಎಂದು ತಿಳಿಸಿದರು.

ಬರಹಗಾರರು ಯಾರ ಸಹಕಾರ ಇಲ್ಲದೆ ಪುಸ್ತಕ ಬರೆದು ಅವುಗಳನ್ನು ಬಿಡುಗಡೆಗೊಳಿಸುತ್ತಾರೆ. ಆದರೆ, ಇಂದಿನ ತಂತ್ರಜ್ಞಾನ ಯುಗದಲ್ಲಿ ಓದುಗರ ಸಂಖ್ಯೆ ಕ್ಷೀಣಿಸುತ್ತಿದ್ದು, ಪುಸ್ತಕಗಳನ್ನು ಕೊಂಡುಕೊಳ್ಳುವವರೆ ಇಲ್ಲದಂತಾಗಿದೆ. ಪೋಷಕರು ತಮ್ಮ ಮಕ್ಕಳಲ್ಲಿ ಓದುವ ಹವ್ಯಾಸವನ್ನು ಬೆಳೆಸಬೇಕು ಎಂದರು.

'ಮಕ್ಕಕ್ ಕೊದಿಮೊದ' ಕೊಡವ ಪುಸ್ತಕದ ಲೇಖಕಿ ಯಶೋಧಾ ಪೇರಿಯಂಡ ಮಾತನಾಡಿ, ಹಿಂದಿನ ಕಾಲದಲ್ಲಿ ಪುಸ್ತಕ ಓದುಗರ ಸಂಖ್ಯೆ ಹೆಚ್ಚಿತ್ತು. ಅಲ್ಲದೇ ತಂದೆ-ತಾಯಂದಿರು, ಅಜ್ಜ-ಅಜ್ಜಿಯಂದಿರು ಮಕ್ಕಳಿಗೆ ಕಥೆಯನ್ನು ಹೇಳಿಕೊಡುವ ರೂಢಿ ಇತ್ತು. ಆದರೆ, ಇಂದಿನ ಕಾಲಘಟ್ಟದಲ್ಲಿ ಮಕ್ಕಳು ಮೊಬೈಲ್, ಟಿವಿಗಳಿಗೆ ಹೆಚ್ಚು ಒತ್ತು ನೀಡುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಭಾಗಮಂಡಲ ಶ್ರೀ ಇಗ್ಗುತ್ತಪ್ಪ ಎಜುಕೇಷನ್ ಸೊಸೈಟಿ ಪ್ರಧಾನ ಕಾರ್ಯದರ್ಶಿ ಚೀಯಕಪೂವಂಡ ಮಿಥುನ್ ಚಂಗಪ್ಪ ಮಾತನಾಡಿ, ಕೊಡವ ಮಕ್ಕಡ ಕೂಟದ ನೇತೃತ್ವದಲ್ಲಿ ಕೂಟದ ಸ್ಥಾಪಕಾಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ ಸರ್ಕಾರದ ಯಾವುದೇ ಅನುದಾನವಿಲ್ಲದೆ 90 ಪುಸ್ತಕಗಳನ್ನು ಲೋಕಾರ್ಪಣೆಗೊಳಿಸಿರುವುದು ಶ್ಲಾಘನೀಯ ಎಂದರು.

ಬಲಮುರಿ ಅಯ್ಯಪ್ಪ ಸ್ವಸಹಾಯ ಸಂಘದ ಸದಸ್ಯೆ ಚೆಂಗಂಡ ರೇಷ್ಮಾ ತಮ್ಮಯ್ಯ ಮಾತನಾಡಿ, ಎಲ್ಲರಲ್ಲೂ ಒಂದೊಂದು ಪ್ರತಿಭೆ ಅಡಗಿರುತ್ತದೆ. ಆದರೆ, ಬರೆಯುವ ಕಲೆ ಕೆಲವರಿಗೆ ಮಾತ್ರ ಬರುತ್ತದೆ. ಬರೆಯುವವರ ಸಂಖ್ಯೆಯಂತೆ ಓದುಗರ ಸಂಖ್ಯೆಯೂ ಹೆಚ್ಚಾಗಬೇಕು. ಕಲೆ ಇದ್ದರೂ ಪ್ರೋತ್ಸಾಹ ನೀಡುವವರು ಇರುವುದಿಲ್ಲ. ವೇದಿಕೆ ಸಿಕ್ಕಾಗ ಅದನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಕೊಡವ ಮಕ್ಕಡ ಕೂಟದ ಸ್ಥಾಪಕ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ ಮಾತನಾಡಿದರು. ಸಮಾಜ ಸೇವಕ ಮಡೆಯಂಡ ಸೂರಜ್ ತಿಮ್ಮಯ್ಯ ಉಪಸ್ಥಿತರಿದ್ದರು.

ಕೋಟೆ ಮಾರಿಯಮ್ಮ ದೇವಾಲಯದಲ್ಲಿ ನಾಗದರ್ಶನ



ಮಡಿಕೇರಿ: ನಗರದ ಶಕ್ತಿ ದೇವತೆಗಳಲ್ಲಿ ಒಂದಾಗಿರುವ ಶ್ರೀ ಕೋಟೆ ಮಾರಿಯಮ್ಮ ದೇವಾಲಯದಲ್ಲಿ ಸೋಮವಾರ ಪ್ರತಿಷ್ಠಾಪನಾ ವಾರ್ಷಿಕೋತ್ಸವ ಹಾಗೂ ನಾಗದರ್ಶನ ನಡೆಯಿತು.

ಮುಂಜಾನೆಯಿಂದಲೇ ಆಶ್ಲೇಷ ಬಲಿ, ನಾಗಪೂಜೆ, ಕ್ಷೀರಾಭಿಷೇಕ ಸೇರಿದಂತೆ ವಿವಿಧ ಪೂಜಾ ಕೈಂಕರ್ಯ ಜರುಗಿದವು. ನಂತರ ಉಡುಪಿಯ ಪೆರ್ಲಂಪಾಡಿ ರಮಾನಂದ ಭಟ್ ನಾಗಪಾತ್ರಿಗಳಾಗಿ ನಾಗ ಪ್ರತಿಷ್ಠಾಪನಾ ವಾರ್ಷಿಕೋತ್ಸವ ಹಾಗೂ ನಾಗದರ್ಶನ ನಡೆಸಿದರು. ಬಳಿಕ ಮಹಾಪೂಜೆ, ಪ್ರಸಾದ ವಿತರಣೆ ಹಾಗೂ ಅನ್ನಸಂತರ್ಪಣೆ ನೆರವೇರಿತು. ನಗರದ ವಿವಿಧೆಡೆಯಿಂದ ಆಗಮಿಸಿದ್ದ ಹೆಚ್ಚಿನ ಭಕ್ತರು ದೇವರಿಗೆ ವಿಶೇಷ ಪೂಜೆ ಸಲ್ಲಿಸಿದರು.

ಸಾಲಬಾಧೆಯಿಂದ ವ್ಯಕ್ತಿ ಆತ್ಮಹತ್ಯೆ





ಸುಂಟಿಕೊಪ್ಪ: ಸಾಲಬಾಧೆ ತಾಳಲಾರದೆ ವ್ಯಕ್ತಿಯೋರ್ವ ಕಾಫಿ ತೋಟದ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ 7ನೇ ಹೊಸಕೋಟೆಯ ಕಾವೇರಿ ಎಸ್ಟೇಟ್‌ನಲ್ಲಿ ಸೋಮವಾರ ನಡೆದಿದೆ.

ಸೋಮವಾರಪೇಟೆಯ ಐಗೂರು ನಿವಾಸಿ ಮಧು(42) ಮಧ್ಯಾಹ್ನ ಕಾವೇರಿ ಎಸ್ಟೇಟ್‌ನ ರಸ್ತೆಬದಿಯಲ್ಲಿ ಬೈಕ್ ನಿಲ್ಲಿಸಿ ಕಾಫಿ ತೋಟದ ಮಧ್ಯೆ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಪತಿ ಮಧು ಸಾಲಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪತ್ನಿ ಸೌಮ್ಯ ಸುಂಟಿಕೊಪ್ಪ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಬಿಸಿಲ ಬೇಗೆಗೆ ಬೆಂಗಾಡಾಗುತ್ತಿರುವ ಅರಣ್ಯ

● ಸಕಾಲಕ್ಕೆ ಬಾರದ ಮಳೆ ● ನೀರು, ಮೇವಿಗಾಗಿ ವನ್ಯಜೀವಿಗಳ ಅಲೆದಾಟ

ಚಾಮರಾಜನಗರ, ಮೇ.6- ಬಿರು ಬಿಸಿಲಿನ ಬೇಗೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಗಡಿ ಜಿಲ್ಲೆಯ ಅರಣ್ಯ ಪ್ರದೇಶದ ಗಿಡ, ಮರ ಹಾಗೂ ಪರಿಸರ ಒಣಗಿದ ಸ್ಥಿತಿ ತಲುಪುತ್ತಿದೆ.

ಪ್ರಸ್ತುತ ಜಿಲ್ಲೆಯ ಬಂಡಿಪುರ, ಬಿಆರ್ ಹಿಲ್ಸ್, ಮಲೆಮಹದೇಶ್ವರ ವನ್ಯಧಾಮದ ಪರಿಸರ ಸಂಪೂರ್ಣವಾಗಿ ಸ್ವರೂಪ ಬದಲಾಗಿದ್ದು, ಇಲ್ಲಿನ ವನ್ಯಜೀವಿಗಳು ಕುಡಿಯುವ ನೀರು, ಮೇವಿಗಾಗಿ ಅಲೆದಾಡುವಂತಾಹ ಪರಿಸ್ಥಿತಿ ನಿರ್ಮಾಣವಾಗಿದೆ.

ಇಷ್ಟರಲ್ಲೇ ಮಳೆ ಸುರಿಯಬೇಕಾಗಿತ್ತು. ಆದರೆ, ಬಹುತೇಕ ಕಡೆಗಳಲ್ಲಿ ಅದರಲ್ಲೂ ಜಿಲ್ಲೆಯ ಅರಣ್ಯ ವ್ಯಾಪ್ತಿಯಲ್ಲಿ ಮಳೆ ಸುರಿಯದ ಕಾರಣ ಅರಣ್ಯ ಒಣಗುತ್ತಿದ್ದು, ಕೆರೆಕಟ್ಟೆಗಳಲ್ಲಿ ನೀರು ಬತ್ತಿದೆ. ಮುಂಗಾರು ಮಳೆ ಸಮೃದ್ಧವಾಗಿ ಸುರಿಯದ ಕಾರಣ ಮತ್ತು ಬಿಸಿಲಿನ ಪ್ರಖರತೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಈಗಾಗಲೇ ಕುರುಚಲು ಕಾಡು ಸೇರಿದಂತೆ ಮರ ಗಿಡಗಳು ಒಣಗಿವೆ. ಇದರಿಂದ ಹಚ್ಚ ಹಸಿರಿನಿಂದ ಕೂಡಿ ನಿಸರ್ಗ ಪ್ರೇಮಿಗಳನ್ನು ತನ್ನತ್ತ ಸೆಳೆಯುತ್ತಿದ್ದ ಅರಣ್ಯ ಪ್ರದೇಶ ಒಣಗಿ ಬೋರಲಾಗುತ್ತಿದೆ.

ಕೆರೆ-ಕಟ್ಟೆಗಳು ಬರಿದು: ಇದೀಗ ಅರಣ್ಯ ಪ್ರದೇಶಗಳಲ್ಲಿ ಸುತ್ತು ಹೊಡೆದು ಬಂದರೆ ಬೇಸಿಗೆಯ ಬಿರು ಬಿಸಿಲಿನ ತಾಪಕ್ಕೆ ಅಭಯಾರಣ್ಯದ ಮರ ಗಿಡಗಳು ಸಂಪೂರ್ಣ ಒಣಗಿ ನಿಂತಿರುವುದು, ಹಸಿರು ಮೇವು ಹಾಗೂ ನೀರಿಗಾಗಿ ಜಿಂಕೆಗಳು ಸೇರಿದಂತೆ ಕಾಡುಪ್ರಾಣಿಗಳು ಅಲೆಯುತ್ತಿರುವುದು ಕಂಡು ಬರುತ್ತದೆ.

ಕಳೆದ ವರ್ಷ ಅರಣ್ಯ ಪ್ರದೇಶಗಳಿಗೆ ಬಂದು ಹೋದ ಪ್ರವಾಸಿಗರು, ಇದೀಗ ಇತ್ತ ಬಂದರೆ ಅಚ್ಚರಿಗೊಳ್ಳಲಿದ್ದಾರೆ. ಏಕೆಂದರೆ, ಈಗಿನ ರಣ ಬಿಸಿಲು ಹಸಿರನ್ನೇ ಬಲಿತೆಗೆದುಕೊಂಡಿದೆ. ಅಕ್ಟೋಬರ್, ನವೆಂಬರ್‌ನಲ್ಲಿ ಹಸಿರು ಹೊದ್ದುಕೊಂಡಿದ್ದ ಅರಣ್ಯದಲ್ಲಿ ಸ್ವಚ್ಛಂದವಾಗಿ ವಿಹರಿಸುವ ಜಿಂಕೆ, ಕಡವೆ, ಕಾಡೆಮ್ಮೆ, ಆನೆಗಳು ಕಾಣುತ್ತಿದ್ದವು. ಜೊತೆಗೆ ಕಣ್ಣು ಹಾಯಿಸಿದ ಉದ್ದಕ್ಕೂ ಹಸಿರು ರಾಚುತ್ತಿತ್ತು. ಶುದ್ಧ ಗಾಳಿ, ತಂಪು ವಾತಾವರಣ, ಮನಕ್ಕೆ ಮುದ ನೀಡುತ್ತಿತ್ತು. ಈಗ ನೆತ್ತಿಸುಡುವ ಬಿಸಿಲು, ಒಣಗಿ ನಿಂತ ಅರಣ್ಯ, ಅಸಹಾಯಕ ಪ್ರಾಣಿಗಳು ಎಲ್ಲವೂ ಪ್ರವಾಸಿಗರನ್ನು ನಿರಾಸೆಗೆ ತಳ್ಳುತ್ತಿದೆ.

ಅರಣ್ಯ ಇಲಾಖೆ ಕಾರ್ಯಕ್ಕೆ ಮೆಚ್ಚುಗೆ: ಈಗಾಗಲೇ ಬಂಡೀಪುರ, ಬಿಆರ್ ಹಿಲ್ಸ್ ಅರಣ್ಯ ಪ್ರದೇಶದ ಕೆಲವೆಡೆಗಳಲ್ಲಿ ಮಳೆ ಸುರಿದಿರುವುದು ಸ್ವಲ್ಪ ಮಟ್ಟಿಗೆ ನೆಮ್ಮದಿ ತಂದಿದೆ. ಬೇಸಿಗೆಯಲ್ಲಿ ನೀರಿನ ಸಮಸ್ಯೆ ಉದ್ಭವಿಸುತ್ತದೆ ಎಂಬ ಕಾರಣಕ್ಕಾಗಿ ಹಿಂದೆಯೇ ಕೆರೆಗಳಿಗೆ ನೀರು ತುಂಬಿಸುವ ಕೆಲಸ ಮಾಡಿದ್ದರಿಂದ ಸ್ವಲ್ಪ ಮಟ್ಟಿಗೆ ನೆಮ್ಮದಿಯಾಗಿದೆ. ಜತೆಗೆ ಅರಣ್ಯದತ್ತ ಇಲಾಖೆ ನಿಗಾವಹಿಸಿದ್ದು, ಕಾಡ್ಗಿಚ್ಚು ಉಂಟಾಗದಂತೆ ಎಚ್ಚರಿಕೆಯ ಕ್ರಮ ವಹಿಸಿರುವುದು ಶ್ಲಾಘನೀಯವಾಗಿದೆ.

ವನ್ಯಜೀವಿಗಳಿಗೆ ನೀರಿನ ಸಮಸ್ಯೆ ಉಂಟಾಗದಂತೆ ಕೆರೆಗಳಿಗೆ ಸೋಲಾರ್ ಮೋಟಾರ್ ಮೂಲಕ ನೀರನ್ನು ತುಂಬಿಸುವ ಕೆಲಸವನ್ನು ಮಾಡಿದೆ. ಬಿಸಿಲ ಧಗೆ ಮುಂದುವರೆದು ಪರಿಸ್ಥಿತಿ ಹೀಗೆಯೇ ಇದ್ದರೆ ಬಹಳಷ್ಟು ಪ್ರಾಣಿಗಳು ನೀರು, ಆಹಾರ ಹುಡುಕಿಕೊಂಡು ವಲಸೆ ಹೋದರೂ ಅಚ್ಚರಿಯಿಲ್ಲ.

ಮುಂದಿನ ದಿನಗಳಲ್ಲಿ ಈ ಅರಣ್ಯ ವ್ಯಾಪ್ತಿಯಲ್ಲಿ ಮಳೆ ಬಂದರೆ ಪ್ರಾಣಿ-ಪಕ್ಷಿ ಮತ್ತು ಗಿಡ-ಮರಗಳು ನೆಮ್ಮದಿಯುಸಿರು ಬಿಡಲು ಸಾಧ್ಯ. ಸದ್ಯಕ್ಕೆ ಹುಯ್ಯೋ ಹುಯ್ಯೋ ಮಳೆರಾಯ ಎಂದು ಪ್ರಾರ್ಥಿಸುವುದಷ್ಟೇ ನಮ್ಮಿಂದ ಮಾಡಬಹುದಾದ ಕಾರ್ಯವಾಗಿದೆ. ಆದಷ್ಟು ಬೇಗ ವರುಣ ಕೃಪೆ ತೋರುವಂತಾಗಲಿ.

ಶ್ರೀನಿವಾಸಪ್ರಸಾದ್, ಧ್ರುವನಾರಾಯಣ್ ಜಿಲ್ಲೆಯ ರತ್ನಗಳು

ನುಡಿ ನಮನ ಕಾರ್ಯಕ್ರಮದಲ್ಲಿ ಜಿ.ಸಿ.ಕಿರಣ್ ಸ್ಮರಣೆ


ಕೊಳ್ಳೇಗಾಲದ ಕೆಯುಸಿ ಕ್ಲಬ್‌ನಲ್ಲಿ ಶ್ರೀನಿವಾಸಪ್ರಸಾದ್ ನುಡಿ ನಮನ ಕಾರ್ಯಕ್ರಮ ಆಯೋಜಿಸಲಾಗಿತ್ತು ಜಿ.ಸಿ.ಕಿರಣ್, ಶಿವಕುಮಾರ್, ನಂಜುಂಡಸ್ವಾಮಿ, ನಿಂಪು ರಾಜೇಶ್, ಸಾಗರ್ ಇದ್ದರು.

ಕೊಳ್ಳೇಗಾಲ: ದಲಿತ ಹಾಗೂ ಹಿಂದುಳಿದ ಸಮಾಜದ ಏಳಿಗೆಗೆ ಶ್ರಮಿಸಿದ ಸಂಸದರಾಗಿದ್ದ ವಿ.ಶ್ರೀನಿವಾಸಪ್ರಸಾದ್ ಮತ್ತು ಆರ್.ಧ್ರುವನಾರಾಯಣ್ ಚಾಮರಾಜನಗರ ಜಿಲ್ಲೆಯ ಎರಡು ರತ್ನಗಳು ಎಂದು ಕೆಪಿಸಿಸಿ ರಾಜ್ಯ ಕಾರ್ಮಿಕ ಘಟಕದ ಕಾರ್ಯದರ್ಶಿ ಜಿ.ಸಿ.ಕಿರಣ್ ಸ್ಮರಿಸಿದರು.

ಪಟ್ಟಣದ ಕೆಯುಸಿ ಸಭಾಂಗಣದಲ್ಲಿ ಸೋಮವಾರ ಹೃದಯವಂತರ ಬಳಗದ ವತಿಯಿಂದ ಆಯೋಜಿಸಿದ್ದ ಶ್ರೀನಿವಾಸ ಪ್ರಸಾದ್ ಅವರ ನುಡಿ ನಮನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದಲಿತರ ಅಭಿವೃದ್ಧಿಗಾಗಿ ಶ್ರೀನಿವಾಸಪ್ರಸಾದ್ ಶ್ರಮಿಸಿದ ನಾಯಕರು. ಜಿಲ್ಲೆಯ ಆಶಾಕಿರಣವಾಗಿದ್ದ ಅವರು ದಲಿತರು, ಹಿಂದುಳಿದ ವರ್ಗಗಳ ಸಮುದಾಯ ಅಭಿವೃದ್ಧಿಗೆ ಸ್ಪಂದಿಸಿದ ನಾಯಕರು ಎಂದರು.

ಚಾಮುಲ್ ನಿರ್ದೇಶಕ ನಂಜುಂಡಸ್ವಾಮಿ ಮಾತನಾಡಿ. ಶ್ರೀನಿವಾಸಪ್ರಸಾದ್ ನೇರ ನುಡಿಯ ನೇತಾರರಾಗಿದ್ದರು. ಅವರ ಆದರ್ಶವನ್ನು ಯುವ ಪೀಳಿಗೆ ರೂಢಿಸಿಕೊಳ್ಳಬೇಕು. ಅವರು ಸಾಗಿಬಂದಿರುವುದು ನಮ್ಮೆಲ್ಲರಿಗೂ ದಾರಿದೀಪವಾಗಬೇಕು ಎಂದರು.

ರಾಜ್ಯ ಉಪ್ಪಾರ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಮಧುವನಹಳ್ಳಿ ಶಿವಕುಮಾರ್ ಮಾತನಾಡಿ, ಶ್ರೀನಿವಾಸ ಪ್ರಸಾದ್ ಅವರಿಗೆ ದೀನ ದಲಿತರು, ಹಿಂದುಳಿದ ವರ್ಗಗಳ ಅಭಿವೃದ್ಧಿ ಬಗ್ಗೆ ಅಪಾರ ಕಳಕಳಿ ಇತ್ತು. ಅವರು ಚಾ.ನಗರ ಜಿಲ್ಲೆಗೆ ನೀಡಿದ ಕೊಡುಗೆ ಅಪಾರ. ಇಂತಹ ನಾಯಕರಿಗೆ ನುಡಿ ನಮನ ಕಾರ್ಯಕ್ರಮ ಹಮ್ಮಿಕೊಂಡಿರುವುದು ಹೆಮ್ಮೆಯ ಸಂಗತಿ. ಪ್ರಸಾದ್ ಅವರು ಸ್ವಾಭಿಮಾನಿ ರಾಜಕಾರಣಿಯಾಗಿ ಗುರುತಿಸಿಕೊಂಡಿದ್ದರು. ಸ್ವಾಭಿಮಾನಕ್ಕೆ ಧಕ್ಕೆ ಬಂದಾಗ ಅದನ್ನು ವಿರೋಧಿಸುವ ಕೆಚ್ಚೆದೆ ಅವರಲ್ಲಿತ್ತು ಎಂದರು.

ಕಾಂಗ್ರೆಸ್ ಮುಖಂಡ ಮಾಂಬಳ್ಳಿ ನಂಜುಂಡಸ್ವಾಮಿ, ಡಿಎಸ್‌ಎಸ್ ವಿಭಾಗೀಯ ಸಂಚಾಲಕ ಸಿದ್ದರಾಜು ದೊಡ್ಡಿಂದುವಾಡಿ, ಭೀಮನಗರ ಯಜಮಾನರಾದ ಡಿ.ನಟರಾಜು, ಶಿವಸ್ವಾಮಿ, ರೈತ ಮುಖಂಡ ಗೌಡೇಗೌಡ, ನಿಂಪು ರಾಜೇಶ್, ಸಾಗರ್ ಇದ್ದರು.

ಕಾರು ಪಲ್ಟಿ: ಮಾಜಿ ಶಾಸಕ ನಂಜುಂಡಸ್ವಾಮಿಗೆ ಗಾಯ



ಕೊಳ್ಳೇಗಾಲ: ಚಾಲಕನ ನಿಯಂತ್ರಣ ತಪ್ಪಿ ಕಾರು ಪಲ್ಟಿಯಾದ ಪರಿಣಾಮ ಕೆಪಿಸಿಸಿ ಉಪಾಧ್ಯಕ್ಷರೂ ಆದ ಕೊಳ್ಳೇಗಾಲ ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ ಗಾಯಗೊಂಡಿದ್ದಾರೆ.

ಸೋಮವಾರ ಹೊಸಕೋಟೆಯಿಂದ ಬೆಂಗಳೂರಿಗೆ ಕಾರಿನಲ್ಲಿ ಬರುತ್ತಿದ್ದ ವೇಳೆ ದೇವನಹಳ್ಳಿ ಬಳಿ ಚಾಲಕನ ನಿಯಂತ್ರಣ ತಪ್ಪಿ ಕಾರು ಪಲ್ಟಿ ಹೊಡೆದಿದೆ. ಇದರ ಪರಿಣಾಮವಾಗಿ ನಂಜುಂಡಸ್ವಾಮಿಯವರ ತಲೆಗೆ ಪೆಟ್ಟು ಬಿದ್ದಿದ್ದು, ಅವರನ್ನು ಬೆಂಗಳೂರಿನ ನಾಗರಬಾವಿಯಲ್ಲಿರುವ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ಅವರ ಪುತ್ರ ಕಾಂಗ್ರೆಸ್ ಯುವ ಮುಖಂಡ ಜಿ.ಎನ್.ಲೋಕೇಶ್ ತಿಳಿಸಿದ್ದಾರೆ. ಚಾಲಕ ಮತ್ತು ನಂಜುಂಡಸ್ವಾಮಿ ಸ್ನೇಹಿತ ಸದಾಶಿವರೆಡ್ಡಿ ಅವರು ಯಾವುದೇ ಗಾಯಗಳಿಲ್ಲದೆ ಪಾರಾಗಿದ್ದಾರೆ.

ಕೀಲು, ಮೂಳೆ ಶಸ್ತ್ರ ಚಿಕಿತ್ಸಕರ ಸಂಘಟನೆ ಉದ್ಘಾಟನೆ


ಚಾಮರಾಜನಗರದಲ್ಲಿ ಜಿಲ್ಲಾ ಕೀಲು ಮತ್ತು ಮೂಳೆ ಶಸ್ತ್ರ ಚಿಕಿತ್ಸಕರ ಸಂಘಟನೆಯನ್ನು ವೈದ್ಯಕೀಯ ಕಾಲೇಜಿನ ಡೀನ್ ಡಾ.ಮಂಜುನಾಥ್ ಉದ್ಘಾಟಿಸಿದರು.

ಚಾಮರಾಜನಗರ: ನಗರದ ಯಡಪುರ ಸಿಮ್ಸ್ ಆಸ್ಪತ್ರೆ ಸಭಾಂಗಣದಲ್ಲಿ ಚಾಮರಾಜನಗರ ಆರ್ಥೋಪಿಡಿಕ್ ಸರ್ಜನ್ ಅಸೋಸಿಯೆಷನ್‌ನ ಜಿಲ್ಲಾ ಕೀಲು ಮತ್ತು ಮೂಳೆ ಶಸ್ತ್ರ ಚಿಕಿತ್ಸಕರ ಸಂಘಟನೆಯನ್ನು ವೈದ್ಯಕೀಯ ಕಾಲೇಜಿನ ಡೀನ್ ಹಾಗೂ ನಿರ್ದೇಶಕ ಡಾ.ಮಂಜುನಾಥ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಜಿಲ್ಲೆಯಲ್ಲಿ ಇಂಡಿಯನ್ ಮೆಡಿಕಲ್ ಅಸೋಸಿಯೆಷನ್ ಬಿಟ್ಟರೆ ಯಾವುದೇ ವೈದ್ಯಕೀಯ ಸಂಘಟನೆಗಳು ಇರಲಿಲ್ಲ. ವೈದ್ಯಕೀಯ ಕ್ಷೇತ್ರದಲ್ಲಿ ಸಂಘಟನೆಗಳ ಅವಶ್ಯಕತೆ ಇದೆ. ವೈದ್ಯಕೀಯ ಸಂಘಟನೆಗಳು ಮುಂದುವರೆದ ಶಿಕ್ಷಣ, ರೋಗಿಗಳ ಆರೈಕೆ ಹಾಗೂ ವೈದ್ಯಕೀಯ ನಿರಂತರ ಕಲಿಕೆಗೆ ಮಹತ್ವವಾಗಿದೆ ಎಂದು ತಿಳಿಸಿದರು.

ಆರ್ಥೋಪಿಡಿಕ್ ಸಂಘಟನೆ ಜಿಲ್ಲಾಧ್ಯಕ್ಷ ಕೊಳ್ಳೇಗಾಲದ ಡಾ.ಪದ್ಮಾಕ್ಷ ಮಾತನಾಡಿ, ಸಂಘನೆಯ ಮುಖಾಂತರ ಕೀಲು ಮತ್ತು ಮೂಳೆ ತಜ್ಞರಿಗೆ ಹೆಚ್ಚಿನ ವಿಷಯ ತಿಳಿಸುವ ಕಾರ್ಯಾಗಾರಗಳನ್ನು ರೂಪಿಸಲಾಗುವುದು. ಸಾರ್ವಜನಿಕರಿಗೆ ಅನುಕೂಲವಾಗುವಂತೆ ಉತ್ತಮ ಚಿಕಿತ್ಸೆ ನೀಡಲು ಸಂಘ ಸಹಕಾರಿಯಾಗಲಿದೆ ಎಂದರು.

ಆರ್ಥೋ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಡಾ.ಶಿವಣ್ಣ ಮಾತನಾಡಿ, ಚಾಮರಾಜನಗರದಲ್ಲಿ ಹತ್ತು ವರ್ಷಗಳಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ ಹಲವಾರು ಮಹತ್ವದ ಬೆಳವಣಿಗೆಗಳು ಹಾಗಿದೆ. ಹತ್ತು ವರ್ಷಗಳ ಹಿಂದೆ ಜಿಲ್ಲೆಯಲ್ಲಿ ಕೇವಲ 2-3 ಕೀಲು ಮತ್ತು ಮೂಳೆ ತಜ್ಞರು ಇದ್ದರು. ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರು, ಬೆಂಗಳೂರು ಆಸ್ಪತ್ರೆಗಳಿಗೆ ಕರೆದೊಯ್ಯಬೇಕಿತ್ತು. ಈಗ ಜಿಲ್ಲೆಯಲ್ಲಿ 28 ಕೀಲು ಮತ್ತು ಮೂಳೆ ತಜ್ಞರು ಇದ್ದಾರೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ತಜ್ಞ ವೈದ್ಯರ ಇರಲಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಘಟನೆ ಉಪಾಧ್ಯಕ್ಷ ಡಾ.ರಾಜಶೇಖರ್, ವೈದ್ಯಕೀಯ ಅಧೀಕ್ಷಕ ಡಾ. ಕೃಷ್ಣ ಪ್ರಸಾದ್, ವೈದ್ಯರಾದ ಡಾ.ಮಹೇಶ್, ಡಾ.ಮೃತ್ಯುಂಜಯ, ಸಂಘನೆಯ ಖಜಾಂಚಿ ಡಾ.ರಾಘವೇಂದ್ರ ಹಾಗೂ ಜಿಲ್ಲೆಯ ಕೀಲು ಮತ್ತು ಮೂಳೆ ತಜ್ಞರು ಉಪಸ್ಥಿತರಿದ್ದರು.

ಕಣ್ಣಿನ ತಪಾಸಣಾ ಉಚಿತ ಶಿಬಿರ



ಚಾಮರಾಜನಗರ: ರೋಟರಿ ಸಂಸ್ಥೆ ವತಿಯಿಂದ ನಗರದಲ್ಲಿ ಕಣ್ಣಿನ ತಪಾಸಣಾ ಉಚಿತ ಶಿಬಿರ ಹಮ್ಮಿಕೊಳ್ಳಲಾಗಿತ್ತು. ನಗರದ ಬಿ.ರಾಚಯ್ಯ ಜೋಡಿರಸ್ತೆಯ ರೋಟರಿ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಷ್ಟ್ರೀಯ ಅಂಧತ್ವ ನಿಯಂತ್ರಣ ಕಾರ್ಯಕ್ರಮ, ಅರವಿಂದ ಕಣ್ಣಿನ ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಶಿಬಿರದಲ್ಲಿ 225 ಮಂದಿಗೆ ಕಣ್ಣಿನ ತಪಾಸಣೆ ಮಾಡಲಾಯಿತು. ಇವರಲ್ಲಿ 127 ಮಂದಿಯನ್ನು ಶಸ್ತ್ರಚಿಕಿತ್ಸೆಗೆ ಆಯ್ಕೆ ಮಾಡಲಾಯಿತು.

ರೋಟರಿ ಸಂಸ್ಥೆ ಅಧ್ಯಕ್ಷ ಸಿ.ಎಸ್.ಚಂದ್ರಪ್ರಭಜೈನ್ ಮಾತನಾಡಿದರು. ಕಾರ್ಯದರ್ಶಿ ಅಬ್ದುಲ್ ಅಜೀಜ್ ದೀನಾ, ರೋಟರಿ ಸಂಸ್ಥಾಪಕ ಸದಸ್ಯ ಸಿ.ವಿ.ಶ್ರೀನಿವಾಸಶೆಟ್ಟಿ, ಎಸ್.ಸುರೇಶ್, ಎಲ್.ನಾಗರಾಜು, ಕಾಗಲವಾಡಿಚಂದ್ರು, ವಿ.ಪ್ರಭಕರ್, ಜಿ.ಗುರುಸ್ವಾಮಿ, ಎಚ್.ಎಂ.ಗುರುಸ್ವಾಮಿ, ಎ.ಶ್ರೀನಿವಾಸನ್, ಯೋಗರಾಜು, ಪಿಆರ್‌ಓ ವಿಜಯಕಾಂತ್ ಇತರರು ಹಾಜರಿದ್ದರು.

ಶಾಸಕ ದರ್ಶನ್ ಧ್ರುವನಾರಾಯಣ ಮುಡಿಸೇವೆ


ಯಳಂದೂರು ತಾಲೂಕಿನ ಬಿಳಿಗಿರಿರಂಗನಬೆಟ್ಟಕ್ಕೆ ಶಾಸಕ ದರ್ಶನ್ ಧ್ರುವನಾರಾಯಣ ಸ್ನೇಹಿತರೊಂದಿಗೆ ಭೇಟಿ ನೀಡಿ, ದೇವರ ದರ್ಶನ ಪಡೆದರು.

ಯಳಂದೂರು, ಮೇ.6-ನಂಜನಗೂಡು ಶಾಸಕ ದರ್ಶನ್ ಧ್ರುವನಾರಾಯಣ ಸೋಮವಾರ ತಾಲೂಕಿನ ಬಿಳಿಗಿರಿರಂಗನಬೆಟ್ಟಕ್ಕೆ ತಮ್ಮ ಸ್ನೇಹಿತರೊಂದಿಗೆ ಭೇಟಿ ನೀಡಿ, ಮುಡಿ ಸೇವೆಯೊಂದಿಗೆ ದೇವರ ದರ್ಶನ ಪಡೆದರು.

ಮನೆ ದೇವರು ಬಿಳಿಗಿರಿರಂಗನಾಥಸ್ವಾಮಿ ದರ್ಶನ ಪಡೆದ ಶಾಸಕ ದರ್ಶನ್, ತಮ್ಮ ತಂದೆ ಧ್ರುವನಾರಾಯಣ ಹಾಗೂ ತಾಯಿ ವೀಣಾ ಅವರ ನಿಧನದ ನಂತರ ಮುಡಿ ಮಾಡಿಸಿರಲಿಲ್ಲ. ನಾನು ಶಾಸಕನಾದ ಮೇಲೆ ಇಲ್ಲಿಗೆ ಬಂದು ಮುಡಿ ನೀಡಿ, ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದ್ದೇನೆ ಎಂದರು. ಈ ಸಂದರ್ಭದಲ್ಲಿ ಸ್ನೇಹಿತರಾದ ಮಹಾನಿಧಿ, ಭರತೇಶ್, ವಿಶ್ವಾಸ್, ಕಾಂಗ್ರೆಸ್ ಮುಖಂಡ ವೆಂಕಟೇಶ್ ಇದ್ದರು.

ಬರ ನಿರ್ವಹಣೆಗೆ ಕೇಂದ್ರದಿಂದ ಬಾರದ ಆರ್ಥಿಕ ನೆರವು: ಜುಲೈನಲ್ಲಿ ಸುಪ್ರೀಂನಲ್ಲಿ ಕರ್ನಾಟಕದ ಅರ್ಜಿ ವಿಚಾರಣೆ

ನವದೆಹಲಿ: ಬರ ನಿರ್ವಹಣೆಗಾಗಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿ (ಎನ್‌ಡಿಆರ್‌ಎಫ್)ನಿಂದ ಹಣ ಬಿಡುಗಡೆ ಮಾಡುವಂತೆ ಕೇಂದ್ರಕ್ಕೆ ನಿರ್ದೇಶನ ನೀಡಬೇಕೆಂದು ಕೋರಿ ಕರ್ನಾಟಕ ಸರ್ಕಾರ ಸಲ್ಲಿಸಿರುವ ಅರ್ಜಿ ವಿಚಾರಣೆಯನ್ನು ಜುಲೈನಲ್ಲಿ ಕೈಗೆತ್ತಿಕೊಳ್ಳುವುದಾಗಿ ಸುಪ್ರೀಂಕೋರ್ಟ್ ಸೋಮವಾರ ತಿಳಿಸಿದೆ.

ಬರ ನಿರ್ವಹಣೆಗಾಗಿ ಕರ್ನಾಟಕ ಸರ್ಕಾರಕ್ಕೆ ಸುಮಾರು ರೂ. 3,400 ಕೋಟಿ ಬಿಡುಗಡೆ ಮಾಡಲಾಗಿದೆ ಎಂದು ಕೇಂದ್ರ ಸರ್ಕಾರ ಏಪ್ರಿಲ್ 29 ರಂದು ಉನ್ನತ ನ್ಯಾಯಾಲಯಕ್ಕೆ ಹೇಳಿತ್ತು.

ಇಂದು ಈ ವಿಚಾರ ಕೈಗೆತ್ತಿಕೊಂಡ ನ್ಯಾಯಾಧೀಶರಾದ ಬಿಆರ್ ಗವಾಯಿ ಹಾಗೂ ಸಂದೀಪ್ ಮೆಹ್ತಾ ಅವರನ್ನೊಳಗೊಂಡ ನ್ಯಾಯಪೀಠದ ಮುಂದೆ ಕರ್ನಾಟಕದ ಪರ ವಾದ ಮಂಡಿಸಿದ ಹಿರಿಯ ವಕೀಲ ಕಪಿಲ್ ಸಿಬಲ್, ಈ ವಿಚಾರದಲ್ಲಿ ಸರ್ಕಾರ ಅಫಿಡವಿಟ್ ಸಲ್ಲಿಸಲಿದೆ ಎಂದು ಹೇಳಿದರು. ನ್ಯಾಯಪೀಠ ವಿಚಾರಣೆಯನ್ನು ಜುಲೈಗೆ ಮುಂದೂಡಿತು. ಕಳೆದ ವಾರ ನಡೆದ ವಿಚಾರಣೆ ಸಂದರ್ಭದಲ್ಲಿ ಕರ್ನಾಟಕಕ್ಕೆ ರೂ. 3,450 ಕೋಟಿ ಬಿಡುಗಡೆ ಮಾಡಲಾಗಿದೆ. ಆದರೆ, ರಾಜ್ಯ ಸರ್ಕಾರ ರೂ. 18,000 ಕೋಟಿ ರೂ. ಬಿಡುಗಡೆಗೆ ಮನವಿ ಮಾಡಿರುವುದಾಗಿ ಕಪಿಲ್ ಸಿಬಲ್ ನ್ಯಾಯಾಲಯಕ್ಕೆ ಹೇಳಿದರು. ಎನ್‌ಡಿಆರ್‌ಎಫ್ ಪ್ರಕಾರ ಬರ ಪರಿಹಾರಕ್ಕೆ ಹಣಕಾಸು ನೆರವು ಬಿಡುಗಡೆ ಮಾಡದಿರುವ ಕೇಂದ್ರದ ಕ್ರಮವು ಸಂವಿಧಾನದ 14 ಮತ್ತು 21 ನೇ ವಿಧಿಯ ಅಡಿಯಲ್ಲಿ ಖಾತರಿಪಡಿಸಿದ ರಾಜ್ಯದ ಜನರ ಮೂಲಭೂತ ಹಕ್ಕುಗಳ 'ಪೂರ್ವಭಾವಿ ಉಲ್ಲಂಘನೆ' ಎಂದು ಘೋಷಿಸಲು ಅರ್ಜಿಯಲ್ಲಿ ಕೋರಲಾಗಿದೆ.

ಅರಣ್ಯ ಉತ್ಪನ್ನಗಳ ಸದುಪಯೋಗ ಮಾಡಿಕೊಂಡು ಆರ್ಥಿಕವಾಗಿ ಸಬಲರಾಗಿ

ಬುಡಕಟ್ಟು ಸಂಶೋಧನಾ ಸಂಸ್ಥೆಯ ಉಪನಿರ್ದೇಶಕಿ ಬಿ.ಎಸ್.ಪ್ರಭಾ ಅರಸ್ ಬುಡಕಟ್ಟು ಸಮುದಾಯಕ್ಕೆ ಸಲಹೆ

ಮೈಸೂರು, ಮೇ 6(ಎಂಟಿವೈ)– ಬುಡಕಟ್ಟು ಸಮುದಾಯ ಅರಣ್ಯದ ಉತ್ಪನ್ನಗಳು, ಇನ್ನಿತರ ಸಂಪನ್ಮೂಲಗಳಿಂದ ತಮ್ಮದೇ ಉತ್ಪನ್ನಗಳನ್ನು ತಯಾರಿಸಿ ಮಾರಾಟ ಮಾಡುವ ಮೂಲಕ ಆರ್ಥಿಕವಾಗಿ ಸಬಲರಾಗಬೇಕು ಎಂದು ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಉಪನಿರ್ದೇಶಕಿ ಬಿ.ಎಸ್. ಪ್ರಭಾ ಅರಸ್ ಸಲಹೆ ನೀಡಿದ್ದಾರೆ.

ಮೈಸೂರಿನ ಬೋಗಾದಿಯಲ್ಲಿರುವ ಬುಡಕಟ್ಟು ಸಂಶೋಧನಾ ಸಂಸ್ಥೆಯಲ್ಲಿ ಬುಡಕಟ್ಟು ವ್ಯವಹಾರಗಳ ಮಂತ್ರಾಲಯ ಹಾಗೂ ಕರ್ನಾಟಕ ರಾಜ್ಯ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಪಿಎಂ ಜನಮನ್ ಮಾಸ್ಟರ್ ಟ್ರೈನರ್‌ಗಳ 3 ದಿನಗಳ ವಿಭಾಗ ಮಟ್ಟದ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಈ ಹಿಂದೆ ಹೆಚ್.ಡಿ.ಕೋಟೆ ತಾಲೂಕಿನ ವನದನ ವಿಕಾಸ ಕೇಂದ್ರದ ಸದಸ್ಯರಿಗೆ ಸೋಪು ಮತ್ತು ಪೆನಾಯಿಲ್ ತಯಾರಿಸಲು ತರಬೇತಿ ನೀಡಲಾಗಿತ್ತು. ಇದರಿಂದಾಗಿ ಅವರು ಯಶಸ್ವಿಯಾಗಿ ತಮ್ಮ ಉತ್ಪನ್ನಗಳನ್ನು ತಯಾರಿಸಿ ಮಾರಾಟ ಮಾಡುತ್ತಿದ್ದಾರೆ. ಬುಡಕಟ್ಟು ಜನರ ಕೌಶಲ್ಯಕ್ಕೆ ಅನುಗುಣವಾಗಿ ತರಬೇತಿ ನೀಡಲು ಉದ್ದೇಶಿಸಲಾಗಿದೆ.



ಮೈಸೂರಿನ ಬೋಗಾದಿಯಲ್ಲಿರುವ ಬುಡಕಟ್ಟು ಸಂಶೋಧನಾ ಸಂಸ್ಥೆಯಲ್ಲಿ ನಡೆದ ಪಿಎಂ ಜನಮನ್ ಮಾಸ್ಟರ್ ಟ್ರೈನರ್‌ಗಳ 3 ದಿನಗಳ ವಿಭಾಗಮಟ್ಟದ ತರಬೇತಿ ಕಾರ್ಯಾಗಾರವನ್ನು ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಉಪನಿರ್ದೇಶಕಿ ಬಿ.ಎಸ್. ಪ್ರಭಾ ಅರಸ್ ಉದ್ಘಾಟಿಸಿದರು.

ಈಗಾಗಲೇ ವಿವಿಧ ಹಾಡಿಗಳ ನಿವಾಸಿಗಳು ಸಂಗ್ರಹಿಸಿದ ಅರಣ್ಯ ಉತ್ಪನ್ನಗಳಿಂದ ತಯಾರಿಸಿದ ಉತ್ಪನ್ನಗಳನ್ನು ಬೇರೆ ಸಂಸ್ಥೆಗಳಿಗೆ ನೀಡುತ್ತಿದ್ದಾರೆ. ಆದರೆ ಬುಡಕಟ್ಟು ಸಮುದಾಯದ ಜನರು ಒಳಗೊಂಡಂತೆ ವನದನ ವಿಕಾಸ ಕೇಂದ್ರದಂತಹ ಸಂಸ್ಥೆಗಳನ್ನು ಸ್ಥಾಪಿಸಿಕೊಂಡು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಿದರೆ ಹೆಚ್ಚಿನ ಲಾಭ ಗಳಿಸಬಹುದಾಗಿದೆ ಎಂದು ತಿಳಿಸಿದರು.

ಬುಡಕಟ್ಟು ಸಮುದಾಯದ ಜನರಿಗೆ ಅರಣ್ಯಗಳಲ್ಲಿ ಲಭ್ಯವಿರುವ ಪಾಚಿ, ನೆಲ್ಲಿಕಾಯಿ, ಜೇನು ಸೇರಿದಂತೆ ವಿವಿಧ ಅರಣ್ಯ ಉತ್ಪನ್ನ ಸಂಗ್ರಹಕ್ಕೆ ಅವಕಾಶವಿದೆ. ಅದನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಮೈಸೂರು ಜಿಲ್ಲೆಯ ವಿವಿಧೆಡೆ ಬುಡಕಟ್ಟು ಸಮುದಾಯ ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸುತ್ತಿದೆ. ಅದರಿಂದ ತಯಾರಿಸಿದ ವಸ್ತುಗಳನ್ನು ವ್ಯವಸ್ಥಿತವಾಗಿ ಪ್ಯಾಕ್ ಮಾಡಿ, ಮಾರುಕಟ್ಟೆಗೆ ತರುವ ನಿಟ್ಟಿನಲ್ಲಿ ಮುಂದಾಗಬೇಕು. ಈ ತರಬೇತಿಯಲ್ಲಿ ಕಲಿತ ವಿಷಯಗಳನ್ನು ನಿಮ್ಮ ವನದನ ಸದಸ್ಯರಿಗೆ ತರಬೇತಿ ನೀಡಬೇಕು. ಮೂಲಭೂತ ಸೌಲಭ್ಯಗಳನ್ನು ಬುಡಕಟ್ಟು ಸಂಶೋಧನಾ ಸಂಸ್ಥೆಯಿಂದ ನೀಡಲಾಗುವುದು. ಈ ಕಾರ್ಯಾಗಾರದ ಸದುಪಯೋಗವನ್ನು ಎಲ್ಲರೂ ಉಪಯೋಗಿಸಿಕೊಳ್ಳಬೇಕೆಂದು ಕರೆ ನೀಡಿದರು.

ಕಾರ್ಯಾಗಾರದಲ್ಲಿ ಕರ್ನಾಟಕ, ಕೇರಳ, ತಮಿಳುನಾಡಿನ 55 ಮಂದಿ ಪಾಲ್ಗೊಂಡಿದ್ದು, ಅರಣ್ಯ ಉತ್ಪನ್ನಗಳ ತಯಾರಿಕೆಯ ತರಬೇತಿ ಪಡೆದುಕೊಳ್ಳುತ್ತಿದ್ದಾರೆ. ಕೇರಳದಿಂದ ಅರಣ್ಯ ಇಲಾಖೆಯ ಸಿಬ್ಬಂದಿ ಕಾರ್ಯಾಗಾರದಲ್ಲಿ ಪಾಲ್ಗೊಂಡು, ಇಲ್ಲಿ ಕಲಿತದ್ದನ್ನು ಕೇರಳದಲ್ಲಿ ಬುಡಕಟ್ಟು ಸಮುದಾಯದ ಜನರಿಗೆ ತರಬೇತಿ ನೀಡಲು ಕ್ರಮ ಕೈಗೊಂಡಿದ್ದಾರೆ.

ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಯೋಜನಾ ಸಮನ್ವಯ ಅಧಿಕಾರಿ ಎಂ.ಕೆ. ಮಲ್ಲೇಶ್, ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಸಂಶೋಧನಾಧಿಕಾರಿ ಹೆಚ್.ಎಸ್. ಬಿಂದ್ಯಾ, ವಿವಿಧ ರಾಜ್ಯಗಳಿಂದ ಆಗಮಿಸಿದ್ದ ಅಧಿಕಾರಿಗಳಾದ ನೈಸ್‌ಬಡ್ಸ ಸಂಸ್ಥೆ ವಿಭಾಗೀಯ ವ್ಯವಸ್ಥಾಪಕ ಸಂಜಯ್ ಭುರ್‌ವಾಲ್, ಟ್ರೈಫೆಡ್ ಜನರಲ್ ಮ್ಯಾನೇಜರ್ ಸುಬ್‌ಜಿತ್ ತರಫ್ದಾರ್, ಜಿಕೆವಿಕೆ ಅಶ್ವಿನ್‌ಕುಮಾರ್, ಮೋಹನ್‌ಕುಮಾರ್, ತಾಲೂಕು ಕಲ್ಯಾಣಾಧಿಕಾರಿಗಳಾದ ಅರುಣ್‌ಪ್ರಭು, ನಾರಾಯಣ್ ಸ್ವಾಮಿ, ಯೋಜನಾ ಸಮನ್ವಯಾಧಿಕಾರಿ ಮಹೇಶ್ ಉಪಸ್ಥಿತರಿದ್ದರು.

ಮೀಸಲಾತಿ ಕುರಿತು ವೀಡಿಯೋ ಪೋಸ್ಟ್

ಜೆ.ಪಿ.ನಡ್ಡಾ, ಅಮಿತ್ ಮಾಳವೀಯಾ, ವಿಜಯೇಂದ್ರ ವಿರುದ್ಧ ಎಫ್‌ಐಆರ್

ಬೆಂಗಳೂರು: ಮೀಸಲಾತಿಗೆ ಸಂಬಂಧಿಸಿದಂತೆ ತಪ್ಪು ಮಾಹಿತಿಯುಳ್ಳ ವೀಡಿಯೊ ತುಣುಕನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡ ಹಿನ್ನೆಲೆಯಲ್ಲಿ ಬಿಜೆಪಿ ರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಘಟಕದ ಮುಖ್ಯಸ್ಥ ಅಮಿತ್ ಮಾಳವೀಯ, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಮತ್ತು ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ವಿರುದ್ಧ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಆರೋಪದಡಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಭಾನುವಾರ ಚುನಾವಣಾ ಆಯೋಗ ಮತ್ತು ಪೊಲೀಸರಿಗೆ ನೀಡಿದ ದೂರಿನ ಮೇರೆಗೆ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಭಾರತೀಯ ದಂಡ ಸಂಹಿತೆಯ ಜನರ ಪ್ರಾತಿನಿಧ್ಯ ಕಾಯ್ದೆ ಮತ್ತು ಸೆಕ್ಷನ್ 505 (2) (ವರ್ಗಗಳ ನಡುವೆ ದ್ವೇಷ ಅಥವಾ ದ್ವೇಷವನ್ನು ಸೃಷ್ಟಿಸುವ ಅಥವಾ ಉತ್ತೇಜಿಸುವ ಹೇಳಿಕೆಗಳು) ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.


ಮೈಸೂರಿನ ಉದ್ಯಮಿ ಹಾಗೂ ಸಮಾಜ ಸೇವಕ ಬಂಡಿಪಾಳ್ಯ ಗಿರೀಶ್ ಅವರ ಹುಟ್ಟುಹಬ್ಬವನ್ನು ಗಾಂಧಿ ನಗರದ ಸ್ನೇಹ ಬಳಗದ ವತಿಯಿಂದ ಆಚರಿಸಲಾಯಿತು. ಈ ವೇಳೆ ಸಂತೋಷ್, ಸುಬ್ರಹ್ಮಣ್ಯ, ಉಮೇಶ್, ರಾಜು, ಸಾಕ, ಕೃಷ್ಣ, ಶಿವಕುಮಾರ್, ಪ್ರೇಮಾನಂದ ಹಾಗೂ ಇನ್ನಿತರರು ಇದ್ದರು.

ಚುನಾವಣಾ ಕರ್ತವ್ಯಕ್ಕೆ ಬಸ್ ಹತ್ತುತ್ತಿದ್ದ ವೇಳೆ ಹೃದಯಾಘಾತದಿಂದ ಸಿಬ್ಬಂದಿ ಸಾವು!

ಬಾಗಲಕೋಟೆ: ರಾಜ್ಯದ 14 ಲೋಕಸಭೆ ಕ್ಷೇತ್ರಗಳಿಗೆ ಮೇ 07ರಂದು ನಡೆಯಲಿರುವ ಎರಡನೇ ಹಂತದ ಲೋಕಸಭಾ ಚುನಾವಣೆಯ ಮತದಾನದ ಸಲುವಾಗಿ ಕರ್ತವ್ಯಕ್ಕೆ ತೆರಳುತ್ತಿದ್ದ ಸರ್ಕಾರಿ ಶಾಲಾ ಶಿಕ್ಷಕರೊಬ್ಬರು, ಬಸ್ ಹತ್ತುವ ವೇಳೆ ದಿಢೀರ್ ಹೃದಯಾಘಾತದಿಂದ ಸ್ಥಳದಲ್ಲೇ ಮೃತಪಟ್ಟ ಘಟನೆ ಬಾಗಲಕೋಟೆಯ ಮುಧೋಳ ನಗರದಲ್ಲಿ ನಡೆದಿದೆ.



ಶಿಕ್ಷಕನನ್ನು ಗೋವಿಂದಪ್ಪ ಸಿದ್ದಾಪುರ ಎಂದು ಗುರುತಿಸಲಾಗಿದೆ. ಬಸ್ ನಿಲ್ದಾಣದ ಗೇಟ್ ಬಳಿ ಹೃದಯಾಘಾತ ದಿಂದ ಕುಸಿದು ಬಿದ್ದು ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿದೆ. ಚುನಾವಣಾ ಕರ್ತವ್ಯಕ್ಕೆ ತೆರಳಲು ಬಸ್ ಹತ್ತಲು ಬಂದಿದ್ದ ವೇಳೆ ಅವಘಡ ಸಂಭವಿಸಿದೆ.

ಮೃತಪಟ್ಟ ವ್ಯಕ್ತಿ ಸರಕಾರಿ ಪ್ರಾಥಮಿಕ ಶಾಲೆ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದರು. ಚುನಾವಣೆಯ ಹಿನ್ನಲೆ ಅವರನ್ನು ಜಮಖಂಡಿ ತಾಲೂಕಿನ ಮೈಗೂರು ಪ್ರಾಥಮಿಕ ಶಾಲೆ ಮತಗಟ್ಟೆಗೆ ಚುನಾವಣಾ ಕರ್ತವ್ಯಕ್ಕೆ ಆಹ್ವಾನಿಸಲಾಗಿತ್ತು.

ಒಂದನೇ ಪುಟದಿಂದ

105 ಕೋಟಿ ರೂ. ವೆಚ್ಚದ ಅಭಿವೃದ್ಧಿಯ ಫಲವೇನು?

ಮೈಸೂರಿನ ಮತ್ತೊಂದು ಸುಂದರ ತಾಣವಾಗಿ ಹೆಬ್ಬಾಳು ಕೆರೆ ಕಂಗೊಳಿಸಿತು. ಅಭಿವೃದ್ಧಿ ನಂತರ ಐದು ವರ್ಷಗಳ ಕಾಲ ಇನ್ಫೋಸಿಸ್ ಫೌಂಡೇಷನ್ ನಿರ್ವಹಣೆ ಹೊಣೆ ಹೊತ್ತಿತ್ತು. ಅವಧಿ ಮುಗಿದ ನಂತರ ಸರ್ಕಾರದ ಸುಪರ್ದಿಗೆ ವಹಿಸಲಾಗಿತ್ತು. ಆದರೆ ಹಿಂದಿನಂತೆ ಅಚ್ಚುಕಟ್ಟಾಗಿ ನಿರ್ವಹಣೆ ಮಾಡಲು ಸರ್ಕಾರಿ ವ್ಯವಸ್ಥೆಯಿಂದ ಸಾಧ್ಯವಾಗಲೇ ಇಲ್ಲ. ಬಳಿಕ ಸ್ಥಳೀಯ ಸಂಸ್ಥೆಗಳ ಒತ್ತಾಯದಿಂದ ಮತ್ತೊಂದು ಅವಧಿಗೆ ಫೌಂಡೇಷನ್ ನಿರ್ವಹಣೆ ಮಾಡುತ್ತಿದೆ. ಮೂರು ಪಾಳಿಯದಲ್ಲಿ 25 ಭದ್ರತಾ ಸಿಬ್ಬಂದಿ ಸೇರಿದಂತೆ ವಿವಿಧ ವಿಭಾಗಗಳಲ್ಲಿ ನಿತ್ಯ 60ಕ್ಕೂ ಹೆಚ್ಚು ನೌಕರರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶತಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಿ, ನಿರ್ವಹಣೆಗೂ ವೆಚ್ಚ ಮಾಡುತ್ತಿರುವ ಇನ್ಫೋಸಿಸ್ ಫೌಂಡೇಷನ್ ಪರಿಶ್ರಮಕ್ಕೆ ಸಿಕ್ಕ ಫಲವೇನು. ವಿಷಯುಕ್ತ ನೀರು ಹಾಗೂ ತ್ಯಾಜ್ಯ ಕೆರೆಗೆ ಸೇರದಂತೆ ಕ್ರಮ ವಹಿಸುವ ಕೆಲಸವೂ ನಮ್ಮ ವ್ಯವಸ್ಥೆಯಿಂದ ಸಾಧ್ಯವಿಲ್ಲ ಎಂದಾದರೆ ಮತ್ತೇನು ನಿರೀಕ್ಷಿಸಲು ಸಾಧ್ಯ?.

ರಾಜ್ಯದಲ್ಲಿ ಇಂದು 2ನೇ ಹಂತದ ಮತದಾನ

ಅವರನ್ನು ನಿಂದಿಸುವ ಅಸ್ತ್ರವಾಗಿಟ್ಟುಕೊಂಡು ಕಾಂಗ್ರೆಸ್ ಮತದಾರರ ಮನ ಗೆಲ್ಲುವ ಪ್ರಯತ್ನ ಮಾಡಿದೆ. ತಮ್ಮ ಪಕ್ಷದ ಅಭ್ಯರ್ಥಿಗಳನ್ನು ಗೆಲುವಿನ ದಡ ಮುಟ್ಟಿಸಲು ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಷಾ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಪ್ರಿಯಾಂಕ ಗಾಂಧಿ ವಾದ್ರಾ, ರಾಜ್ಯ ನಾಯಕರ ಜೊತೆ ಗೂಡಿ ಬಿರಿಸಿನ ಪ್ರಚಾರ ನಡೆಸಿದರು.

ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಷಿ, ಭಗವಂತ ಖೂಬಾ ಮರು ಆಯ್ಕೆ ಬಯಸಿ ಧಾರವಾಡ ಹಾಗೂ ಬೀದರ್ ಕ್ಷೇತ್ರಗಳಿಂದ ಕಣಕ್ಕಿಳಿದಿದ್ದಾರೆ. ಇನ್ನು ಮಾಜಿ ಮುಖ್ಯಮಂತ್ರಿಗಳಾದ ಜಗದೀಶ್ ಶೆಟ್ಟರ್ ಹಾಗೂ ಬಸವರಾಜ ಬೊಮ್ಮಾಯಿ ಕಮಲದ ಚಿನ್ಹೆಯಡಿ ಬೆಳಗಾವಿ ಮತ್ತು ಹಾವೇರಿಯಿಂದ ಸ್ಪರ್ಧಿಸಿದ್ದಾರೆ.

ಸಿದ್ದರಾಮಯ್ಯ ಸಂಪುಟದಲ್ಲಿರುವ ಎಸ್.ಎಸ್.ಮಲ್ಲಿಕಾರ್ಜುನ್ ತಮ್ಮ ಪತ್ನಿಯನ್ನು ದಾವಣಗೆರೆಯಿಂದ ಕಣಕ್ಕಿಳಿಸಿದ್ದರೆ, ಸತೀಶ್ ಜಾರಕಿಹೊಳಿ, ಶಿವಾನಂದ ಪಾಟೀಲ್, ಈಶ್ವರ್ ಖಂಡ್ರೆ ಹಾಗೂ ಲಕ್ಷ್ಮೀ ಹೆಬ್ಬಾಳ್ಕರ್ ತಮ್ಮ ಮಕ್ಕಳನ್ನು ಕಣಕ್ಕಿಳಿಸಿ ಅದೃಷ್ಟ ಪರೀಕ್ಷೆ ನಡೆಸಿದ್ದಾರೆ.

ರಾಜ್ಯ ಮೊದಲ ಹಂತಕ್ಕಿಂತ ಎರಡನೇ ಹಂತದಲ್ಲಿ ಘಟಾನುಘಟಿಗಳು ಕಣದಲ್ಲಿರುವುದರಿಂದ ಹೆಚ್ಚು ಮತದಾನ ಆಗುವ ನಿರೀಕ್ಷೆ ಇದೆ. ಆದರೆ ಸುಡು ಬಿಸಿಲು ಇದಕ್ಕೆ ಹೇಗೆ ಅವಕಾಶ ಮಾಡಿಕೊಡುತ್ತದೆ ಎಂದು ಕಾದು ನೋಡಬೇಕು.

ಘಟಾನುಘಟಿಗಳೂ ಸೇರಿದಂತೆ ಒಟ್ಟು 227 ಮಂದಿ ಕಣದಲ್ಲಿದ್ದು ಇವರ ರಾಜಕೀಯ ಭವಿಷ್ಯವನ್ನು 2,59,17,493 ಮತದಾರರು ನಿರ್ಧರಿಸಲಿದ್ದಾರೆ.

ಹೆಣ್ಣು ಭ್ರೂಣ ಹತ್ಯೆ

ಪೊಲೀಸರು ನಡೆಸಿದ ದಾಳಿ ವೇಳೆ ಆನಂದ್‌ನ ವಸತಿ ಗೃಹದಲ್ಲಿ ಭ್ರೂಣ ಹತ್ಯೆಗೆ ಬಳಸುತ್ತಿದ್ದ ವೈದ್ಯಕೀಯ ಪರಿಕರಗಳನ್ನು ವಶ ಪಡಿಸಿಕೊಳ್ಳಲಾಗಿದೆ.

ಗರ್ಭಿಣಿ ಮಹಿಳೆಗೆ ಯಾವುದೋ ಮನೆಯೊಂದರಲ್ಲಿ ಸ್ಕ್ಯಾನಿಂಗ್ ಮಾಡಿದ ನಂತರ ಪಾಂಡವಪುರಕ್ಕೆ ಕರೆತಂದು ಆಕೆಗೆ ಅನ್‌ವಾಂಟೆಡ್ ಕಿಟ್‌ನ ಐದು ಮಾತ್ರೆಗಳನ್ನು ಕೊಟ್ಟು ನೋವು ಬಂದಾಗ ತಿಳಿಸುವಂತೆ ಹೇಳಿ ಲಾಡ್ಜ್ ಒಂದರಲ್ಲಿ ಇರಿಸಲಾಗಿತ್ತು. ಆ ನಂತರ ಆಕೆಯನ್ನು ಕ್ವಾಟ್ರಸ್‌ಗೆ ಕರೆತಂದು ಗರ್ಭಪಾತ ಮಾಡಲಾಗುತ್ತಿತ್ತು ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ.

ಈ ವಿಷಯ ತಿಳಿಯುತ್ತಿದ್ದಂತೆಯೇ ಘಟನಾ ಸ್ಥಳಕ್ಕೆ ಜಿಲ್ಲಾಧಿಕಾರಿ ಡಾ. ಕುಮಾರ್, ಜಿಲ್ಲಾ ಎಸ್ಪಿ ಯತೀಶ್, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಮೋಹನ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಶೇಖ್ ತನ್ವೀರ್ ಆಸಿಫ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ವೇಳೆ ಜಿಲ್ಲಾಧಿಕಾರಿಗಳು ಸರ್ಕಾರಿ ಆಸ್ಪತ್ರೆಯ ಆಡಳಿತಾಧಿಕಾರಿಗಳ ಕಚೇರಿಯಲ್ಲಿ ಅಧಿಕಾರಿಗಳು ಸಭೆ ನಡೆಸಿ ಮುಂದಿನ ಕ್ರಮಗಳ ಬಗ್ಗೆ ಚರ್ಚಿಸಿದರು.

ಈ ವೇಳೆ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಡಾ.ಕುಮಾರ್, ಆರೋಗ್ಯ ಇಲಾಖೆಯ ಕ್ವಾಟ್ರಸ್‌ನಲ್ಲಿ ಭ್ರೂಣ ಹತ್ಯೆ ನಡೆಯುತ್ತಿರುವ ಬಗ್ಗೆ ಮಾಹಿತಿ ಪಡೆದು ಪೊಲೀಸರು ಮತ್ತು ಆರೋಗ್ಯ ಇಲಾಖೆ ಅಧಿಕಾರಿಗಳು ದಾಳಿ ನಡೆಸಿ ನಾಲ್ವರನ್ನು ಬಂಧಿಸಿದ್ದಾರೆ. ಕೃತ್ಯಕ್ಕೆ ಬಳಸುತ್ತಿದ್ದ ವೈದ್ಯಕೀಯ ಪರಿಕರಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಈ ಸಂಬಂಧ ಸಮಗ್ರ ತನಿಖೆ ನಡೆಸಿ ಸಂಬಂಧಪಟ್ಟವರ ವಿರುದ್ಧ ನಿದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಾಗುವುದು. ಸಾರ್ವಜನಿಕ ಆಸ್ಪತ್ರೆಯಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಆಂಬುಲೆನ್ಸ್ ಚಾಲಕನಾಗಿರುವ ಆನಂದ್‌ಗೆ ಕಳೆದ ಒಂಬತ್ತು ವರ್ಷದ ಹಿಂದೆ ಈ ಕ್ವಾಟ್ರಸ್ ಅನ್ನು ಮಂಜೂರು ಮಾಡಲಾಗಿದ್ದು, ಅದರಲ್ಲಿ ಆತನ ಪತ್ನಿ ಆಸ್ಪತ್ರೆಯ ಡಿಗ್ರೂಪ್ ನೌಕರಳಾದ ಅಶ್ವಿನಿ, ಆಕೆಯ ತಾಯಿ ಶಶಿಕಲಾ ವಾಸವಾಗಿದ್ದರು. ಮೈಸೂರು ಮೂಲದ ಮಹಿಳೆಗೆ ಮನೆ ಒಂದರಲ್ಲಿ ಸ್ಕ್ಯಾನಿಂಗ್ ಮಾಡಿಸಿ ಗರ್ಭಪಾತಕ್ಕೆ ಇಲ್ಲಿಗೆ ಕರೆತಂದಿದ್ದಾರೆ. ಗರ್ಭಿಣಿ ಮಹಿಳೆಗೆ ಇವರು ನೀಡಿರುವ ಅನ್ ವಾಂಟೆಡ್ ಕಿಟ್ ಪಡೆಯಲು ಯಾರಾದರೂ ವೈದ್ಯರು ಸಲಹೆ ನೀಡಿದ್ದಾರೆಯೇ? ವೈದ್ಯರ ಚೀಟಿ ಇಲ್ಲದೆಯೇ ಕಿಟ್ ಖರೀದಿಸಿದಾರೆಯೇ? ಎಂಬುದು ತನಿಖೆಯಿಂದ ಗೊತ್ತಾಗಬೇಕಾಗಿದೆ. ತಾಲೂಕು ಆರೋಗ್ಯಾದಿಕಾರಗಳ ಕಚೇರಿ ಹಿಂಭಾಗದ ಆರೋಗ್ಯ ಇಲಾಖೆಯ ವಸತಿ ಗೃಹದಲ್ಲೇ ಈ ಕೃತ್ಯ ನಡೆದಿರುವುದು ಅರೋಗ್ಯ ಇಲಾಖೆಯ ವೈಫಲ್ಯವನ್ನು ತೋರಿಸುತ್ತಿದೆ ಎಂದ ಅವರು, ಈ ಕೃತ್ಯದಲ್ಲಿ ಇಲಾಖೆಯ ಅಧಿಕಾರಿಗಳು ಭಾಗಿಯಾಗಿದ್ದಾರೆಯೇ ಎಂಬುದರ ಬಗ್ಗೆಯೂ ಪರಿಶೀಲಿಸಬೇಕಾಗಿದೆ. ಹೀಗಾಗಿ ಬಂಧಿತರ ಮೊಬೈಲ್ ಕರೆಗಳ ಪರಿಶೀಲನೆ ನಡೆಸುವಂತೆ ಸೂಚಿಸಲಾಗಿದೆ ಎಂದು ಡಿಸಿ ತಿಳಿಸಿದರು.

ಹೆಣ್ಣು ಭ್ರೂಣ ಹತ್ಯೆ ಪ್ರಕರಣವನ್ನು ಜಿಲ್ಲಾಡಳಿತ ಗಂಭೀರವಾಗಿ ಪರಿಗಣಿಸಿದ್ದು, ಆರೋಗ್ಯ ಇಲಾಖೆಯ ಅಧಿಕಾರಿಗಳು ಮತ್ತು ಪೊಲೀಸ್ ಅಧಿಕಾರಿಗಳನ್ನೊಳಗೊಂಡ ವಿಶೇಷ ತಂಡ ರಚಿಸಿ ತನಿಖೆ ನಡೆಸುವ ಮೂಲಕ ಪ್ರಕರಣದಲ್ಲಿ ಭಾಗಿಯಾಗಿರುವ ಎಲ್ಲರನ್ನು ಪತ್ತೆ ಹಚ್ಚಿ ಕಾನೂನು ಪ್ರಕಾರ ಶಿಕ್ಷೆಗೆ ಗುರಿಪಡಿಸಲಾಗುವುದು ಎಂದರು. ಜಿಲ್ಲಾ ಎಸ್ಪಿ ಯತೀಶ್ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಹಾಡ್ಯ ಗ್ರಾಮದ ಆಲೆಮನೆಯಲ್ಲಿ ನಡೆದಿದ್ದ ಭ್ರೂಣ ಹತ್ಯೆಗೂ ಈ ಆರೋಪಿಗಳಿಗೂ ಸಂಬಂಧವಿದೆಯೇ ಎಂಬುದರ ಬಗ್ಗೆಯೂ ತಿಳಿಯಬೇಕಾಗಿದೆ. ಹೆಣ್ಣು ಭ್ರೂಣ ಹತ್ಯೆ ಜಾಲ ದೊಡ್ಡದಿದೆ ಎನ್ನುವುದು ಮೇಲ್ನೋಟಕ್ಕೆ ಕಂಡುಬರುತ್ತಿದೆ. ಈ ಪ್ರಕರಣದ ತನಿಖೆಗೆ ತಂಡ ರಚಿಸಬೇಕೇ ಎಂಬುದರ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚೆಯ ನಂತರ ತೀರ್ಮಾನಿಸಲಾಗುವುದು ಎಂದರು.

ಮಹಿಳೆ ಅಪಹರಣ ಪ್ರಕರಣ

ಬೆಂಗಳೂರಿನ ರೇವಣ್ಣ ನಿವಾಸದಲ್ಲಿ ಎಸ್‌ಐಟಿ ಸ್ಥಳ ಮಹಜರು

ಬೆಂಗಳೂರು: ಮಹಿಳೆಯೊಬ್ಬರ ಅಪಹರಣ ಹಾಗೂ ಅಕ್ರಮ ಬಂಧನಕ್ಕೆ ಸಂಬಂಧಿಸಿದಂತೆ ಜೆಡಿಎಸ್ ಶಾಸಕ ಹೆಚ್ ಡಿ ರೇವಣ್ಣ ವಿರುದ್ಧದ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ ಬೆಂಗಳೂರಿನ ಬಸವನಗುಡಿಯಲ್ಲಿರುವ ಅವರ ನಿವಾಸದಲ್ಲಿ ಸೋಮವಾರ ಸ್ಥಳ ಮಹಜರು ನಡೆಸಿತು. ರೇವಣ್ಣ ಕುಟುಂಬದವರ ಅನುಪಸ್ಥಿತಿಯಲ್ಲಿ ನಡೆದ ಸ್ಥಳ ಪರಿಶೀಲನೆಗೆ ಅವರ ಪರ ವಕೀಲ ಗೋಪಾಲ್ ಅವರನ್ನು ಎಸ್‌ಐಟಿ ತಂಡ ಕರೆಸಿತ್ತು. ಎರಡು ದಿನಗಳ ಹಿಂದೆ ಹಾಸನ ಜಿಲ್ಲೆಯ ಹೊಳೆನರಸೀಪುರದಲ್ಲಿರುವ ರೇವಣ್ಣ ಅವರ ಮನೆಯಲ್ಲಿಯೂ ಸ್ಥಳ ಮಹಜರು ನಡೆಸಲಾಗಿತ್ತು.

ರೇವಣ್ಣ ಎರಡು ಪ್ರಕರಣಗಳನ್ನು ಎದುರಿಸುತ್ತಿದ್ದಾರೆ. ಮನೆಕೆಲಸದವರಿಗೆ ಕಿರುಕುಳ ನೀಡಿದ ಪ್ರಕರಣದಲ್ಲಿ ರೇವಣ್ಣ ಅವರ ಪುತ್ರ ಪ್ರಜ್ವಲ್ ಕೂಡ ಆರೋಪಿಯಾಗಿದ್ದಾರೆ. ಎರಡನೆಯದು ಮೇ 2 ರಂದು ದಾಖಲಾಗಿರುವ ಅಪಹರಣ ಪ್ರಕರಣವಾಗಿದೆ. ಪ್ರಜ್ವಲ್ ರೇವಣ್ಣ ವಿರುದ್ಧದ ಅತ್ಯಾಚಾರ ಆರೋಪದ ವಿಡಿಯೋಗಳು ವೈರಲ್ ಆದ ಬಳಿಕ ರೇವಣ್ಣ ಅವರ ಆಪ್ತ ಸತೀಶ್ ಬಾಬಣ್ಣ ಏಪ್ರಿಲ್ 29 ರಂದು ತನ್ನ ತಾಯಿಯನ್ನು ಬೈಕ್‌ನಲ್ಲಿ ಕರೆದೊಯ್ದು ಅಕ್ರಮ ಬಂಧನದಲ್ಲಿಟ್ಟಿದ್ದಾರೆ ಎಂದು ಸಂತ್ರಸ್ತೆಯ ಮಗ ಮೈಸೂರಿನ. ಕೆ.ಆರ್. ನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು. ಆ ಮಹಿಳೆಯನ್ನು ರಕ್ಷಿಸಿರುವ ಎಸ್ ಐಟಿ, ಆಕೆಗೆ ಲೈಂಗಿಕ ದೌರ್ಜನ್ಯವೆಸಗಲಾಗಿದೆ ಎನ್ನಲಾದ ಸ್ಥಳಗಳಲ್ಲಿ ಪರಿಶೀಲನೆ ನಡೆಸುತ್ತಿದೆ. ಪ್ರಜ್ವಲ್ ರೇವಣ್ಣ ಅನೇಕ ಮಹಿಳೆಯರಿಗೆ ಅತ್ಯಾಚಾರ, ಲೈಂಗಿಕ ಕಿರುಕುಳ ನೀಡಿದ್ದಾರೆ ಎನ್ನಲಾದ ಅನೇಕ ವಿಡಿಯೋಗಳು ಹಾಗೂ ಫೋಟೋಗಳು ವೈರಲ್ ಆಗಿವೆ. ಎಸ್‌ಐಟಿ ಇಬ್ಬರು ದೂರುದಾರರನ್ನು ಅತ್ಯಾಚಾರ ಮತ್ತು ಕಿರುಕುಳ ನಡೆದ ವಿವಿಧ ಸ್ಥಳಗಳಿಗೆ ಕರೆದೊಯ್ದಿದೆ.

ಈ ಮಧ್ಯೆ ರೇವಣ್ಣ ಅವರ ಬಸವನಗುಡಿಯ ಮನೆಯೊಳಗೆ ನನ್ನನ್ನು ಬಿಡಲಿಲ್ಲ ಎಂದು ಅವರ ಪರ ವಕೀಲ ಗೋಪಾಲ್ ಆರೋಪಿಸಿದ್ದಾರೆ. ಸ್ಥಳ ಪರಿಶೀಲನೆಗೆ ನೋಟಿಸ್ ನೀಡಿದ್ದರೂ ಎಸ್‌ಐಟಿ ಒಳಗೆ ಬಿಡಲಿಲ್ಲ ಎಂದು ಅವರು ಕಿಡಿಕಾರಿದ್ದಾರೆ. ನಾನು ಅಲ್ಲಿ ಹಾಜರಿರಬೇಕಾಗಿದ್ದರೂ ನನ್ನನ್ನು ಒಳಗೆ ಬಿಡಲಿಲ್ಲ. ಅಲ್ಲಿ ಅಕ್ರಮಗಳು ನಡೆಯುತ್ತಿವೆ. ಸ್ಥಳ ಮಹಜರಿಗೆ ನಾನು ವಿರೋಧಿಯಲ್ಲ, ಎಸ್‌ಐಟಿ ನನಗೆ ಇಲ್ಲಿ ಹಾಜರಾಗುವಂತೆ ನೋಟಿಸ್ ನೀಡಿದಾಗ, ನನ್ನನ್ನು ಏಕೆ ಹೊರಗೆ ಇರಿಸಲಾಯಿತು. ನಾನು ಸಹಕರಿಸುವುದಿಲ್ಲ ಎಂದು ಹೇಳಿದ್ದೀನಾ ಎಂದು ಗೋಪಾಲ್ ಕಿಡಿಕಾರಿದರು.


ವಶಪಡಿಸಿಕೊಂಡ ವಸ್ತುಗಳ ಪಟ್ಟಿಯನ್ನು ನೀಡಬೇಕಾಗಿದೆ ಎಂದು ಹೇಳಿದ ಅವರು, ಎಸ್‌ಐಟಿ ಯಾರಿಗೆ ಇವುಗಳನ್ನು ಹಸ್ತಾಂತರಿಸುತ್ತದೆ ಎಂದು ಆಶ್ಚರ್ಯ ವ್ಯಕ್ತಪಡಿಸಿದರು. ಎಸ್‌ಐಟಿ ಏಕಪಕ್ಷೀಯ ರೀತಿಯಲ್ಲಿ ಮಾಡುತ್ತಿದೆ. ಈ ಪ್ರಕ್ರಿಯೆಯಲ್ಲಿ ನನ್ನನ್ನು ದೂರ ಇಟ್ಟಿದ್ದಾರೆ ಎಂದು ವಕೀಲರು ಆರೋಪಿಸಿದರು.

ಈ ಮಧ್ಯೆ ವಿದೇಶದಿಂದ ಪ್ರಜ್ವಲ್ ಆಗಮನದ ನಿರೀಕ್ಷೆಯಲ್ಲಿ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಭದ್ರತಾ ಸಿಬ್ಬಂದಿ ಅಲರ್ಟ್ ಆಗಿದ್ದಾರೆ. ಅವರ ವಿರುದ್ಧ ಬ್ಲೂ ಕಾರ್ನರ್ ನೋಟಿಸ್ ಕೂಡ ಜಾರಿ ಮಾಡಲಾಗಿದೆ.

ಅಪರಾಧಕ್ಕೆ ಸಂಬಂಧಿಸಿದಂತೆ ವ್ಯಕ್ತಿಯ ಗುರುತು, ಸ್ಥಳ ಅಥವಾ ಚಟುವಟಿಕೆಗಳ ಕುರಿತು ಅದರ ಸದಸ್ಯ ರಾಷ್ಟ್ರಗಳಿಂದ ಹೆಚ್ಚುವರಿ ಮಾಹಿತಿಯನ್ನು ಸಂಗ್ರಹಿಸಲು ಅಂತರಾಷ್ಟ್ರೀಯ ಪೊಲೀಸ್ ಸಹಕಾರ ಸಂಸ್ಥೆಯಿಂದ ಬ್ಲೂ ಕಾರ್ನರ್ ನೋಟಿಸ್ ನೀಡಲಾಗುತ್ತದೆ.

ಮೈಸೂರು ನಗರದ ಆಸ್ತಿ ತೆರಿಗೆ ವಿನಾಯಿತಿ ಅವಧಿ ವಿಸ್ತರಣೆಗೆ ಮಾಜಿ ಮೇಯರ್ ಸಂದೇಶ್ ಸ್ವಾಮಿ ಆಗ್ರಹ

ಮೈಸೂರು, ಮೇ.4(ಬಿಎಲ್ ಯು)– ಮೈಸೂರು ನಗರದಲ್ಲಿ ಆಸ್ತಿ ತೆರಿಗೆ ಪಾವತಿ ವಿನಾಯಿತಿಯನ್ನು ಒಂದು ತಿಂಗಳು ವಿಸ್ತರಿಸಬೇಕೆಂದು ಮಾಜಿ ಮೇಯರ್ ಸಂದೇಶ್ ಸ್ವಾಮಿ ಸರ್ಕಾರವನ್ನು ಆಗ್ರಹಿಸಿದ್ದಾರೆ.



ಮೈಸೂರು ನಗರದಲ್ಲಿ ಪ್ರತಿ ವರ್ಷ ಮಾರ್ಚ್ ನಂತರ ಏಪ್ರಿಲ್ ಅಂತ್ಯದ ತನಕ ಆಸ್ತಿ ತೆರಿಗೆದಾರರಿಗೆ ಶೇಕಡ 5 ರಷ್ಟು ರಿಯಾಯಿತಿ ನೀಡಲಾಗುತ್ತಿತ್ತು. ಆದರೆ ಲೋಕಸಭಾ ಚುನಾವಣೆ ಹಿನ್ನೆಲೆ ಅಧಿಕಾರಿಗಳು ತೆರಿಗೆ ಸಂಗ್ರಹಿಸದೆ ಚುನಾವಣಾ ಕಾರ್ಯದಲ್ಲಿ ತೊಡಗಿದ್ದರು. ಈ ಸಮಯದಲ್ಲಿ ತೆರಿಗೆದಾರರು ತೆರಿಗೆ ಪಾವತಿ ಮಾಡಲು ಹೋದಾಗ ಪಾವತಿ ಸಾಧ್ಯವಾಗಿರಲಿಲ್ಲ. ಈ ಹಿನ್ನೆಲೆ ಆಸ್ತಿ ತೆರಿಗೆ ಪಾವತಿಸಲು ಮೇ ತಿಂಗಳಾಂತ್ಯದ ತನಕ ಕಾಲಾವಕಾಶ ನೀಡುವಂತೆ ಒತ್ತಾಯಿಸಿದ್ದಾರೆ.

ಆಸ್ತಿ ತೆರಿಗೆ ಪಾವತಿ ಮಾಡಲು ಒಂದು ತಿಂಗಳು ಕಾಲಾವಕಾಶ ನೀಡುವುದರ ಜೊತೆಗೆ ತೆರಿಗೆಯಲ್ಲಿ ಶೇಕಡ 5 ರಷ್ಟು ರಿಯಾಯಿತಿ ಕೂಡ ನೀಡುವಂತೆ ಸಂದೇಶ್ ಸ್ವಾಮಿ ಮನವಿ ಮಾಡಿದ್ದಾರೆ.

ಈಗಿರುವ ಆಸ್ತಿ ತೆರಿಗೆ ಪದ್ಧತಿ ಅವೈಜ್ಞಾನಿಕವಾಗಿದ್ದು, ತೆರಿಗೆದಾರರಿಗೆ ಬಾರೀ ಹೊರೆಯಾಗಿದೆ. ಈ ಹಿನ್ನೆಲೆ ವೈಜ್ಞಾನಿಕ ರೀತಿಯಲ್ಲಿ ತೆರಿಗೆ ವಿಧಿಸಬೇಕು ಎಂದು ಕೋರಿದ್ದಾರೆ.

ಸಿದ್ದರಾಮಯ್ಯ ಮುಖ್ಯಮಂತ್ರಿಯಾದ ನಂತರ ಆಸ್ತಿಗಳ ಮೌಲ್ಯವನ್ನು ಮೂರು ಪಟ್ಟು ಹೆಚ್ಚಳ ಮಾಡಿದೆ. ಇದರ ಆಧಾರದ ಮೇಲೆ ತೆರಿಗೆ ಸಂಗ್ರಹ ಮಾಡುತ್ತಿರುವುದು ಕಾನೂನು ಬಾಹಿರ ಎಂದು ಕಿಡಿಕಾರಿದ್ದಾರೆ.

ಎಸ್.ಎಂ.ಕೃಷ್ಣ ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಮೌಲ್ಯವರ್ಧಿತ ತೆರಿಗೆ ಪದ್ಧತಿ ಜಾರಿಗೊಳಿಸಿದ್ದರು. ಆ ಪ್ರಕಾರ ಆಸ್ತಿ ಮೌಲ್ಯದ ಮೇಲೆ ಶೇಕಡ 0,003 ತೆರಿಗೆ ವಿಧಿಸಲಾಗುತ್ತಿತ್ತು. ಅಂದರೆ ಒಂದು ಲಕ್ಷಕ್ಕೆ 300 ರೂಪಾಯಿ ತೆರಿಗೆ ವಿಧಿಸಲಾಗಿತ್ತು. ಆದರೆ 2005–06 ರಲ್ಲಿ ಶೇಕಡ 0.3 ರಷ್ಟಿದ್ದ ತೆರಿಗೆಯನ್ನು ಶೇಕಡ 6 ರಷ್ಟು ಹೆಚ್ಚಳ ಮಾಡಿರುವುದನ್ನು ಸರ್ಕಾರ ರದ್ದು ಮಾಡಿತ್ತು. ಈಗ ಮೂರು ವರ್ಷಗಳಿಗೊಮ್ಮೆ ಶೇಕಡ 15 ರಷ್ಟು ಆಸ್ತಿ ತೆರಿಗೆ ಹೆಚ್ಚಳ ಮಾಡಲಾಗುತ್ತಿದೆ ಎಂದು ಸಂದೇಶ್ ಸ್ವಾಮಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಯಾವುದೇ ತೀರ್ಮಾನ ವಿಧಾನ ಮಂಡಲದಲ್ಲಿ ಅನುಮೋದನೆ ಯಾಗಬೇಕು, ಅದು ರಾಜ್ಯ ಪತ್ರದಲ್ಲಿ ಪ್ರಕಟವಾಗಬೇಕು. ಆ ನಂತರ ಅದು ಆದೇಶವಾಗಬೇಕು. ಈ ಎಲ್ಲಾ ಸರ್ಕಾರದ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ವೈಜ್ಞಾನಿಕ ರೀತಿಯಲ್ಲಿ ತೆರಿಗೆ ಪದ್ಧತಿ ಜಾರಿ ಮಾಡಬೇಕು. ಈ ಹಿನ್ನೆಲೆ ಕೂಡಲೇ ಅವೈಜ್ಞಾನಿಕ ತೆರಿಗೆ ಪದ್ಧತಿ ಕೈ ಬಿಡಬೇಕು. ಈ ಮೂಲಕ ತೆರಿಗೆದಾರರಿಗೆ ಆಗುತ್ತಿರುವ ಹೊರೆ ತಪ್ಪಿಸಬೇಕು ಎಂದು ಆಗ್ರಹಿಸಿದ್ದಾರೆ.

ಮೈಸೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ ಬಹಳಷ್ಟು ಹಳೆಯ ಬಡಾವಣೆ ಹಾಗೂ ಅನಧಿಕೃತ ಬಡಾವಣೆಗಳಿವೆ. ಇವುಗಳಿಂದ ನಿಯಮಿತವಾಗಿ ತೆರಿಗೆ ವಸೂಲಿ ಮಾಡಬೇಕು. ಈ ಮೂಲಕ ಸಮರ್ಪಕ ನಿರ್ವಹಣೆಗೆ ಅವಶ್ಯವಿರುವ ಸಂಪನ್ಮೂಲ ಕ್ರೋಢಿಕರಣ ಮಾಡಬೇಕು ಎಂದು ಸಂದೇಶ್ ಸ್ವಾಮಿ ನಗರ ಪಾಲಿಕೆಯನ್ನು ಒತ್ತಾಯಿಸಿದ್ದಾರೆ.

ಪುಣೆಯಲ್ಲಿ ಕ್ರಿಕೆಟ್ ಆಡುವಾಗ ಖಾಸಗಿ ಅಂಗಕ್ಕೆ ಚೆಂಡು ಬಡಿದು 11 ವರ್ಷದ ಬಾಲಕ ಸಾವು!

ಪುಣೆ: ತನ್ನ ಸ್ನೇಹಿತರೊಂದಿಗೆ ಕ್ರಿಕೆಟ್ ಆಡುತ್ತಿದ್ದಾಗ, ಕ್ರಿಕೆಟ್ ಚೆಂಡು ಮರ್ಮಾಂಗಕ್ಕೆ ಬಡಿದು 11 ವರ್ಷದ ಬಾಲಕನೊಬ್ಬ ಮೃತಪಟ್ಟಿರುವ ಘಟನೆ ಸಿಸಿಟಿವಿ ಕ್ಯಾಮೆರಾದಲ್ಲಿ ಇದು ಸೆರೆಯಾಗಿದೆ.



ಶೌರ್ಯ ಎಂಬ ಬಾಲಕ ಬೌಲಿಂಗ್ ಮಾಡುತ್ತಿದ್ದ, ವೇಗವಾಗಿ ಬಂದ ಚೆಂಡು ಶೌರ್ಯನ ಮರ್ಮಾಂಗಕ್ಕೆ ಬಡಿದಿದ್ದರಿಂದ, ಆತ ಮೈದಾನದಲ್ಲೇ ಕುಸಿದು ಬಿದ್ದಿರುವುದು ವಿಡಿಯೊದಲ್ಲಿ ದಾಖಲಾಗಿದೆ.

ನಂತರ ಬಾಲಕನನ್ನು ಸಮೀಪದ ಖಾಸಗಿ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ, ಆತ ಮೃತಪಟ್ಟಿದ್ದಾನೆ ಎಂದು ವೈದ್ಯರು ಘೋಷಿಸಿದ್ದಾರೆ. ಸಿಸಿಟಿವಿ ಕ್ಯಾಮೆರಾದ ದೃಶ್ಯವನ್ನು ಆಧರಿಸಿ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಮೇಲ್ನೋಟಕ್ಕೆ ಬಾಲಕನ ಆಕಸ್ಮಿಕ ಸಾವನ್ನಪ್ಪಿದ್ದಾನೆ ಎಂದು ಪೊಲೀಸರು ಹೇಳಿದ್ದಾರೆ.11 ವರ್ಷದ ಶೌರ್ಯ ಕ್ರಿಕೆಟ್‌ನಲ್ಲಿ ಕಠಿಣ ಅಭ್ಯಾಸ ಮಾಡಿ ಒಳ್ಳೆ ಕ್ರಿಕೆಟರ್ ಆಗುವ ಕನಸು ಕಂಡಿದ್ದ. ಆದರೆ ಆಕಸ್ಮಿಕವಾಗಿ ಸಂಭವಿಸಿದ ಘಟನೆಯಿಂದ ತನ್ನ ಪ್ರಾಣವನ್ನೇ ಕಳೆದುಕೊಂಡಿದ್ದಾನೆ.

ಭಾರೀ ಮಳೆಗೆ ಬ್ರೆಜಿಲ್ ತತ್ತರ: ಭೀಕರ ಪ್ರವಾಹಕ್ಕೆ 75 ಮಂದಿ ಬಲಿ

ಸಾವೊಪೌಲೊ: ಬ್ರೆಜಿಲ್‌ನ ದಕ್ಷಿಣ ಭಾಗದಲ್ಲಿರುವ 'ರಿಯೊ ಗ್ರಂಡ್ ಡೊ ಸುಲ್' ರಾಜ್ಯದಲ್ಲಿ ಭೀಕರ ಮಳೆಯಾಗುತ್ತಿದ್ದು, ಭಾರೀ ಮಳೆಯಿಂದ ಪ್ರವಾಹ ಎದುರಾಗಿ ಈ ವರೆಗೂ 75ಕ್ಕೂ ಹೆಚ್ಚು ಮಂದ ಮೃತಪಟ್ಟಿದ್ದಾರೆ. ಅಲ್ಲದೆ, ನೂರಾರು ಮಂದಿ ನಾಪತ್ತೆಯಾಗಿದ್ದಾರೆಂದು ತಿಳಿದುಬಂದಿದೆ. ಮನೆಗಳು, ರಸ್ತೆಗಳು ಮತ್ತು ಸೇತುವೆಗಳ ಅವಶೇಷಗಳಡಿಯಲ್ಲಿ ಸಿಲುಕಿರುವ ಜನರನ್ನು ಹುಡುಕಲು ರಕ್ಷಣಾ ಕಾರ್ಯಾಚರಣೆ ಭರದಿಂದ ಸಾಗಿವೆ. ರಿಯೊ ಗ್ರಾಂಡೆ ಡೊ ಸುಲ್‌ನಲ್ಲಿ ನೀರಿನ ಮಟ್ಟ ಹೆಚ್ಚಿರುವುದರಿಂದ ಅಣೆಕಟ್ಟುಗಳ ಮೇಲಿನ ಹೊರೆ ಹೆಚ್ಚುತ್ತಿದೆ ಎಂಬ ವರದಿ ಬಂದಿದೆ.

ಮದುವೆಗೆ ಹೋಗಿದ್ದ ಐವರು ಮೆಡಿಕಲ್ ವಿದ್ಯಾರ್ಥಿಗಳು ಕನ್ಯಾಕುಮಾರಿ ಬೀಚ್‌ನಲ್ಲಿ ಮುಳುಗಿ ಸಾವು!

ಚೆನ್ನೈ: ಮದುವೆಗೆ ತೆರಳಿದ್ದ 5 ಮಂದಿ ಮೆಡಿಕಲ್ ವಿದ್ಯಾರ್ಥಿಗಳು ಕನ್ಯಾಕುಮಾರಿ ಬೀಚ್‌ನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ. ಲೆಮುರ್ ಬೀಚ್‌ನಲ್ಲಿ ಈಜಾಡುವಾಗ ಐವರೂ ನೀರುಪಾಲಾಗಿದ್ದಾರೆ. ಇವರಲ್ಲಿ ಇಬ್ಬರು ಯುವತಿಯರಿದ್ದರು. ಇವರೆಲ್ಲಾ ತಿರುಚಿರಪಳ್ಳಿಯಲ್ಲಿರುವ ಎಸ್‌ಆರ್‌ಎಂ ಮೆಡಿಕಲ್ ಕಾಲೇಜಿನವರು ಎಂದು ಮಾಹಿತಿ ಲಭ್ಯವಾಗಿದೆ.

ಬಾಹ್ಯಾಕಾಶಕ್ಕೆ 3ನೇ ಬಾರಿಗೆ ಸುನೀತಾ ವಿಲಿಯಮ್ಸ್ ಪಯಣ

ವಾಷಿಂಗ್ಟನ್: ಭಾರತ ಮೂಲದ ವಿಶ್ವವಿಖ್ಯಾತ ಗಗನಯಾತ್ರಿ ಸುನೀತಾ ವಿಲಿಯಮ್ಸ್ ಇದೀಗ ಮತ್ತೆ ಬಾಹ್ಯಾಕಾಶಕ್ಕೆ (Astronaut)ಕ್ಕೆ ಹಾರಲು ಸಿದ್ಧರಾಗಿದ್ದು, ನಾಳೆ ನಡೆಯಲಿರುವ ಉಡಾವಣೆಯಲ್ಲಿ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಪಯಣ ಬೆಳೆಸಲಿದ್ದಾರೆ.

ಉಡಾವಣೆಗೆ ಕ್ಷಣಗಣನೆ ಆರಂಭ!



ನಾಳೆ ಬೆಳಗ್ಗೆ 8.34ಕ್ಕೆ ಕೆನೆಡಿ ಬಾಹ್ಯಕಾಶ ಕೇಂದ್ರ (Kennedy Space Center) ದಿಂದ ಅವರು ನೂತನವಾಗಿ ನಿರ್ಮಿಸಿರುವ ಬಾಹ್ಯಾಕಾಶ ನೌಕೆ (space craft)ಯಲ್ಲಿ ಗಗನಯಾತ್ರೆ ಕೈಗೊಳ್ಳಲಿದ್ದಾರೆ. ತಮ್ಮ ಮೂರನೇ ಬಾರಿಯ ಗಗನಯಾತ್ರೆ ಬಗ್ಗೆ ಪ್ರತಿಕ್ರಿಯಿಸಿರುವ ಸುನೀತಾ, ಅಂತಾರಾಷ್ಟ್ರೀಯ ಬಾಹ್ಯಾಕಾಶ ಸಂಸ್ಥೆಗೆ ಕಾಲಿಟ್ಟಾಗ ಮತ್ತೆ ಮನೆಗೆ ಮರಳಿದ ಅನುಭವವಾಗುತ್ತದೆ.

ಈ ಬಾರಿ ಹೊಸ ಬಾಹ್ಯಾಕಾಶ ನೌಕೆಯಲ್ಲಿ ತೆರಳುತ್ತಿರುವ ಬಗ್ಗೆ ಸ್ವಲ್ಪ ಅಂಜಿಕೆ ಇದ್ದೇ ಇರುತ್ತದೆ ಎಂದು ಹೇಳಿದ್ದಾರೆ. ಮಹತ್ವದ ಅಧ್ಯಯನಕ್ಕಾಗಿ ಬಾಹ್ಯಾಕಾಶಕ್ಕೆ ಹಾರಲಿರುವ ಸುನೀತಾ ವಿಲಿಯಮ್ಸ್ ಎಲ್ಲಾ ತಯಾರಿ ಮಾಡಿಕೊಂಡಿದ್ದು, ಕೊಂಚ ನರ್ವಸ್ ಆಗಿದ್ದೇನೆ. ಆದರೆ ಮತ್ತೆ ತವರಿಗೆ ಮರಳುವ ಅನುಭವವಾಗುತ್ತಿದೆ. ಬಾಹ್ಯಕಾಶವೇ ನನಗೆ ತವರಾಗಿದೆ ಎಂದು ಸುನೀತಾ ವಿಲಿಯಮ್ಸ್ ಹೇಳಿದ್ದಾರೆ.

ಮೂರನೇ ಬಾಹ್ಯಾಕಾಶ ಪಯಣ: ಸುನಿತಾ ವಿಲಿಯಮ್ಸ್‌ಗೆ ಇದು ಮೂರನೇ ಬಾಹ್ಯಾಕಾಶ ಪಯಣವಾಗಿದ್ದು, ಈ ಹಿಂದೆ ಅವರು, ಮೊದಲ ಬಾರಿಗೆ 2006ರಲ್ಲಿ ಯಶಸ್ವಿ ಗಗನಯಾತ್ರೆ ಕೈಗೊಂಡಿದ್ದರು. ಇದಾದ ಬಳಿಕ 2012ರಲ್ಲಿ ಮತ್ತೆ ಕೈಗೊಂಡಿದ್ದರು. ಅವರು ಬಾಹ್ಯಾಕಾಶದಲ್ಲಿ ಬರೋಬ್ಬರಿ 322 ದಿನಗಳನ್ನು ಅಲ್ಲಿ ಕಳೆದಿದ್ದರು. ಸುನೀತಾ ವಿಲಿಯಮ್ಸ್ ಅತೀ ಹೆಚ್ಚು ಬಾರಿ ಬಾಹ್ಯಾಕಾಶ ಹಾರಿದ ಹಾಗೂ ಬಾಹ್ಯಾಕಾಶದಲ್ಲಿ ಅಧ್ಯಯನ ನಡೆಸಿದ ಮಹಿಳಾ ಗಗನಯಾತ್ರಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದಾರೆ. ಇದುವರೆಗೆ ಸುನಿತಾ ವಿಲಿಯಮ್ಸ್ ಗರಿಷ್ಠ ಬಾಹ್ಯಾಕಾಶ ಪ್ರಯಾಣ ಮಾಡಿದ್ದಾರೆ. ಒಟ್ಟು 50 ಗಂಟೆ 40 ನಿಮಿಷ ಕಾಲ ಬಾಹ್ಯಾಕಾಶದಲ್ಲಿ ಕಳೆದಿದ್ದಾರೆ.

ಭಾರತ ಮೂಲದ ಪೋಷಕರು: ಭಾರತೀಯ ಮೂಲದ ಡಾ. ದೀಪಕ್ ಪಾಂಡ್ಯಾ ಮತ್ತು ಬೋನಿ ಪಾಂಡ್ಯ ಪುತ್ರಿಯಾಗಿರುವ 59 ವರ್ಷದ ಸುನೀತಾ, ಬಾಹ್ಯಾಕಾಶಕ್ಕೆ ಹೋದ ಮೊದಲ ಮಹಿಳಾ ಗಗನಯಾತ್ರಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಸಮೋಸಾ ಪ್ರಿಯೆ ಆಗಿರುವ ಸುನೀತಾ ವಿಲಿಯಮ್ಸ್ ಬಾಹ್ಯಾಕಾಶದಲ್ಲಿ ಸಮೋಸ ಸವಿಯುವ ಮಜವೇ ಬೇರೆ ಎಂದಿದ್ದಾರೆ.

ಬೋಯಿಂಗ್ ಸ್ಟಾರ್ಲೈನರ್ ಮೂಲಕ ಪಯಣ: ಅಂದಹಾಗೆ ಸುನಿತಾ ವಿಲಿಯಮ್ಸ್ ಮತ್ತು ಅವರ ತಂಡ ಬೋಯಿಂಗ್ ಸಂಸ್ಥೆಯ ಸ್ಟಾರ್ ಲೈನರ್ ರಾಕೆಟ್ ಮೂಲಕ ಬಾಹ್ಯಾಕಾಶಕ್ಕೆ ಪಯಣ ಬೆಳೆಸುತ್ತಿದ್ದು, ಇದು ಈ ರಾಕೆಟ್ ನ ಮೊದಲ ಮಾನವ ಸಹಿತ ಬಾಹ್ಯಾಕಾಶ ಪಯಣವಾಗಿದೆ. ಬೋಯಿಂಗ್‌ನ ಸ್ಟಾರ್‌ಲೈನರ್ ರಾಕೆಟ್ ಫ್ಲೋರಿಡಾದ ಕೇಪ್ ಕ್ಯಾನವೆರಲ್ ಉಡಾವಣಾ ಕೇಂದ್ರದಿಂದ ಅಂತರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಹಾರಲಿದೆ. ಈ ಸ್ಟಾರ್‌ಲೈನರ್ ನಾಳೆ ಬೆಳಗ್ಗೆ ಭಾರತೀಯ ಕಾಲಮಾನ ಬೆಳಗ್ಗೆ 8 ಗಂಟೆ 4 ನಿಮಿಷಕ್ಕೆ ಸುನಿತಾ ವಿಲಿಯಮ್ಸ್ ಮಾತ್ರವಲ್ಲದೇ ಮತ್ತು ಮತ್ತೋರ್ವ ಗಗನ ಯಾತ್ರಿ ಬುಚ್ ವಿಲ್ಮೋರ್ ಅವರನ್ನೂ ಕೂಡ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಒಯ್ಯುತ್ತದೆ.



ಮಾಜಿ ಸಚಿವರೂ ಆದ ಹಾಲಿ ಶಾಸಕ ಎ.ಮಂಜು, ಮಾಜಿ ಶಾಸಕ ವೈಎಸ್‌ವಿ ದತ್ತ ಅವರು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರನ್ನು ಭೇಟಿಯಾಗಿ ಪ್ರಸಕ್ತ ವಿದ್ಯಮಾನಗಳ ಬಗ್ಗೆ ಚರ್ಚಿಸಿದರು. ಈ ವೇಳೆ ದೇವೇಗೌಡರ ಪತ್ನಿ ಶ್ರೀಮತಿ ಚನ್ನಮ್ಮ ಉಪಸ್ಥಿತರಿದ್ದರು.

ಚುನಾವಣಾ ಬಾಂಡ್ ಬಳಿಕ ಪಿಎಂ ಕೇರ್ಸ್ ಫಂಡ್ ಮೇಲೂ ಅನುಮಾನ: ತನಿಖೆಗೆ ಆಗ್ರಹ

ಬೆಂಗಳೂರು: ಚುನಾವಣಾ ಬಾಂಡ್‌ಗಳು ಅಸಂವಿಧಾನಿಕ ಎಂದು ಘೋಷಿಸಲ್ಪಟ್ಟ ಬೆನ್ನಲ್ಲೇ, ಪಿಎಂ ಕೇರ್ಸ್ ಫಂಡ್ ಬಗ್ಗೆಯೂ ಇದೀಗ ಅನುಮಾನಗಳು ಮೂಡತೊಡಗಿದ್ದು, ಇದರ ಬಗ್ಗೆಯೂ ತನಿಖೆ ನಡಸಬೇಕೆಂದು ಹಲವರು ಆಗ್ರಹಿಸುತ್ತಿದ್ದಾರೆ.

ಚುನಾವಣಾ ಬಾಂಡ್‌ಗಳ ಮೂಲಕ ಪಾರದರ್ಶಕತೆಯನ್ನು ತಂದಿದ್ದೇನೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದರು, ಆದರೆ, ಹಗರಣ ಬಯಲಿಗೆ ಬಂದಿದೆ. ಇದೀಗ ಪಿಎಂ ಕೇರ್ಸ್ ನಿಧಿಯನ್ನು ಯಾವುದಕ್ಕೆ ಬಳಸಲಾಗುತ್ತಿದೆ, ಯಾವ ಉದ್ದೇಶಕ್ಕೆ ಎಷ್ಟು ಖರ್ಚು ಮಾಡಲಾಗಿದೆ ಎಂಬುದನ್ನು ತಿಳಿದುಕೊಳ್ಳುವ ಹಕ್ಕು ಸಾರ್ವಜನಿಕರಿಗೆ ಇದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಹೇಳಿದ್ದಾರೆ.

ಕಲ್ಯಾಣ ಯೋಜನೆಗಳ ಹಣ ಆರ್‌ಎಸ್‌ಎಸ್‌ಗೆ ಹೋಗಿವೆ. ಇಂದು, ಆರ್‌ಎಸ್‌ಎಸ್ ಸೈನಿಕ ಶಾಲೆಗಳು ಮತ್ತು ಕೇಂದ್ರೀಯ ವಿದ್ಯಾಲಯಗಳ ಮೇಲೆ ನೇರ ಅಥವಾ ಪರೋಕ್ಷ ನಿಯಂತ್ರಣವನ್ನು ಹೊಂದಿದೆ. ಸರಕಾರ ಹಲವಾರು ಶಾಲೆಗಳನ್ನು ಅವರಿಗೆ ಹಸ್ತಾಂತರಿಸಿದೆ. ಅದು ಯಾರ ಆಸ್ತಿ, ಖಾಸಗಿ ಸಂಸ್ಥೆಗಳಿಗೆ ಶಾಲೆಗಳ ನಿಯಂತ್ರಣವನ್ನು ನೀಡಿದರೆ, ಮೀಸಲಾತಿ ಏನಾಗುತ್ತದೆ, ಇಂತಹ ಶಾಲೆಗಳಲ್ಲಿ ಬಡವರಿಗೆ ಸೀಟು ಕೊಡುತ್ತಾರೆಯೇ, ಮೋದಿಯವರು ಬಡವರ ಆಶಾಭಾವನೆಗಳನ್ನು ನಾಶಮಾಡಿ ಈ ದೇಶವನ್ನು ಶ್ರೀಮಂತರ ಕೈಗೆ ಕೊಡುತ್ತಿದ್ದಾರೆ. ಇಲ್ಲಿಯವರೆಗೆ, ಅವರು ಎಷ್ಟು ಖರ್ಚು ಮಾಡಿದ್ದಾರೆ ಎಂಬುದಕ್ಕೆ ಯಾವುದೇ ಲೆಕ್ಕವನ್ನು ತೋರಿಸಿಲ್ಲ, ಯಾರು ಎಷ್ಟು ಕೊಡುಗೆ ನೀಡಿದ್ದಾರೆ ಎಂಬುದು ಯಾರಿಗೂ ತಿಳಿದಿಲ್ಲ. ಎಲೆಕ್ಟೋರಲ್ ಬಾಂಡ್‌ಗಳಂತೆ ಯಾವುದೇ ಮಾಹಿತಿಗಳಿಲ್ಲದಂತಾಗಿದೆ ಎಂದು ತಿಳಿಸಿದ್ದಾರೆ.

ಸುಪ್ರೀಂ ಕೋರ್ಟ್‌ನ ಮಾಜಿ ನ್ಯಾಯಾಧೀಶ ಜಸ್ಟಿಸ್ ಮದನ್ ಲೋಕೂರ್ ಅವರು ಮಾತನಾಡಿ, ಪಾರದರ್ಶಕತೆ ಇರಬೇಕು. ಖಾಸಗಿ ಟ್ರಸ್ಟ್‌ಗಳೊಂದಿಗೆ ವ್ಯವಹರಿಸುವ ಸಕ್ಷಮ ಪ್ರಾಧಿಕಾರವು ಇದನ್ನು ಈ ಕೆಲಸವನ್ನು ಮಾಡಬೇಕು ಎಂದು ಹೇಳಿದ್ದಾರೆ.

ರಾಜ್ಯಸಭಾ ಸಂಸದ ಮತ್ತು ಮಾಜಿ ಕೇಂದ್ರ ಸಚಿವ ಕಪಿಲ್ ಸಿಬಲ್ ಅವರೂ ಕೂಡ ಪಿಎಂ ಕೇರ್ಸ್ ಫಂಡ್ ಕುರಿತು ಟೀಕೆ ಮಾಡಿದ್ದಾರೆ.

ಇದು ಸಾರ್ವಜನಿಕ ಹಣ, ಸಾರ್ವಜನಿಕ ವೆಚ್ಚಕ್ಕಾಗಿ, ಮತ್ತು ಸಾರ್ವಜನಿಕ ಪರಿಶೀಲನೆಗೆ ಒಳಪಟ್ಟಿರಬೇಕು. ಆದರೆ, ಎಲೆಕ್ಟೋರಲ್ ಬಾಂಡ್‌ಗಳಂತೆ ಅದನ್ನು ಮುಚ್ಚಿಡಲಾಗಿದೆ. ದಾನಿಗಳ ಹೆಸರನ್ನು ಸಾರ್ವಜನಿಕಗೊಳಿಸಿದರೆ ಏನು ಬಹಿರಂಗಗೊಳ್ಳುತ್ತದೆ ಎಂಬುದು ನನ್ನಲ್ಲಿ ಮೂಡಿರುವ ಪ್ರಶ್ನೆ ಎಂದು ಹೇಳಿದ್ದಾರೆ.

ಇದು ಪ್ರಧಾನಿಮಂತ್ರಿಗಳ ಅತ್ಯಂತ ಭ್ರಷ್ಟ ಚಟುವಟಿಕೆಯಾಗಿದೆ. ಖಾತೆಯನ್ನು ರಚಿಸುವ ಮತ್ತು ನಿರ್ವಹಿಸುವ ವಿಧಾನವು ಭ್ರಷ್ಟಾಚಾರದಿಂದ ಕೂಡಿದೆ ಎಂಬುದನ್ನು ಇದು ತೋರಿಸುತ್ತದೆ ಎಂದು ಸಂವಿಧಾನದ ನಡವಳಿಕೆ ಗುಂಪಿನ ಭಾಗವಾಗಿರುವ ಮಾಜಿ ಹಿರಿಯ ಐಎಎಸ್ ಅಧಿಕಾರಿ ಎಂ.ಜಿ.ದೇವಸಹಾಯಂ ಅವರು ಹೇಳಿದ್ದಾರೆ.

ಅರವಿಂದ್ ಕೇಜ್ರಿವಾಲ್‌ಗೆ ಮತ್ತೊಂದು ಸಂಕಷ್ಟ; ಎನ್‌ಐಎ ತನಿಖೆಗೆ ಲೆಫ್ಟಿನೆಂಟ್ ಗವರ್ನರ್ ಆದೇಶ

ನವದೆಹಲಿ: ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧನಕ್ಕೊಳಗಾಗಿರುವ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರಿಗೆ ಮತ್ತೊಂದು ಸಂಕಷ್ಟ ಎದುರಾಗಿದೆ. ನಿಷೇಧಿತ ಭಯೋತ್ಪಾದಕ ಸಂಘಟನೆ 'ಸಿಖ್ಸ್ ಫಾರ್ ಜಸ್ಟಿಸ್'ನಿಂದ ಆಮ್ ಆದ್ಮಿ ಪಕ್ಷ ರಾಜಕೀಯ ಫಂಡ್ ಪಡೆದಿದೆ ಎಂದು ಆರೋಪಿಸಿ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ವಿರುದ್ಧ ದೆಹಲಿ ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ NIA (ರಾಷ್ಟ್ರೀಯ ತನಿಖಾ ಸಂಸ್ಥೆ) ತನಿಖೆಗೆ ಶಿಫಾರಸು ಮಾಡಿದ್ದಾರೆ.

ದೇವೇಂದ್ರ ಪಾಲ್ ಭುಲ್ಲರ್ ಬಿಡುಗಡೆಗೆ ಅನುಕೂಲವಾಗುವಂತೆ ಮತ್ತು ಖಲಿಸ್ತಾನಿ ಪರ ಭಾವನೆಗಳನ್ನು ಉತ್ತೇಜಿಸಲು ಭಯೋತ್ಪಾದಕ ಸಂಘಟನೆಯಿಂದ ಈ ಹಣವನ್ನು ಒದಗಿಸಲಾಗಿದೆ ಎಂದು ವರದಿ ಹೇಳಿದೆ. ಇದರ ನಡುವೆ, ಜಾರಿ ನಿರ್ದೇಶನಾಲಯ (ಇಡಿ) ತನ್ನ ಬಂಧನವನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಮತ್ತಷ್ಟು ವಿಸ್ತರಿಸಿದರೆ, ನಡೆಯುತ್ತಿರುವ ಲೋಕಸಭೆ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಮೇ 7ರಂದು ಸಿಎಂ ಅರವಿಂದ್ ಕೇಜ್ರಿವಾಲ್‌ಗೆ ಮಧ್ಯಂತರ ಜಾಮೀನು ನೀಡುವ ಬಗ್ಗೆ ಯೋಚಿಸಬಹುದು ಎಂದು ಸುಪ್ರೀಂ ಕೋರ್ಟ್ ಮೇ 4ರಂದು ಹೇಳಿತ್ತು.

ದೆಹಲಿ ಅಬಕಾರಿ ನೀತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾರ್ಚ್ 21ರಂದು ಅರವಿಂದ್ ಕೇಜ್ರಿವಾಲ್ ಅವರನ್ನು ಇಡಿ ಬಂಧಿಸಿತ್ತು ಇದಾದ ನಂತರ ಕೇಜ್ರಿವಾಲ್ ಏಪ್ರಿಲ್ 1ರಿಂದ ತಿಹಾರ್ ಜೈಲಿನಲ್ಲಿದ್ದಾರೆ ಮೇ 7ರವರೆಗೆ ಅವರಿಗೆ ನ್ಯಾಯಾಂಗ ಬಂಧನ ವಿಧಿಸಲಾಗಿದೆ.

NEET ಪರೀಕ್ಷೆ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿಲ್ಲ: NTA ಸ್ಪಷ್ಟನೆ

ನವದೆಹಲಿ: ಭಾನುವಾರ ನಡೆದ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆ (ನೀಟ್-2024) ಪ್ರಶ್ನೆಪತ್ರಿಕೆ ಸೋರಿಕೆಯಾಗಿಲ್ಲ ಎಂದು ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ (NTA) ಸ್ಪಷ್ಟಪಡಿಸಿದೆ.

ನೀಟ್ ಪರೀಕ್ಷೆ ಪ್ರಶ್ನೆಪತ್ರಿಕೆ ಸೋರಿಕೆಯಾಗಿದೆ ಎಂದು ವದಂತಿಗಳು ಎದ್ದಿದ್ದವು. ಅನೇಕ ಜಾಲತಾಣಗಳಲ್ಲಿ ಪ್ರಶ್ನೆ ಪತ್ರಿಕೆ ತುಣುಕುಗಳು ಹರಿದಾಡಿದ್ದವು.

ಈ ವಿಷಯವಾಗಿ ಪ್ರತಿಕ್ರಿಯಿಸಿರುವ ಎನ್‌ಟಿಎ, ಜಾಲತಾಣಗಳಲ್ಲಿ ಹರಿದಾಡಿರುವ ಪ್ರಶ್ನೆಪತ್ರಿಕೆಗೂ ನೀಟ್ 2024ರ ಪ್ರಶ್ನೆಪತ್ರಿಕೆಗೂ ಯಾವುದೇ ಸಂಬಂಧವಿಲ್ಲ. ಯಾವುದೇ ರೀತಿಯಲ್ಲಿ ಪ್ರಶ್ನೆಪತ್ರಿಕೆ ಸೋರಿಕೆಯಾಗಿಲ್ಲ. ಪರೀಕ್ಷೆ ಸುಗಮವಾಗಿ ನಡೆದಿದೆ. ಆರೋಪಗಳಿಗೆ ಯಾವುದೇ ದಾಖಲೆಗಳಿಲ್ಲ. ಆಧಾರರಹಿತ ಆರೋಪಗಳನ್ನು ಮಾಡಬಾರದು ಎಂದು ತಿಳಿಸಿದೆ.

ಪರೀಕ್ಷಾ ಕೇಂದ್ರದೊಳಗೆ ಪ್ರವೇಶಿಸಲು ಯಾರಿಗೂ ಅವಕಾಶ ಇಲ್ಲ. ಸಿಸಿಟಿವಿ ಕಣ್ಗಾವಲಿನಲ್ಲಿ ಅತ್ಯಂತ ಪಾರದರ್ಶಕವಾಗಿ ಪರೀಕ್ಷೆ ನಡೆದಿದೆ ಎಂದು ಎನ್‌ಟಿಎ ಹಿರಿಯ ನಿರ್ದೇಶಕಿ ಸಾಧನಾ ಪರಿಚಾರ್ ಸುದ್ದಿಸಂಸ್ಥೆ ಪಿಟಿಐಗೆ ತಿಳಿಸಿದ್ದಾರೆ.

ದೇಶದ 571 ನಗರಗಳ ಹಾಗೂ ಹೊರದೇಶದ 14 ನಗರಗಳ ಒಟ್ಟು 4,750 ಪರೀಕ್ಷಾ ಕೇಂದ್ರಗಳಲ್ಲಿ ನೀಟ್ ಪರೀಕ್ಷೆ ನಡೆದಿದೆ. ದೇಶದ ಸರ್ಕಾರಿ, ಖಾಸಗಿ ಹಾಗೂ ಹೊರದೇಶದ ಕೆಲವು ಕಾಲೇಜುಗಳಲ್ಲಿ ವೈದ್ಯಕೀಯ ಪದವಿ ಕೋರ್ಸ್‌ಗಾಗಿ ನ್ಯಾಷನಲ್ ಟೆಸ್ಟಿಂಗ್ ಏಜನ್ಸಿ ನೀಟ್ ಪರೀಕ್ಷೆ ನಡೆಸುತ್ತದೆ.

ಕಿವುಡ ಮಕ್ಕಳ ಶಾಲೆ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 6(ಎಂಕೆ)- ಮೈಸೂರಿನ ತಿಲಕ್ ನಗರದ ಕಿವುಡ ಮಕ್ಕಳ ಸರ್ಕಾರಿ ಪಾಠಶಾಲೆ ಸಂಸ್ಥೆಯಲ್ಲಿ ಕಿವುಡ ಬಾಲಕರಿಗೆ ಉಚಿತ ವಸತಿ ಹಾಗೂ ಬಾಲಕಿಯರಿಗೆ ಬಾಹ್ಯಾ ವಿದ್ಯಾರ್ಥಿನಿಯಾಗಿ ಉಚಿತವಾಗಿ 1ನೇ ತರಗತಿಯಿಂದ 10ನೇ ತರಗತಿವರೆಗಿನ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

2024-25ನೇ ಶೈಕ್ಷಣಿಕ ಸಾಲಿಗೆ ಅರ್ಜಿ ಆಹ್ವಾನಿಸಿದ್ದು, 1ನೇ ತರಗತಿಗೆ 06 ವರ್ಷದಿಂದ 09 ವರ್ಷದೊಳಗಿನ ಕಿವುಡ ಬಾಲಕ ಮತ್ತು ಬಾಲಕಿಯರು, ವಿಕಲಚೇತನ ಕಾರಣದಿಂದಾಗಿ ಇದುವರೆಗೂ ಶಾಲೆಗೆ ದಾಖಲಾಗದವರನ್ನು ಹಾಗೂ ಈಗಾಗಲೇ ಇತರೆ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಣ ಪಡೆಯುತ್ತಿರುವ ಕಿವುಡ ಗಂಡು ಮಕ್ಕಳನ್ನು ಸಹ ದಾಖಲು ಮಾಡಿಕೊಳ್ಳಲಾಗುತ್ತದೆ.

ಈ ಶಾಲೆಗೆ ಶ್ರವಣ ದೋಷವುಳ್ಳ ಮಕ್ಕಳನ್ನು ಸೇರಿಸಲು ಇಚ್ಛಿಸುವ ತಂದೆ-ತಾಯಿ ಅಥವಾ ಪೋಷಕರು ಪ್ರವೇಶದ ಅರ್ಜಿಯನ್ನು ಶಾಲಾ ಕಚೇರಿಯಲ್ಲಿ ಉಚಿತವಾಗಿ ಪಡೆದು ಅಗತ್ಯ ದಾಖಲಾತಿಗಳನ್ನು ಸಲ್ಲಿಸಿ ಶಾಲೆಗೆ ದಾಖಲಾಗಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ತಿಲಕ್ ನಗರದ ಕಿವುಡ ಮಕ್ಕಳ ಸರ್ಕಾರಿ ಪಾಠಶಾಲೆಯ ಅಧೀಕ್ಷಕರ ಕಚೇರಿಯ ದೂ.ಸಂ.0821-2494104, ಮೊ.ನಂ. 9449010499 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಮೈಸೂರಲ್ಲಿ ಆಪತ್ಕಾಲದಲ್ಲಿ ಆಗುವ 'ಅಭಯ'ವೇ ಭದ್ರವಿಲ್ಲ

●ಇರುವುದೇ ಮೂರು ತಂಡ, 24 ಮಂದಿ ಮಾತ್ರ ●ಎಂತಹ ದುರ್ಗತಿ ನಮ್ಮದು; ಪ್ರಕೃತಿ ವಿಕೋಪಕ್ಕೆ ಮೈಸೂರು ಮಹಾನಗರ ಪಾಲಿಕೆ ಮಾಡಿಕೊಂಡಿರುವ ಘನ ವ್ಯವಸ್ಥೆ ●ಒಂದೇ ದಿನ ಸುರಿದ ಭಾರಿ ಗಾಳಿ-ಮಳೆಯಿಂದ ಆದ ಅವಾಂತರವೇ ಇನ್ನು ನಿವಾರಣೆ ಆಗಿಲ್ಲ ●ಮತ್ತೆ ಮಳೆ ಬಂದರೆ ಗತಿಯೇನು?



ಲ್ಯಾಡರ್ ಸಹಾಯದಿಂದ ಮರವೇರಿ ಕೊಂಬೆ ಕಟ್ ಮಾಡುತ್ತಿರುವ ಅಭಯ ಸಿಬ್ಬಂದಿ



ನಗರಪಾಲಿಕೆ ಅಭಯ ಸಿಬ್ಬಂದಿಯೊಬ್ಬರು ಮುರಿದು ಬಿದ್ದ ಮರದ ರೆಂಬೆಯನ್ನು ಏಕಾಂಗಿಯಾಗಿ ಕಟ್ ಮಾಡುತ್ತಿರುವುದು



ಅಭಯ ಸಿಬ್ಬಂದಿಯೊಬ್ಬರು ಕ್ರೇನ್ ಮೇಲೆ ಕುಳಿತು ಮುರಿದ ಮರದ ಕೊಂಬೆ ತೆರವು ಮಾಡುತ್ತಿರುವುದು

ಮೋಹನ್ ಕಾಯಕ

ಮೈಸೂರು, ಮೇ 6- ತುರ್ತು ಸಂದರ್ಭದಲ್ಲಿ ನೆರವಿನ ಹಸ್ತ ನೀಡಬೇಕಾದ ಮೈಸೂರು ನಗರಪಾಲಿಕೆಯ 'ಅಭಯ' ಕ್ಷಿಪ್ರ ಕಾರ್ಯ ಪಡೆ ಸಾಮರ್ಥ್ಯದಲ್ಲಿ ಕುಂದುಂಟಾಗಿದ್ದು, ಶಕ್ತಿ ತುಂಬುವ ಅನಿವಾರ್ಯತೆ ಇದೆ...!

ಹೌದು! ನಗರ ವ್ಯಾಪ್ತಿ ದಿನದ ಮೂರು ಪಾಳಿಯಲ್ಲಿ ಕೆಲಸ ಮಾಡುವ ಅಭಯ ತಂಡದ ನೆರವು ನಿಧಾನವಾಗುತ್ತಿದೆ. ಕಳೆದ ಮೂರು ದಿನದ ಹಿಂದೆ ಸುರಿದ ಮಳೆಗೆ ತತ್ತರಿಸಿರುವ ಮೈಸೂರನ್ನು ಇನ್ನೂ ಸಹಜ ಸ್ಥಿತಿಗೆ ತರಲಾಗದ ನಗರಪಾಲಿಕೆಯ ಅಭಯ ತಂಡದ ಸಾಮರ್ಥ್ಯವೆಷ್ಟಿದೆ ಎಂಬುದರ ಸ್ಪಷ್ಟತೆ ಕಾಣುತ್ತಿದೆ.

ಬೆಳಗ್ಗೆ 6 ರಿಂದ ಮಧ್ಯಾಹ್ನ 2 ಗಂಟೆವರೆಗೆ, ಮಧ್ಯಾಹ್ನ 2 ರಿಂದ ರಾತ್ರಿ 10 ಗಂಟೆವರೆಗೆ ಹಾಗೂ ರಾತ್ರಿ 10 ರಿಂದ ಮುಂಜಾನೆ 6 ಗಂಟೆವರೆಗೆ ಮೂರು ಪಾಳಿಯಲ್ಲಿ ಕಾರ್ಯನಿರ್ವಹಿಸುವ ಅಭಯ ತಂಡಕ್ಕೆ ಕೇವಲ ಮೂರು ವಾಹನಗಳು, ಅಗತ್ಯ ಕೆಲ ಸಲಕರಣೆಗಳನ್ನು ನೀಡಲಾಗಿದೆ. ಒಂದು ಪಾಳಿಯಲ್ಲಿ ಎರಡು ತಂಡ(ಅಭಯ-1, 2 ಮತ್ತು 3)ಗಳು ಕಾರ್ಯ ನಿರ್ವಹಿಸಲಿದ್ದು, ಒಂದು ತಂಡದಲ್ಲಿ ಡ್ರೈವರ್ ಸೇರಿ ನಾಲ್ವರು ಸಿಬ್ಬಂದಿ ಇರುತ್ತಾರೆ. ಒಟ್ಟಾರೆ ಅಭಯ ತಂಡದಲ್ಲಿ 24 ಮಂದಿ ಕಾರ್ಯ ನಿರ್ವಹಿಸುತ್ತಿದ್ದು, ಏಕಕಾಲಕ್ಕೆ ಹತ್ತಾರು ಕಡೆಗಳಲ್ಲಿ ತುರ್ತು ಕರೆ ಬಂದರೆ ನಿರ್ವಹಣೆ ಮಾಡಲಾಗದ ಪರಿಸ್ಥಿಯಲ್ಲಿ ಅಭಯ ತಂಡವಿದೆ.

ಮೂರು ದಿನದ ಹಿಂದೆ ಸುರಿದ ಭಾರೀ ಮಳೆಗೆ ನಗರದೆಲ್ಲೆಡೆ ಹತ್ತಾರು ಮರಗಳು ಬುಡ ಸಮೇತ ಉರುಳಿ ಬಿದ್ದರೆ, ನೂರಾರು ಮರಗಳ ರಂಬೆ-ಕೊಂಬೆಗಳು ಮುರಿದು ರಸ್ತೆಗೆ ಬಿದ್ದಿವೆ. ಆದರೆ ಮುರಿದು ಬಿದ್ದಿರುವ ಮರಗಳು, ಮರಗಳ ರಂಬೆ-ಕೊಂಬೆಗಳನ್ನು ತೆರವುಗೊಳಿಸುವ ಕಾರ್ಯ ಮಾತ್ರ ಆಮೆ ಗತಿಯಲ್ಲಿ ಸಾಗುತ್ತಿದ್ದು, ಒಂದು ದಿನದ ಮಳೆಗೆ ಈ ರೀತಿಯಾದರೆ ಪ್ರತಿನಿತ್ಯ ಮಳೆ ಸುರಿದರೆ ಇನ್ನೇನು ಗತಿ. ತ್ವರಿತವಾಗಿ ನೂರು ಜನರಿಂದ ಮಾಡಬೇಕಾದ ಕೆಲಸ ಮೂವರಿಂದ ಸಾಧ್ಯವೇ. ಮೈಸೂರಿನ ಸ್ವರೂಪವೇ ಬದಲಾಗಬಹುದು ಎಂದು ಪ್ರಜ್ಞಾವಂತ ನಾಗರಿಕರು ಆತಂಕ ವ್ಯಕ್ತಪಡಿಸಿದ್ದಾರೆ.

ಅಧಿಕಾರಿಗಳು-ಜನಪ್ರತಿನಿಧಿಗಳ ನಡುವೆ ಸಿಲುಕಿ ನರಳಾಟ...!

ಪಾಲಿಕೆ ಅಧಿಕಾರಿಗಳು ರಸ್ತೆ ಬದಿಯಲ್ಲಿ ಜನಪ್ರತಿನಿಧಿಗಳ ಹುಟ್ಟುಹಬ್ಬ, ಸಭೆ-ಸಮಾರಂಭಗಳ ಫ್ಲೆಕ್ಸ್, ಕಟೌಟ್ ಅಳವಡಿಕೆಗೆ ಅವಕಾಶವಿಲ್ಲ. ಅಳವಡಿಸಿದರೆ ಕೂಡಲೇ ತೆರವುಗೊಳಿಸಿ ಎನ್ನುತ್ತಾರೆ. ತೆರವಿಗೆ ಮುಂದಾದರೆ ಜನಪ್ರತಿನಿಧಿಗಳದ್ದನ್ನು ತೆಗೆಯುವಂತಿಲ್ಲ. ತೆಗೆದರೆ ನಮಗೆ ಕಷ್ಟ. ನಿನ್ನ ಕೆಲಸವೂ ಇಲ್ಲದಂತಾಗುತ್ತದೆ ಎಂದು ಗುತ್ತಿಗೆದಾರರು ಹೇಳುತ್ತಾರೆ. ಇಬ್ಬರ ನಡುವೆ ಸಿಲುಕಿ ನರಳಾಡುವ ದುಸ್ಥಿತಿ ನಮ್ಮದಾಗಿದೆ. ವಿದ್ಯುತ್ ಕಂಬಗಳಿಗೆ ಕಟೌಟ್ ಕಟ್ಟಿರುತ್ತಾರೆ. ಚೆಸ್ಕಾಂ ಸಿಬ್ಬಂದಿಯಂತೆ ರಾತ್ರಿ ವೇಳೆ ವಿದ್ಯುತ್ ಕಂಬವನ್ನೇರಿ ಕಟೌಟ್ ತೆಗೆಯಬೇಕು. ಆಯತಪ್ಪಿ ಬಿದ್ದರೂ ಯಾವುದೇ ಭದ್ರತೆ ಇಲ್ಲ. ನಮ್ಮ ಕಷ್ಟವನ್ನು ಯಾರೂ ಕೇಳುವುದೂ ಇಲ್ಲ. ತುರ್ತು ಸಂದರ್ಭದಲ್ಲಿ ಕಷ್ಟಕ್ಕೆ ಸ್ಪಂದಿಸಿದ ಖುಷಿ ಒಂದೆಡೆಯಾದರೆ ಸ್ವ-ಹಿತಾಸಕ್ತಿಗಳ ನಡುವೆ ಸಿಲುಕಿ ನೋವು ಅನುಭವಿಸಬೇಕು. ಪ್ರಶ್ನೆ ಮಾಡಿದರೆ, ಕೆಲಸ ಇಲ್ಲ. ಏನೋ ಹೇಳಿ ಕೆಲಸದಿಂದ ಕಿತ್ತಾಕುತ್ತಾರೆ ಎಂದು ಪಾಲಿಕೆ ಅಭಯ ತಂಡದ ಸಿಬ್ಬಂದಿಯೊಬ್ಬರು ತಮ್ಮ ಸ್ಥಿತಿ-ಗತಿಯನ್ನು ತಿಳಿಸಿದರು.

ಕಮ್ಮಿ ಸಂಬಳ, ವಿಪರೀತ ಕೆಲಸ: ತಿಂಗಳಿಗೆ ನೀಡುವ ಕೇವಲ 8 ಸಾವಿರಕ್ಕೆ ವಿಪರೀತ ಕೆಲಸ. ಮಳೆಗಾಲದಲ್ಲಂತೂ ಹೇಳಲಾಗದು. ಮರ ನಮ್ಮ ಮೇಲೆ ಬಿದ್ದು ಸತ್ತರೂ ಜೀವ ಭದ್ರತೆ ಇಲ್ಲ. ಇಎಸ್‌ಐ-ಪಿಎಫ್ ಬಿಟ್ಟರೆ, ಕೆಲಸವೂ ಪರ್ಮನೆಂಟ್ ಅಲ್ಲ. ಒಮ್ಮೊಮ್ಮೆ ಯಾರಿಗೆ ಬೇಕು ಈ ಕೆಲಸ ಎನ್ನಿಸುತ್ತದೆ. ನಾಲ್ಕು ಮಂದಿ ಕೆಲಸವನ್ನು ಒಬ್ಬ ಮಾಡು ಎಂದರೆ ಸಾಧ್ಯವಾಗುತ್ತಾ... ಆದ್ರೂ ಮಾಡುತ್ತೇವೆ. ದೂರುಗಳು ಬಂದ ಕೂಡಲೇ ಸ್ಪಂದಿಸುತ್ತೇವೆ ಎಂದು ತಮ್ಮ ಅಳಲು ತೋಡಿಕೊಂಡರು.

ಮೂರು ವಿಧಾನಸಭಾ ಕ್ಷೇತ್ರಗಳು, 65 ವಾರ್ಡ್‌ಗಳು, ಸುಮಾರು 14 ಲಕ್ಷಕ್ಕೂ ಹೆಚ್ಚಿನ ಜನಸಂಖ್ಯೆಯುಳ್ಳ ಮೈಸೂರಿನಲ್ಲಿ ತುರ್ತು ಸಂದರ್ಭದಲ್ಲಿ ಹಾಗೂ ಇನ್ನಿತರೆ ಅಗತ್ಯ ಸನ್ನಿವೇಶಗಳಲ್ಲಿ ಕಾರ್ಯನಿರ್ವಹಿಸುವ ಅಭಯ ತಂಡದಲ್ಲಿ ಮಾನವ ಸಂಪನ್ಮೂಲ ಕೊರತೆ ಎದ್ದುಕಾಣುತ್ತಿದೆ. ಹಾಗೆಯೇ ಕೇವಲ ಮೂರು ವಾಹನಗಳಿದ್ದು, ಒಂದೇ ಸಮಯದಲ್ಲಿ ಹತ್ತಾರು ಕಡೆಗಳಲ್ಲಿ ತೊಂದರೆಯಾದರೆ ಎಲ್ಲಿಗೆ ಅಂತಾ ಹೋಗಿ ನೆರವು ನೀಡಲು ಸಾಧ್ಯ. ಒಂಭತ್ತು ಜನರ ಕೆಲಸವನ್ನು ಮೂವರು ಮಾಡಿ ಎಂಬಂತಹ ಅಭಯ ತಂಡದ್ದಾಗಿದೆ. ತುರ್ತು ಸಂದರ್ಭದಲ್ಲಿ ಪಾಲಿಕೆಗೆ ಕರೆ ಮಾಡಿದರೆ, ಎಷ್ಟೋ ಹೊತ್ತಿನ ಬಳಿಕ ಅಭಯ ತಂಡದವರ ಆಗಮನವಾಗುತ್ತದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ನಗರ ಪೊಲೀಸರ ಆಯುಕ್ತರ ಕಚೇರಿ ರಸ್ತೆ, ಮಲೆ ಮಹದೇಶ್ವರ ರಸ್ತೆ ಬದಿ ಸೇರಿದಂತೆ ನಗರದೆಲ್ಲೆಡೆ ಮುರಿದು ಬಿದ್ದಿರುವ ಮರಗಳ ರಂಬೆ-ಕೊಂಬೆಗಳು ಬಿದ್ದಲ್ಲೇ ಬಿದ್ದಿವೆ. ರಸ್ತೆಯಲ್ಲಿ ಬಿದ್ದಿರುವ ಮರಗಳ ರಂಬೆ-ಕೊಂಬೆಗಳಿಂದ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿದೆ. ನಗರದ ಸೌಂದರ್ಯವೇ ಹಾಳಾದಂತಿದೆ. ಚೆಸ್ಕಾಂನವರು ಮುರಿದು ಬಿದ್ದಿದ್ದ ವಿದ್ಯುತ್ ಕಂಬಗಳನ್ನು ತೆರವುಗಳಿಸಿ, ಹೊಸದಾಗಿ ವಿದ್ಯುತ್ ಕಂಬಗಳನ್ನು ತ್ವರಿತವಾಗಿ ಅಳವಡಿಸಿದ್ದಾರೆ. ಆದರೆ ಪಾಲಿಕೆ ಮಾತ್ರ ಇನ್ನೂ ತೆರವು ಕಾರ್ಯ ಮಾಡುತ್ತಲೇ ಇದೆ ಎಂದು ವಿಷಾದಿಸಿದ್ದಾರೆ.

ಗುತ್ತಿಗೆ ಪದ್ಧತಿ: ಪಾಲಿಕೆಯ ಅಭಯ ತಂಡಗಳು ವಾರ್ಷಿಕ ಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಪಾಲಿಕೆಯಿಂದ ತಿಂಗಳಿಗೆ 3,96,750 ರೂ. ಬಿಲ್(ವಾಹನ, ಸಲಕರಣೆ, ಸಿಬ್ಬಂದಿ ಸೇರಿ ಒಟ್ಟಾರೆಯಾಗಿ) ಆಗಲಿದ್ದು, ಸಿಬ್ಬಂದಿಗಳಿಗೆ ಸಂಬಳವನ್ನು ಗುತ್ತಿಗೆದಾರರು ನೀಡಲಿದ್ದಾರೆ. ಆದರೆ ಆಯಾ ವಾರ್ಡ್‌ನಲ್ಲಿ ಕಾರ್ಯ ನಿರ್ವಹಿಸುವ ಪಾಲಿಕೆ ಅಧಿಕಾರಿ, ಸಿಬ್ಬಂದಿಗಳ ಸೂಚನೆಗಳಿಗೆ ಅನುಗುಣವಾಗಿ ಅಭಯ ತಂಡಗಳು ಕಾರ್ಯ ನಿರ್ವಹಿಸಲಿವೆ ಮಳೆಗಾಲದಲ್ಲಿ ಅಭಯ ತಂಡದ ಕಾರ್ಯ ಚಟುವಟಿಕೆ ಹೆಚ್ಚಾಗಿರಲಿದೆ ಎಂದು ಪಾಲಿಕೆ ಅಧಿಕಾರಿಯೊಬ್ಬರು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ತೋಟಗಾರಿಕೆ ವಿಭಾಗದ ತಂಡ: ಮುಂಗಾರು ಮಳೆ ಆರಂಭಕ್ಕೂ ಮುನ್ನವೇ ಅಂದರೆ ಫೆಬ್ರವರಿಯಿಂದ ಜುಲೈ ತಿಂಗಳವರೆಗೆ ತೋಟಗಾರಿಕೆ ವಿಭಾಗದ ನೇಮಕ ಮಾಡಿಕೊಳ್ಳುವ ಎರಡು ತಂಡ ಅಭಯ ತಂಡದೊಂದಿಗೆ ಸೇರಿ ಮುರಿದು ಬಿದ್ದಿರುವ ಮರಗಳ ತೆರವು ಕಾರ್ಯಾಚರಣೆಯಲ್ಲಿ ತೊಡಗಿದೆ. ಆದರೆ ಈ ಬಾರಿ 30-32 ದೊಡ್ಡ ದೊಡ್ಡ ಮರಗಳು ಬುಡ ಸಮೇತ ನೆಲಕ್ಕುರುಳಿದರೆ, 150ಕ್ಕೂ ಹೆಚ್ಚು ಮರಗಳ ರಂಬೆ-ಕೊಂಬೆಗಳು ಮುರಿದು ಬಿದ್ದಿವೆ. ಸಾಧ್ಯವಾದಷ್ಟು ಚುರುಕಾಗಿ ತೆರವು ಕಾರ್ಯ ನಡೆಯುತ್ತಿದೆ. ಆದರೂ ಹೆಚ್ಚಿನ ಸಂಖ್ಯೆಯಲ್ಲಿ ಮರಗಳು ಬಿದ್ದಿರುವುದರಿಂದ ಸಂಪೂರ್ಣವಾಗಿ ತೆರವುಗೊಳಿಸಲು ಇನ್ನೂ ಒಂದೆರಡು ದಿನಗಳಾಗಬಹುದು ಎಂದು ನಗರ ಪಾಲಿಕೆ ತೋಟಗಾರಿಕೆ ವಿಭಾಗದ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಪಿ.ಕೆ.ಮೋಹನ್ ಕುಮಾರ್ ಮಾಹಿತಿ ನೀಡಿದರು.

ನಾಲ್ಕು ಹೆಚ್ಚುವರಿ ತಂಡ: ಈ ಮೊದಲು ಫುಟ್‌ಪಾಟ್ ತೆರವು, ಬ್ಯಾನರ್ ಮತ್ತು ಕಟೌಟ್ ತೆರವು, ಮನೆಗಳಿಗೆ ನೀರು ನುಗ್ಗಿದರೆ ಹಾಗೂ ಇನ್ನಿತರೆ ಕಾರ್ಯಗಳಿಗೆ ಅಭಯ ತಂಡ ಬಳಕೆ ಮಾಡಲಾಗುತ್ತಿತ್ತು ಕಳೆದ 2 ವರ್ಷದಿಂದ ಮರಗಳ ತೆರವಿಗೂ ಅಭಯ ತಂಡಗಳನ್ನು ಬಳಸಿಕೊಳ್ಳಲಾಗುತ್ತಿದೆ. ಜೊತೆಗೆ ತೋಟಗಾರಿಕೆ ವಿಭಾಗದಿಂದಲೂ ಮುಂಗಾರು ಮಳೆ ಅವಧಿಯಲ್ಲಿ ಎರಡು ತಂಡಗಳನ್ನು ಸೇರಿಸಿಕೊಳ್ಳುವ ಮೂಲಕ ದೂರುಗಳಿಗೆ ಸ್ಪಂದಿಸುವ ಕೆಲಸವನ್ನು ಮಾಡಲಾಗುತ್ತಿದೆ. ನಾಳೆ(ಮೇ 7)ಯಿಂದ ಹೊಸದಾಗಿ ನಾಲ್ಕು ಹೆಚ್ಚುವರಿ ತಂಡಗಳನ್ನು ಸೇರ್ಪಡೆ ಮಾಡಿಕೊಂಡು ಉಳಿದಿರುವ ಮರಗಳನ್ನು ತ್ವರಿತವಾಗಿ ತೆರವುಗೊಳಿಸಲಾಗುವುದು ಎಂದರು.

ಶಾಸಕ ರವಿಶಂಕರ್ ಷಡ್ಯಂತ್ರದಿಂದ ರೇವಣ್ಣ ಅರೆಸ್ಟ್

ಹಾಸನ ಜೆಡಿಎಸ್ ಜಿಲ್ಲಾಧ್ಯಕ್ಷ ಲಿಂಗೇಶ್ ಆರೋಪ

ಹಾಸನ: ಕೆಆರ್ ನಗರದ ಕಾಂಗ್ರೆಸ್ ಶಾಸಕ ಡಿ. ರವಿಶಂಕರ್ ಅವರ ಚಿತಾವಣೆಯಿಂದ ಹೆಚ್‌ಡಿ ರೇವಣ್ಣ ಮೇಲೆ ಅಪಹರಣ ಪ್ರಕರಣ ದಾಖಲಾದ ಬಳಿಕ ಬಂಧನ ಮಾಡಲಾಗಿದೆ ಎಂದು ಜೆಡಿಎಸ್ ಜಿಲ್ಲಾಧ್ಯಕ್ಷ ಲಿಂಗೇಶ್ ಗಂಭೀರ ಆರೋಪ ಮಾಡಿದ್ದಾರೆ.

ಹಾಸನದಲ್ಲಿ ಇಂದು ಮಾಜಿ ಶಾಸಕರೂ ಆದ ಲಿಂಗೇಶ್ ಮತ್ತು ಶ್ರವಣಬೆಳಗೊಳ ಶಾಸಕ ಸಿ.ಎನ್.ಬಾಲಕೃಷ್ಣ, ರೇವಣ್ಣ ಬಂಧನ ವಿಚಾರಕ್ಕೆ ಸಂಬಂಧಿಸಿದಂತೆ ಸುದ್ದಿಗೋಷ್ಠಿ ನಡೆಸಿದರು.

ವಿಶೇಷ ತನಿಖಾ ತಂಡವನ್ನು ಸರ್ಕಾರ ರಚನೆ ಮಾಡಿದ ದಿನವೇ ಒಂದು ಪ್ರಕರಣ ದಾಖಲಾಗುತ್ತದೆ. ಈ ಪ್ರಕರಣದಲ್ಲಿ ಏನು ಇಲ್ಲ. ಸುಲಭವಾಗಿ ಜಾಮೀನು ಸಿಗುತ್ತದೆ ಎಂಬ ಕಾರಣಕ್ಕೆ ಮೇ 2 ರಂದು



ಲಿಂಗೇಶ್



ಡಿ. ರವಿಶಂಕರ್

ಕೆ.ಆರ್‌ನಗರ ಶಾಸಕರು ಷಡ್ಯಂತ್ರ ಮಾಡಿ ರೇವಣ್ಣ ಮೇಲೆ ಅಪಹರಣ ಕೇಸ್ ಕೊಟ್ಟಿದ್ದಾರೆ. ಈ ಪ್ರಕರಣದ ನಂತರ ಎಸ್‌ಐಟಿ ಬಂಧಿಸಿದೆ ಎಂದು ಲಿಂಗೇಶ್ ದೂರಿದರು. ಸಿ.ಎನ್. ಬಾಲಕೃಷ್ಣ ಮಾತನಾಡಿ, ಪ್ರಜ್ವಲ್ ರೇವಣ್ಣ ಮಾಜಿ ಕಾರು ಚಾಲಕ ಕಾರ್ತಿಕ್ ಹಿಂದೆ ಯಾರಿದ್ದಾರೆ. ಆತನ ಜೊತೆ ಟೇಬಲ್ ಸಭೆ ಮಾಡಿದವರು ಯಾರು, ರಾಜ್ಯ ಮಟ್ಟದಲ್ಲಿ ದೊಡ್ಡ ನಾಯಕರು ಚರ್ಚೆ ಮಾಡುತ್ತಿದ್ದಾರೆ. ಇದರ ಬಗ್ಗೆ ಸಮಗ್ರವಾಗಿ ತನಿಖೆ ನಡೆದು ಸತ್ಯಾಂಶ ಆದಷ್ಟು ಬೇಗ ಹೊರಬರಬೇಕು ಎಂದು ಆಗ್ರಹಿಸಿದರು.

ಪೆನ್‌ಡ್ರೈವ್ ವಿಚಾರವನ್ನು ರಾಜಕೀಯ ದುರುದ್ದೇಶಕ್ಕೆ ಬಳಕೆ ಮಾಡಿಕೊಂಡಿದ್ದಾರೆ. ರೇವಣ್ಣ ಅವರು ಎಲ್ಲಿಯೂ ಅಡಗಿ ಕುಳಿತ್ತಿಲ್ಲ. ಕೇಸ್ ದಾಖಲಾದಾಗಿನಿಂದ ಅವರು ಕ್ಷೇತ್ರದಲ್ಲಿ ಇದ್ದಾರೆ. ರೇವಣ್ಣ ಅವರನ್ನು ಬಂಧನ ಮಾಡುವ ಅವಶ್ಯಕತೆ ಇರಲಿಲ್ಲ. ಅವರು ಹಿರಿಯ ನಾಯಕರು, ಮಾಜಿ ಸಚಿವರಾಗಿರುವ ಕಾರಣ ವಿಚಾರಣೆಗೆ ಕರೆಯಬಹುದಿತ್ತು. ಅವರು ಎಲ್ಲಾ ರೀತಿಯ ತನಿಖೆಗೆ ಸಹಕಾರ ಮಾಡುತ್ತಿದ್ದು ರೇವಣ್ಣ ಅವರನ್ನು ಬಿಡುಗಡೆ ಮಾಡಬೇಕು ಎಂದು ಮನವಿ ಮಾಡಿದರು.

ಪಡಿತರ ಚೀಟಿಗೆ ಜೂನ್‌ನಿಂದ ಅರ್ಜಿ ಆಹ್ವಾನ

ಬೆಂಗಳೂರು: ಕಳೆದ ಒಂದೂವರೆ ವರ್ಷದಿಂದ ಸ್ಥಗಿತವಾಗಿದ್ದ ಎಪಿಎಲ್ ಕಾರ್ಡ್ ವಿತರಣೆಗೆ ಮರುಚಾಲನೆ ನೀಡಲು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ನಿರ್ಧರಿಸಿದೆ. ಜೂನ್ ತಿಂಗಳಲ್ಲಿ ಹೊಸ ಕಾರ್ಡ್‌ಗಳಿಗೆ ಅರ್ಜಿ ಆಹ್ವಾನಿಸಲು ಇಲಾಖೆ ತೀರ್ಮಾನಿಸಿದೆ ಎಂದು ಮೂಲಗಳಿಂದ ತಿಳಿದುಬಂದಿದೆ.

ಹೊಸ ಕಾರ್ಡ್‌ಗಾಗಿ ಆನ್‌ಲೈನ್‌ನಲ್ಲೇ ಅರ್ಜಿ ಸಲ್ಲಿಸುವುದು ಕಡ್ಡಾಯವಾಗಿದೆ. ಅರ್ಜಿ ಸಲ್ಲಿಕೆಯ ವೆಬ್ ಪೋರ್ಟಲ್ ಅನ್ನು ಸುಮಾರು ಒಂದೂವರೆ ವರ್ಷದಿಂದಲೂ ಸ್ಥಗಿತಗೊಳಿಸಲಾಗಿತ್ತು. ಲೋಕಸಭೆ ಚುನಾವಣೆ ಫಲಿತಾಂಶ ಪ್ರಕಟವಾದ ಬಳಿಕ ಜೂನ್ ಮೊದಲ ವಾರದಲ್ಲಿ ವೆಬ್‌ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಕೆಗೆ ಅನುವು ಮಾಡಿಕೊಡಲಾಗುವುದು ಎಂದು ಇಲಾಖೆಯ ಅಧಿಕಾರಿಯೊಬ್ಬರು ಹೇಳಿದ್ದಾರೆಂದು ವರದಿಗಳು ತಿಳಿಸಿವೆ.

ಕಳೆದ ವರ್ಷ ಮೇ ತಿಂಗಳಲ್ಲಿ ವಿಧಾನಸಭಾ ಚುನಾವಣೆ ನಿಗದಿಯಾಗಿತ್ತು. ಅದಕ್ಕೂ ಮೊದಲು ಚುನಾವಣಾ ತಯಾರಿಗಳನ್ನು ನಡೆಸಲಾಗುತ್ತಿತ್ತು. ಜೊತೆಗೆ ಆಗ ಅಧಿಕಾರದಲ್ಲಿದ್ದ ಬಿಜೆಪಿ ಸರ್ಕಾರದ ಅವಧಿಯೂ ಮುಗಿದಿತ್ತು. ಹೀಗಾಗಿ, ಸುಮಾರು ಒಂದೂವರೆ ವರ್ಷದಿಂದಲೂ ಎಪಿಎಲ್ ಕಾರ್ಡ್‌ಗೆ ಅರ್ಜಿಗಳನ್ನು ಸಲ್ಲಿಸಲು ಆನ್‌ಲೈನ್ ಪೋರ್ಟಲ್‌ನಲ್ಲಿ ಅವಕಾಶ ಕಲ್ಪಿಸಿರಲಿಲ್ಲ. ಹೊಸದಾಗಿ ರಚನೆಯಾದ ಕಾಂಗ್ರೆಸ್ ಸರ್ಕಾರವು ಗೃಹಲಕ್ಷ್ಮಿ, ಗೃಹಜ್ಯೋತಿ ಮತ್ತಿತರ ಯೋಜನೆಗಳನ್ನು ಜಾರಿಗೆ ತಂದಿತು. ಇವುಗಳ ಲಾಭ ಪಡೆಯಲು ಲಕ್ಷಾಂತರ ಜನ ಅರ್ಜಿ ಸಲ್ಲಿಸಲು ಕಾಯುತ್ತಿದ್ದರು. ಆದರೆ, ಯೋಜನೆಗೆ ಹೆಚ್ಚಿನ ಅರ್ಜಿಗಳು ಬಂದೇ ಬರುತ್ತವೆ ಎಂದು ಅರಿತ ಸರ್ಕಾರ, ಅರ್ಜಿ ಸಲ್ಲಿಕೆಗೆ ಅವಕಾಶ ನೀಡಿರಲಿಲ್ಲ. ಹೀಗಾಗಿ, ಅಂದಿನಿಂದಲೂ ಲಕ್ಷಾಂತರ ಮಂದಿ ಅರ್ಹರು ಕಾರ್ಡ್‌ಗಾಗಿ ಚಾತಕಪಕ್ಷಿಗಳಂತೆ ಕಾಯುತ್ತಿದ್ದಾರೆ.

ಶ್ರೀನಿವಾಸ ಪ್ರಸಾದ್ 50 ವರ್ಷ ಶೋಷಿತರ ದನಿಯಾಗಿದ್ದರು


ಹಿರಿಯ ಸಾಹಿತಿ ಶಂಕರ್ ದೇವನೂರು ನುಡಿ ನಮನ

ಮೈಸೂರು, ಮೇ 6(ಎಸ್‌ಪಿಎನ್)- ಇತ್ತೀಚೆಗೆ ನಿಧನರಾದ ಸಂಸದ ವಿ.ಶ್ರೀನಿವಾಸ ಪ್ರಸಾದ್ ಕಳೆದ 50 ವರ್ಷಗಳಿಂದ ಶೋಷಿತರ ದನಿಯಾಗಿ ಕೆಲಸ ಮಾಡಿದ್ದಾರೆ ಎಂದು ಹಿರಿಯ ಸಾಹಿತಿ ಶಂಕರ್ ದೇವನೂರು ಅಭಿಪ್ರಾಯಪಟ್ಟರು.

ಮೈಸೂರು ಕುವೆಂಪುನಗರದ ಚಿಕ್ಕ ಮ್ಮಾನಿಕೇತನ ಕಲ್ಯಾಣ ಮಂಟಪದಲ್ಲಿ ಎಂಕೆಎಸ್ ಅಭಿಮಾನಿ ಬಳಗ ಹಾಗೂ ಜನಸ್ಪಂದನ ಟ್ರಸ್ಟ್ ಸಹಯೋಗದೊಂದಿಗೆ ಏರ್ಪಡಿಸಿದ್ದ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ವಿ.ಶ್ರೀನಿವಾಸ ಪ್ರಸಾದ್ ಅವರ ಭಾವಚಿತ್ರಕ್ಕೆ ನಮಿಸಿ, ಅವರು ಮಾತನಾಡಿದರು.

ಸಂಸದ ವಿ.ಶ್ರೀನಿವಾಸ ಪ್ರಸಾದ್ ತಮ್ಮ ಜೀವಿತಾವಧಿಯಲ್ಲಿ ಜಾತಿ, ಮತ, ಪಂಥಗಳನ್ನು ಮೀರಿ ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡಿದ್ದಾರೆ. ದಲಿತರು, ಶೋಷಿತರು, ಮಧ್ಯಮ ವರ್ಗದ ಯುವಕರು ಮುಖ್ಯವಾಹಿನಿಗೆ ಬರಲು ಅಧ್ಯಯನ ಶೀಲರಾಗಬೇಕು ಹಾಗೂ ಬುದ್ಧ, ಬಸವ, ಅಂಬೇಡ್ಕರ್ ಜೀವನ ಚರಿತ್ರೆಗಳನ್ನು ಅಧ್ಯಯನ ನಡೆಸಬೇಕು ಎಂದು ವಿವಿಧ ವೇದಿಕೆಗಳಲ್ಲಿ ಸಲಹೆ ನೀಡಿದ್ದ ಕೆಲ ಪ್ರಸಂಗಗಳನ್ನು ಉಲ್ಲೇಖಿಸಿದರು.

ವಿ.ಶ್ರೀನಿವಾಸ ಪ್ರಸಾದ್ ಬಡ ಕುಟುಂಬದಲ್ಲಿ ಹುಟ್ಟಿದ್ದರೂ ಅಧಿಕಾರ ಸಿಕ್ಕಾಗ ಎಂದಿಗೂ



ಅಹಂ ಬೆಳೆಸಿಕೊಂಡವರಲ್ಲ. ಬುದ್ಧ, ಬಸವ, ಅಂಬೇಡ್ಕರ್ ಅವರ ತತ್ವಾದರ್ಶಗಳನ್ನು ಮೈಗೂಡಿಸಿಕೊಂಡು ಜೀವನ ನಡೆಸಿದ್ದಾರೆ. ತಮ್ಮ ಜೀವಿತಾವಧಿಯವರೆಗೂ ತಾವು ನಂಬಿದ ಸಿದ್ಧಾಂತಕ್ಕೆ ಬದ್ಧರಾಗಿದ್ದರು.

ನಾಡಿನ ಸಂತರು, ದಾರ್ಶನಿಕರ ತತ್ವಾದರ್ಶಗಳನ್ನು ಸಮಾಜ ಮೈಗೂಡಿಸಿಕೊಳ್ಳಬೇಕು. ಇದರಿಂದ ದೇಶದ ಪ್ರಗತಿಗೆ ಉತ್ತಮ ಕೊಡುಗೆಯಾಗುತ್ತದೆ ಎಂದಿದ್ದರು. ಅಲ್ಲದೆ, ಮೈಸೂರು, ಚಾಮರಾಜನಗರ ಜಿಲ್ಲೆಗಳಲ್ಲಿ ಕಳೆದ 50 ವರ್ಷಗಳಿಂದ ಶಾಸಕ, ಸಂಸದರಾಗಿ ಹಾಗೂ ಕಂದಾಯ ಮತ್ತು ಕೇಂದ್ರ ಸಚಿವರಾಗಿ ಬಡವರ ಪರವಾದ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ ಎಂದರು.

ಅದರಲ್ಲೂ ಮೈಸೂರು, ಚಾಮರಾಜನಗರ ಜಿಲ್ಲೆಯ ನೊಂದ ಸಮುದಾಯಗಳ ದನಿಯಾಗಿದ್ದರು. ಆ ವರ್ಗದ ಕಷ್ಟಕ್ಕೆ ಸದಾ ಸ್ಪಂದಿಸುತ್ತಿದ್ದರು. ಹಾಗಾಗಿ ವಿ.ಶ್ರೀನಿವಾಸ ಪ್ರಸಾದ್ ಬಡವರು, ದೀನ-ದಲಿತ ಆಶಾಕಿರಣ ಎಂದರೆ ತಪ್ಪಾಗಲಾರದು ಎಂದು ಬಣ್ಣಿಸಿದರಲ್ಲದೆ, ಬಸವಲಿಂಗಪ್ಪನವರ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ನೊಂದವರಿಗೆ ನ್ಯಾಯ ಕೊಡಿಸಿದ ಕೀರ್ತಿ ಪ್ರಸಾದ್ ಅವರಿಗೆ ಸಲ್ಲುತ್ತದೆ ಎಂದರು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಸಂಸದ ವಿ.ಶ್ರೀನಿವಾಸ ಪ್ರಸಾದ್ ನೊಂದವರ ಪರ ಕಳೆದ 50 ವರ್ಷಗಳ ಕಾಲ ಹೋರಾಟ ನಡೆಸಿದವರು. ಸಂಸದ, ಶಾಸಕರಾಗಿ, ಕಂದಾಯ ಹಾಗೂ ಕೇಂದ್ರ ಸಚಿವರಾಗಿ ಸೇವೆ ಸಲ್ಲಿಸಿ, ಜನಾನುರಾಗಿದ್ದರು ಎಂದರು.

ವೇದಿಕೆಯಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯ ಮರಿತಿಬ್ಬೇಗೌಡ, ಮಾಜಿ ಮೇಯರ್ ಟಿ.ಬಿ.ಚಿಕ್ಕಣ್ಣ, ಪುರುಷೋತ್ತಮ್, ಕಾಂಗ್ರೆಸ್ ಮುಖಂಡರಾದ ವಿ.ರಾಮಸ್ವಾಮಿ, ಗಡ್ಡವಾಸು, ಡಾ.ಸಿದ್ದಸ್ವಾಮಿ, ಅರುಣ್ ಬುದ್ಧ ನಗರ ಪಾಲಿಕೆ ಮಾಜಿ ಸದಸ್ಯ ಎಂ.ಸಿ.ಚಿಕ್ಕಣ್ಣ, ಕೆ.ವಿ.ಮಲ್ಲೇಶ್, ಜೋಗಿ ಮಹೇಶ್, ಜೈರಾಜ್, ಡಾ.ಸ್ವಾಮಿ ಆನಂದ್, ಎಂ.ಸುನೀಲ್, ವೆಂಕಟರಮಣ, ಈಶ್ವರ ಚಕ್ಕಡಿ, ರವಿಶಂಕರ್, ಶ್ರೀಧರ್, ಉಪಸ್ಥಿತರಿದ್ದರು.

> ವಿ.ಶ್ರೀನಿವಾಸ ಪ್ರಸಾದರ ಅಗಲಿಕೆ ನಾಡಿನ ಜನತೆಗೆ ದುಃಖ ತಂದಿದೆ. ನನಗೂ ಪ್ರಸಾದರ ಸ್ನೇಹ 42 ವರ್ಷಗಳದ್ದು. ನಾನು ಮೈಸೂರು ವಿವಿ ಮಾನಸ ಗಂಗೋತ್ರಿಯಲ್ಲಿ ಎಂ.ಎ., ಓದುತ್ತಿದ್ದಾಗ ಒಮ್ಮೆ ವಿದ್ಯಾರ್ಥಿಗಳೆಲ್ಲರೂ ಸೇರಿ ಪ್ರತಿಭಟನೆ ಮಾಡುತ್ತಿದ್ದೇವು. ಆ ಸಮಯದಲ್ಲಿ ಅಂದಿನ ಕುಲಪತಿಗಳ ಮಾತನ್ನು ಪ್ರತಿಭಟನಾ ನಿರತ ವಿದ್ಯಾರ್ಥಿಗಳು ಒಪ್ಪದಿದ್ದಾಗ, ಮಾದಲ ಬಾರಿಗೆ ಸಂಸದರಾಗಿದ್ದ ವಿ.ಶ್ರೀನಿವಾಸ ಪ್ರಸಾದರು ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ, ಕೇವಲ ಅರ್ಧ ಗಂಟೆಯಲ್ಲೇ ಆ ಸಮಸ್ಯೆ ಬಗೆಹರಿಸಿದ್ದರು. ಅಂದು ಅವರಾಡಿದ ಮಾತುಗಳು ಇಂದಿಗೂ ನನಗೆ ಆದರ್ಶ ಪ್ರಾಯವಾಗಿವೆ.
>
> - ಮರಿತಿಬ್ಬೇಗೌಡ, ವಿಧಾನ ಪರಿಷತ್ ಮಾಜಿ ಸದಸ್ಯ

ವಿಜೃಂಭಣೆಯ ಹುಣಸಮ್ಮ ದೇವಿ ರಥೋತ್ಸವ


ಕೆ.ಆರ್.ನಗರ ತಾಲೂಕಿನ ಗಂಧನಹಳ್ಳಿಯಲ್ಲಿ ಶ್ರೀಹುಣಸಮ್ಮ ದೇವಿ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಭೇರ್ಯ, ಮೇ 6– ಕೆ.ಆರ್.ನಗರ ತಾಲೂಕಿನ ಗಂಧನಹಳ್ಳಿ ಗ್ರಾಮದ ಗ್ರಾಮದೇವತೆ ಹುಣಸಮ್ಮ ದೇವಿ ರಥೋತ್ಸವ ಸಾವಿರಾರು ಮಹಿಳೆಯರು ತಂಬಿಟ್ಟು ಆರತಿ ಬೆಳಗುವುದರೊಂದಿಗೆ ವಿಜೃಂಭಣೆಯಿಂದ ಜರುಗಿತು.

ರಥಕ್ಕೆ ವಿವಿಧ ಬಣ್ಣಗಳನ್ನು ಬಳಿದು ನೋಡುಗರ ಕಣ್ಮನ ಸೆಳೆಯುವಂತೆ ವಿವಿಧ ಬಗೆಯ ಹೂಗಳಿಂದ ಅಲಂಕರಿಸಲಾಗಿತ್ತು. ಇಡೀ ಗ್ರಾಮವೇ ತಳಿರು ತೋರಣಗಳಿಂದ ಹಸಿರುಮಯವಾಗಿತ್ತು. ಎಲ್ಲೆಲ್ಲಿಯೂ ತೆಂಗಿನ ಗರಿ, ಮಾವಿನ ಸೊಪ್ಪಿನ ತೋರಣ, ಬಾಳೆ ಕಂದು, ಅಡಿಕೆ ಹೊಂಬಾಳೆಯಿಂದ ಕಂಗೊಳಿಸಿದರೆ, ವಿದ್ಯುತ್ ದೀಪಾಲಂಕಾರದಿಂದ ಇಡೀ ಗ್ರಾಮವೇ ಜಗಮಗಿಸುವಂತೆ ಕಾಣುತ್ತಿತ್ತು.

ಬಗೆ ಬಗೆಯ ಬಣ್ಣದ ಬಾವುಟಗಳಿಂದ ಸಿಂಗಾರಗೊಂಡಿದ್ದ ರಥಕ್ಕೆ ಹುಣಸಮ್ಮ ದೇವಿ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಿ ಗ್ರಾಮದೊಳಗೆ ನಾಲ್ಕು ಬಾರಿ ಪ್ರದಕ್ಷಿಣೆ ಹಾಕಿಸಲಾಯಿತು. ಈ ವೇಳೆ ಮುತ್ತೈದೆಯರು ಹಾಗೂ ತವರಿಗೆ ಬಂದ ಹೆಣ್ಣುಮಕ್ಕಳು ತಂಬಿಟ್ಟು ಆರತಿ ಬೆಳಗಿದರು. ಹೊಸದಾಗಿ ಮದುವೆಯಾದ ನವದಂಪತಿಗಳು ಹಣ್ಣು, ಜವನ ಎಸೆದು ತಮ್ಮ ಇಷ್ಟಾರ್ಥವನ್ನು ದೇವಿಗೆ ಅರ್ಪಿಸಿದರು. ಈ ಬಾರಿ ಉತ್ತಮ ಮಳೆ, ಬೆಳೆ ಆಗುವಂತೆ ಹಾಗೂ ಗ್ರಾಮಕ್ಕೆ ಯಾವ ರೋಗ ರುಜಿನ ಬಾರದಂತೆ ದೇವಿ ಮುಂದೆ ಗ್ರಾಮಸ್ಥರು ಪ್ರಾರ್ಥಿಸಿದರು. ಇದಕ್ಕೂ ಮೊದಲು ಕಪ್ಪಡಿ ಕ್ಷೇತ್ರದ ಕಾವೇರಿ ನದಿಯಿಂದ ಹುಣಸಮ್ಮ ದೇವಿಗೆ ವಿವಿಧ ಧಾರ್ಮಿಕ ಪೂಜಾ ಕೈಂಕರ್ಯಗಳನ್ನು ನೆರವೇರಿಸಿ ಹೂವಿನ ಪಲ್ಲಕ್ಕಿಯಲ್ಲಿರಿಸಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮಂಗಳವಾದ್ಯ ಹಾಗೂ ವಿವಿಧ ಜಾನಪದ ಕಲಾತಂಡದೊಂದಿಗೆ ಮೆರವಣಿಗೆ ಮಾಡಲಾಯಿತು. ಈ ವೇಳೆ ಸಾವಿರಾರು ಭಕ್ತರು ಹುಣಸಮ್ಮ ದೇವಿಗೆ ಪೂಜೆ ಸಲ್ಲಿಸಿ ಇಷ್ಟಾರ್ಥ ಸಿದ್ಧಿಗಾಗಿ ದೇವಿಯಲ್ಲಿ ಬೇಡಿಕೊಂಡರು. ಇದೇ ವೇಳೆ ಭಕ್ತರಿಗೆ ಕನಕದಾಸ ಯುವಕರ ಸಂಘದ ವತಿಯಿಂದ ಮಜ್ಜಿಗೆ, ಪಾನಕ, ಕೋಸಂಬರಿ ವಿತರಣೆ ಮಾಡಲಾಯಿತು.

ರಥೋತ್ಸವದಲ್ಲಿ ಕೆಪಿಸಿಸಿ ಕಾರ್ಯಕಾರಿ ಸಮಿತಿ ಸದಸ್ಯ ದೊಡ್ಡಸ್ವಾಮೇಗೌಡ, ಜಿಲ್ಲಾ ಕುರುಬ ಸಂಘದ ನಿರ್ದೇಶಕ ಗಂಧನಹಳ್ಳಿ ಹೇಮಂತ್, ಯುವ ಮುಖಂಡ ವೆಂಕಟೇಶ್, ದೊಡ್ಡ ಯಜಮಾನ ರಘು, ಮುಖಂಡರಾದ ಜಿ.ಎಸ್.ಮಂಜು ನಾಥ, ಡೈರಿ ಮಹದೇವ್, ಜಿ.ಆರ್.ಸತೀಶ್, ದೇವೇಂದ್ರ ಮಂಜು ಅರಸ್, ಕೆಂಪರಾಜು, ಜಿ.ಡಿ.ಅರುಣ್, ಲೋಹಿತ್, ಶ್ರೀಧರ್, ಜಯರಾಜ್, ಪೋಸ್ಟ್ ಮರಿಗೌಡ, ಅರ್ಚಕರಾದ ಸುರೇಶ್, ನಾಗರಾಜ್, ರವಿಶಂಕರ್ ಗ್ರಾಮದ ಎಲ್ಲಾ ಯಜಮಾನರು, ಗ್ರಾಮಸ್ಥರು, ಮಹಿಳೆಯರು ಭಾಗವಹಿಸಿದ್ದರು.

ಮಕ್ಕಳ ಮೇಳ ಸಮಾರೋಪ ಸಮಾರಂಭ


ಮಕ್ಕಳ ಮೇಳ ಸಮಾರೋಪದಲ್ಲಿ ರಂಗಕರ್ಮಿ ಮೈಮ್ ರಮೇಶ್ ಮಾತನಾಡಿದರು.

ನಂಜನಗೂಡು, ಮೇ 6– ನಗರದ ಟ್ರೋ ಯೋಗ ಶಾಲೆ ವತಿಯಿಂದ ಆಯೋಜಿಸಿದ್ದ 24 ದಿನಗಳ ಮಕ್ಕಳ ಮೇಳ ಕಾರ್ಯಕ್ರಮ ಯಶಸ್ವಿಯಾಗಿದ್ದು, ಭಾನುವಾರ ಸಮಾರೋಪ ಸಮಾರಂಭ ನಡೆಯಿತು.

ರಂಗಕರ್ಮಿ ಮೈಮ್ ರಮೇಶ್ ಮಾತನಾಡಿ, ಮಕ್ಕಳು ಇಂತಹ ಬಿರು ಬೇಸಿಗೆಯಲ್ಲೂ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಚಿತ್ರಕಲೆ, ದೇಸಿ ಆಟಗಳು ಹಾಗೂ ಯೋಗಾಸನಗಳನ್ನು ಕಲಿತಿದ್ದು ಸಂತಸ ತಂದಿದೆ. ನಮ್ಮ ಕಲೆ, ಸಾಹಿತ್ಯ, ಯೋಗ ಸೇರಿದಂತೆ ಮುಂತಾದ ಕಲಾ ಪ್ರಕಾರಗಳನ್ನು ಮುಂದಿನ ತಲೆಮಾರಿಗೆ ಉಳಿಸುವ ಕೆಲಸವನ್ನು ಟ್ರೋ ಯೋಗ ಸಂಸ್ಥೆ ಮಕ್ಕಳ ಮೇಳ ಆಯೋಜಿಸುವ ಮೂಲಕ ಅಚ್ಚುಕಟ್ಟಾಗಿ ನಿರ್ವಹಿಸಿದೆ ಎಂದರು.

ಹಿರಿಯ ರಂಗಕರ್ಮಿ ರಾಜಶೇಖರ ಕದಂಬ ಮಾತನಾಡಿ, ಮಕ್ಕಳು ಸೃಜನಶೀಲವಾಗಿ ಬೆಳೆಯಲು ಇಂತಹ ಶಿಬಿರಗಳ ಅವಶ್ಯಕತೆ ಇದೆ. ಮಕ್ಕಳನ್ನು ಮೊಬೈಲ್ ಚಟದಿಂದ ದೂರವಿಡಲು ಕಾರ್ಯಕ್ರಮ ಸಹಕಾರಿಯಾಗಿದೆ. ಪೋಷಕರು ಮಕ್ಕಳ ಕನಸುಗಳಿಗೆ ನೀರೆರೆದು ಪೋಷಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ರಂಗಕರ್ಮಿ ವೆಂಕಟರಾಜು, ಚಿತ್ರ ಕಲಾವಿದ ಬಾದಲ್ ನಂಜುಂಡಸ್ವಾಮಿ, ಅನುರಾಗ ಮಕ್ಕಳ ಮನೆಯ ಸೋಮಶೇಖರ್, ಅನಿಲ್ ಭೋಗಶೆಟ್ಟಿ, ಭರತ್ ಉಪಸ್ಥಿತರಿದ್ದರು.

ನೂತನ ಪದಾಧಿಕಾರಿಗಳಿಗೆ ಸನ್ಮಾನ



ಬೆಟ್ಟದಪುರ, ಮೇ 6– ಇಲ್ಲಿಗೆ ಸಮೀಪದ ಗೊರಹಳ್ಳಿ ಗ್ರಾಮದಲ್ಲಿ ಸಿದ್ಧಗಂಗಾ ಮಠದ ಶ್ರೀಶಿವಕುಮಾರಸ್ವಾಮಿ ಸಂಘದ ನೂತನ ಪದಾಧಿಕಾರಿಗಳನ್ನು ಸನ್ಮಾನಿಸಲಾಯಿತು.

ತಾಲೂಕು ಶಿವಕುಮಾರಸ್ವಾಮಿ ಸಂಘದ ಅಧ್ಯಕ್ಷ ಕೂರ್ಗಲ್ ಶಿವಕುಮಾರಸ್ವಾಮಿ ಮಾತನಾಡಿ, ಗ್ರಾಮದಲ್ಲಿ ಒಂದು ವರ್ಷದ ಹಿಂದೆ ಸ್ಥಾಪನೆಯಾದ ಶಿವಕುಮಾರ ಸ್ವಾಮಿಗಳ ಸಂಘವು ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದೆ. ಪ್ರತಿ ತಿಂಗಳ 5 ರಂದು ಶಿವಕುಮಾರ ಸ್ವಾಮಿಗಳ ಮಾಸಿಕ ಸ್ಮರಣೆ ಹಾಗೂ ಗ್ರಾಮದ ಯುವಕರಿಗೆ ವಚನ ಮತ್ತು ಜಾನಪದ ಗೀತೆ, ಕವನಗಳನ್ನು ಕಲಿಸುವ ಮೂಲಕ ಮುಂದಿನ ಪೀಳಿಗೆಗೆ ಜಾನಪದ ಮತ್ತು ಸಾಹಿತ್ಯವನ್ನು ಉಳಿಸಬೇಕು ಎಂದು ಸಲಹೆ ನೀಡಿದರು.


ಇದೇ ವೇಳೆ ಸಂಘದ ಪದಾಧಿಕಾರಿಗಳನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಗ್ರಾಮದ ಹಿರಿಯರಾದ ಮಹದೇವಪ್ಪ, ಜೈಲಿಂಗಪ್ಪ ಮಹೇಶ್, ಸುರ್ಗಳ್ಳಿ ವಿದ್ಯಾಶಂಕರ್, ಬೆಟ್ಟದಪುರ ವಿಶ್ವೇಶ್ವರಯ್ಯ, ಅಶ್ವಥ್, ಮಹೇಶ, ಕೀರ್ತಿ ಸೇರಿದಂತೆ ಇತರರಿದ್ದರು.

ಕಂಪಲಾಪುರ ಸಹಕಾರ ಸಂಘಕ್ಕೆ ಸಂತೋಷ್ ಅಧ್ಯಕ್ಷ


ಕಂಪಲಾಪುರ ಪಿಎಸಿಎಸ್ ಅಧ್ಯಕ್ಷರಾಗಿ ಕೆ.ಆರ್.ಸಂತೋಷ್ ಅವಿರೋಧವಾಗಿ ಆಯ್ಕೆಯಾದರು.

ಕಂಪಲಾಪುರ, ಮೇ 6– ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಕೆ.ಆರ್.ಸಂತೋಷ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷ ನಾಗೇಗೌಡ ಅವರು ಆಂತರಿಕ ಒಪ್ಪಂದದಂತೆ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ ಹಿನ್ನೆಲೆಯಲ್ಲಿ ಅವರಿಂದ ತೆರವಾದ ಸ್ಥಾನಕ್ಕೆ ಸೋಮವಾರ ಚುನಾವಣೆ ನಿಗದಿಯಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ಸಂತೋಷ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಕೆ.ಬಿ.ಅಶ್ವಿನ್ ಕುಮಾರ್ ಅಧಿಕೃತವಾಗಿ ಘೋಷಿಸಿದರು. ಈ ಸಂದರ್ಭ ಉಪಾಧ್ಯಕ್ಷ ಬಿ.ಕೆ.ತಮ್ಮಯ್ಯ, ಸಿಇಓ ಕೆ.ಎನ್.ಹರ್ಷ, ನಿರ್ದೇಶಕರಾದ ಕೆ.ಕುಮಾರ್, ನಾಗೇಗೌಡ, ಮಹದೇವ್, ರವಿ, ಗಿರೀಶ್, ಮಹದೇವ, ಲಕ್ಷ್ಮಣ್, ಮಣಿ ಮಹೇಶ್, ಭಾಗ್ಯ ರಾಜೇಗೌಡ ಸೇರಿದಂತೆ ಸಿಬ್ಬಂದಿ ಹಾಜರಿದ್ದರು.


ವರುಣ ಬಳಿ ಜೆಎಸ್‌ಎಸ್ ಯೂನಿವರ್ಸಿಟಿ ಭೂಮಿ ಪೂಜೆಗೆ ಆಗಮಿಸಿದ ಜೆಎಸ್‌ಎಸ್ ವಿದ್ಯಾಪೀಠದ ಗೌರವ ಕಾರ್ಯದರ್ಶಿ ಎಸ್.ಪಿ. ಮಂಜುನಾಥ ಅವರನ್ನು ವರುಣ ಮತ್ತು ಮೊಸಂಬಾಯನಹಳ್ಳಿ ಗ್ರಾಪಂ ಸದಸ್ಯರು, ವರುಣ ಮಹೇಶ್ ನೇತೃತ್ವದಲ್ಲಿ ಸನ್ಮಾನಿಸಿದರು.

ಮುಡುಕುತೊರೆಯಲ್ಲಿ ವಿಜೃಂಭಣೆಯ ಬಟ್ಟಲ ಪೂಜೆ




ತಿ.ನರಸೀಪುರ, ಮೇ 6– ಪುರಾಣ ಪ್ರಸಿದ್ಧ ಮುಡುಕುತೊರೆ ಶ್ರೀಮಲ್ಲಿಕಾರ್ಜುನಸ್ವಾಮಿ ಹಾಗೂ ಭ್ರಮರಾಂಬ ಕ್ಷೇತ್ರದಲ್ಲಿ ಮುತ್ತೈದೆಯರ ಬಟ್ಟಲ ಪೂಜೆ ವಿಜೃಂಭಣೆಯಿಂದ ನೆರವೇರಿತು.

ಚೈತ್ರ ಮಾಸದ ಕೊನೆ ಸೋಮವಾರದಂದು ಪಾರ್ವತಿಯು ತಂದೆ ಮನೆಯಿಂದ ಗಂಡನ ಮನೆಗೆ ಬಂದ ಸಂದರ್ಭವನ್ನೇ ಮುತ್ತೈದೆ ಪೂಜೆಯೆಂದು ಆಚರಿಸುವ ಈ ದಿನವನ್ನು ಬಟ್ಟಲು ಪೂಜೆ ಎಂದು ಕರೆಯುತ್ತಾರೆ. ಅಂದು ಶ್ರೀಕ್ಷೇತ್ರದಲ್ಲಿ ಮುತ್ತೈದೆಯರು ಬೆಳಗ್ಗೆಯಿಂದಲೇ ಉಪವಾಸವಿದ್ದು ಕಾವೇರಿ ನದಿಯಲ್ಲಿ ಸ್ನಾನ ಮಾಡಿ ಮುತ್ತೈದೆಯರ ಪಾದಕ್ಕೆ ಅರಿಶಿನ ಕುಂಕುಮ ಇಟ್ಟು ಪೂಜೆ ನೆರವೇರಿಸಿ, ಕೋಸಂಬರಿ, ಪಾನಕ ಹಾಗೂ ಫಲ ತಾಂಬೂಲ ನೀಡಿ ಆಶೀರ್ವಾದ ಪಡೆಯುತ್ತಾರೆ. ಇದೇ ಈ ಪೂಜೆ ವಿಶೇಷ.

ಬಟ್ಟಲ ಪೂಜೆ ಹಿನ್ನೆಲೆಯಲ್ಲಿ ದೇವಾಲಯದಲ್ಲಿ ಶ್ರೀಭ್ರಮರಾಂಬ ಸಮೇತ ಶ್ರೀಮಲ್ಲಿಕಾರ್ಜುನಸ್ವಾಮಿ ಅವರಿಗೆ ಪಂಚಾಮೃತ ಅಭಿಷೇಕ ನೆರವೇರಿಸಿ ಮಹಾಮಂಗಳಾರತಿ ಮಾಡಿ ಭಕ್ತರ ದರ್ಶನಕ್ಕೆ ಅನುವು ಮಾಡಿಕೊಟ್ಟರು. ಈ ವೇಳೆ ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು.

ಸ್ಟೇರಿಂಗ್ ಕಟ್ ಆಗಿ ಗದ್ದೆಗೆ ನುಗ್ಗಿದ ಸಾರಿಗೆ ಬಸ್: 55 ಮಂದಿಗೆ ಗಾಯ



ಚುಂಚನಕಟ್ಟೆ, ಮೇ 6– ಸ್ಟೇರಿಂಗ್ ರಾಡ್ ಕಟ್ ಆಗಿ ಚಾಲಕನ ನಿಯಂತ್ರಣ ತಪ್ಪಿದ ಕೆಎಸ್ಆರ್‌ಟಿಸಿ ಬಸ್ ಗದ್ದೆಗೆ ನುಗ್ಗಿದ ಪರಿಣಾಮ 55 ಮಂದಿ ಗಾಯಗೊಂಡಿರುವ ಘಟನೆ ಸೋಮವಾರ ಕೆ.ಆರ್.ನಗರ–ಚುಂಚನಕಟ್ಟೆ ಮುಖ್ಯರಸ್ತೆಯ ಶ್ರೀರಾಂಪುರ ಸಮೀಪದ ಬಸವೇಶ್ವರ ದೇವಾಲಯದ ಕೊಲ್ಲಿ ಬಳಿ ನಡೆದಿದೆ.

ಕೆ.ಆರ್.ನಗರ ಡಿಪೋಗೆ ಸೇರಿದ ಬಸ್ ಕೇರಳಾಪುರದಿಂದ ಸಾಲಿಗ್ರಾಮ, ಚುಂಚನಕಟ್ಟೆ ಮಾರ್ಗವಾಗಿ ಮೈಸೂರಿಗೆ ತೆರಳುತ್ತಿತ್ತು. ಈ ವೇಳೆ ಬಸ್‌ನ ಸ್ಟೇರಿಂಗ್ ರಾಡ್ ಕಟ್ ಆಗಿ ಚಾಲಕನ ನಿಯಂತ್ರಣ ತಪ್ಪಿ ಬಸ್ ಗದ್ದೆಗೆ ನುಗ್ಗಿದ್ದು, ಘಟನೆಯಲ್ಲಿ ಬಸ್ಸಿನಲ್ಲಿದ್ದ ಮಹಿಳೆಯರು, ಕಾಲೇಜು ವಿದ್ಯಾರ್ಥಿಗಳು ಮತ್ತು ಚಾಲಕ, ನಿರ್ವಾಹಕ ಸೇರಿದಂತೆ 55 ಮಂದಿ ಗಾಯಗೊಂಡಿದ್ದಾರೆ. ತಕ್ಷಣ ಅವರನ್ನು ಆಂಬುಲೆನ್ಸ್ ಹಾಗೂ ಖಾಸಗಿ ವಾಹನಗಳ ಮೂಲಕ ಕೆ.ಆರ್.ನಗರ ಆಸ್ಪತ್ರೆಗೆ ಚಿಕಿತ್ಸೆಗಾಗಿ ರವಾನಿಸಲಾಯಿತು. ಈ ಪೈಕಿ 15 ಮಂದಿಯನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಆಸ್ಪತ್ರೆಗೆ ರವಾನಿಸಲಾಯಿತು. ವಿಷಯ ತಿಳಿದು ಸ್ಥಳಕ್ಕೆ ಕೆ.ಆರ್.ನಗರ, ಸಾಲಿಗ್ರಾಮ ಮತ್ತು ಚುಂಚನಕಟ್ಟೆ ಪೊಲೀಸರು ಮತ್ತು ಕೆ.ಆರ್.ನಗರ ಬಸ್ ಡಿಪೋ ವ್ಯವಸ್ಥಾಪಕ ಮಹೇಶ್ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಈ ಸಂಬಂಧ ಕೆ.ಆರ್.ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಡು ಕಂಡ ಅಪರೂಪದ ರಾಜಕಾರಣಿ ಶ್ರೀನಿವಾಸಪ್ರಸಾದ್

ಶ್ರದ್ಧಾಂಜಲಿ ಸಭೆಯಲ್ಲಿ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಬಣ್ಣನೆ



ಹುಣಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ವಿ.ಶ್ರೀನಿವಾಸಪ್ರಸಾದ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಹುಣಸೂರು, ಮೇ 6– ನಾನು ರಾಜಕೀಯವಾಗಿ ಬೆಳೆಯಲು ಸಹಕರಿಸಿದ ಮಹಾನ್ ವ್ಯಕ್ತಿ ಸಂಸದ ವಿ.ಶ್ರೀನಿವಾಸ ಪ್ರಸಾದ್ ಎಂದು ಮಾಜಿ ಶಾಸಕ ಹೆಚ್.ಪಿ. ಮಂಜುನಾಥ್ ತಿಳಿಸಿದರು.

ನಗರದ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ದಿ.ವಿ.ಶ್ರೀನಿವಾಸ್‌ಪ್ರಸಾದ್ ಅವರ ನುಡಿನಮನ ಹಾಗೂ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಪ್ರಸಾದ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ದಮನಿತರ ಧ್ವನಿಯಾಗಿದ್ದ ಬಸವಲಿಂಗಯ್ಯ, ರಾಚಯ್ಯ ಹಾಗೂ ಡಿ.ದೇವರಾಜ ಅರಸು ನಂತರ ಅವರದೇ ಹಾದಿಯಲ್ಲಿ ನಡೆದ ವಿ.ಶ್ರೀನಿವಾಸ್‌ಪ್ರಸಾದ್ ಈ ನಾಡು ಕಂಡ ಅಪರೂಪದ ರಾಜಕಾರಣಿ. ಸಂಸದ, ಸಚಿವ ಹಾಗೂ ಶಾಸಕರಾಗಿ, ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ದಲಿತರಿಗೆ ಮಾತ್ರವಲ್ಲದೇ ಎಲ್ಲಾ ವರ್ಗದ ಜನರ ಅಭಿವೃದ್ಧಿಗಾಗಿ ಶ್ರಮಿಸಿದರು. ಆದರೆ ಅವರ ವ್ಯಕ್ತಿತ್ವಕ್ಕೆ ಧಕ್ಕೆಯಾದರೆ ಅಲ್ಲಿ ಅವರು ಒಂದು ಕ್ಷಣವೂ ನಿಲ್ಲುತ್ತಿರಲಿಲ್ಲ ಎಂದು ತಿಳಿಸಿದರು.

ನನ್ನ ತಂದೆ ಪ್ರೇಮಕುಮಾರ್, ವಿ.ಶ್ರೀನಿವಾಸಪ್ರಸಾದ್ ರಾಜಕೀಯ ಸಮಕಾಲೀನರು. ಮುಖ್ಯಮಂತ್ರಿ ಸಿದ್ದರಾಮಯ್ಯ, ವಿ.ಶ್ರೀನಿವಾಸಪ್ರಸಾದ್ ಒಂದೇ ಚಿಂತನೆ ಉಳ್ಳವರು. ಸ್ವಾಭಿಮಾನಿ ರಾಜಕಾರಣಿ ಎಂದೇ ಗುರುತಿಸಿಕೊಂಡಿದ್ದ ಅವರು ಅವರ ಜೀವನದಲ್ಲಿ ವಿಭಿನ್ನ ನಿಲುವುಗಳನ್ನು ಹೊಂದಿದ್ದರು. ದಿಟ್ಟ ನಿರ್ಧಾರ ಕೈಗೊಳ್ಳುತ್ತಿದ್ದರು. ಯಾವಾಗಲೂ ನೇರ ನಡೆ ನುಡಿಗೆ ಹೆಸರಾಗಿದ್ದರು. ಸಿದ್ದರಾಮಯ್ಯ ಮತ್ತು ವಿ.ಶ್ರೀನಿವಾಸಪ್ರಸಾದ್ ಅವರ ಜೊತೆ ಕೆಲವು ಅಭಿವೃದ್ಧಿ ವಿಚಾರದಲ್ಲಿ ನಾನು ಜೊತೆಯಾಗಿದ್ದೆ ಎನ್ನುವುದೇ ನನಗೆ ಖುಷಿ ವಿಚಾರ. ಅವರು ಎಂದಿಗೂ ದ್ವೇಷದ ರಾಜಕಾರಣ ಮಾಡಿದವರಲ್ಲ. ಎಲ್ಲರ ಜೊತೆ ಪ್ರೀತಿಯಿಂದ ರಾಜಕಾರಣ ಮಾಡುತ್ತಿದ್ದರು ಎಂದರು.

ಬದನವಾಳು ಘಟನೆ ಸಂದರ್ಭ ಶ್ರೀನಿವಾಸಪ್ರಸಾದ್ ದಿಟ್ಟ ನಿರ್ಧಾರ ಕೈಗೊಂಡು ಯಶಸ್ವಿಯಾಗಿದ್ದರು. ಸಿದ್ದರಾಮಯ್ಯ ಸರ್ಕಾರದಲ್ಲಿ ಕಂದಾಯ ಸಚಿವರಾಗಿದ್ದಾಗ ಅವರ ಗೌರವಕ್ಕೆ ಚ್ಯುತಿ ಬಂತು ಎಂದೇ ಅವರಿಂದ ದೂರಾದರೆ ಹೊರತು ದ್ವೇಷದಿಂದಲ್ಲ. ಕೊನೆ ಕ್ಷಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯರವರೇ ದೊಡ್ಡ ಮನಸ್ಸು ಮಾಡಿ ತಮ್ಮ ಹಳೇ ಸ್ನೇಹವನ್ನು ಕುದುರಿಸಿಕೊಂಡಿದ್ದು ಪ್ರಸಾದ್ ಅವರ ಆತ್ಮಕ್ಕೆ ಶಾಂತಿ ಸಿಕ್ಕಂತಾಯ್ತು ಎನಿಸುತ್ತದೆ. ಅದನ್ನು ಸಿದ್ದರಾಮಯ್ಯ ಅವರಿಗೆ ನಾನು ನೆನಪು ಮಾಡಿದೆ ಎಂದರು.

ದಸಂಸ ಜಿಲ್ಲಾ ಹೋರಾಟಗಾರ ಆನಂದ ಸ್ವಾಮಿ ಮಾತನಾಡಿ, ಶ್ರೀನಿವಾಸಪ್ರಸಾದ್ ಅವರು ಡಾ.ಬಿ.ಆರ್.ಅಂಬೇಡ್ಕರ್ ಅವರ ವಿಚಾರಧಾರೆಗಳನ್ನು ಮೈಗೂಡಿಸಿಕೊಂಡಿದ್ದರು. ಅವರು ತಮ್ಮ ಜೀವನದ ಕೊನೆ ದಿನದವರೆಗೂ ಹೊಂದಾಣಿಕೆ ಮಾಡಿಕೊಳ್ಳದೇ ಸದಾ ಸ್ವಾಭಿಮಾನಿ ರಾಜಕಾರಣಿಯಾಗಿ ಗುರುತಿಸಿಕೊಂಡಿದ್ದರು ಎಂದರು.

ಶ್ರೀನಿವಾಸಪ್ರಸಾದ್ ಸಹೋದರ ರಾಮಸ್ವಾಮಿ ಮಾತನಾಡಿ, ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಅವರ ಕುಟುಂಬದ ಜೊತೆ ನನ್ನ ಸಹೋದರ ಅವಿನಾಭಾವ ಸಂಬಂಧ ಹೊಂದಿದ್ದರು. ಅವರು ಕೊನೆವರೆಗೂ ಸ್ವಾಭಿಮಾನಿಯಾಗಿ ಬದುಕಿದ್ದರು ಎಂದರು.

ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷರಾದ ನಾರಾಯಣ್, ಬಸವರಾಜ್, ಪ್ರೇಮ್‌ಕುಮಾರ್, ಮುಖಂಡರಾದ ಜಾಕೀರ್ ಹುಸೇನ್, ಎಸ್.ಜಯರಾಮ್, ಚಿಕ್ಕಸ್ವಾಮಿ, ಕುಮಾರ್, ರಾಘು, ನಾಡಪ್ರಭು ಕೆಂಪೇಗೌಡ, ಯುವಪಡೆ ಅಧ್ಯಕ್ಷ ಪಾಂಡು, ಶಾಂತ, ಸುಮತಿ, ಸೋಮಶೇಖರ್, ಕುನ್ನೇಗೌಡ, ರವಿಗೌಡ, ಎಸ್.ಜಯರಾಮ್, ಅಣ್ಣಯ್ಯ ನಾಯಕ, ನಗರಸಭಾ ಸದಸ್ಯರು, ನೂರಾರು ಕಾರ್ಯಕರ್ತರು ಇನ್ನಿತರರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ರತ್ನಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂಗರೂ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಊಡೂ ಈಸ್ ಬ್ಯಾಕ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮಾರಕಾಸ್ತ್ರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ಅರಮನೆ–4(ತ)	4 ಪ್ರದರ್ಶನಗಳು
ಸಂಗಂ	
ಉಸಿರೇ ಉಸಿರೇ (ಕ)	4 ಪ್ರದರ್ಶನಗಳು
ಲಿಡೋ	
ಮ್ಯಾಟ್ನಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬಿಲ್ಲ (ತ)	4 ಪ್ರದರ್ಶನಗಳು
ಪ್ರಭಾ	
ಮಾರಣಾಯುದ್ಧಂ (ತೆ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕುಂಗ್ ಫೂ ಪಾಂಡ 4 (3ಡಿ) (ಇಂ): ಬೆ.11.30ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಮ.1.40ಕ್ಕೆ, ಗಿಲ್ಲಿ (ತ): ಸಂ.4ಕ್ಕೆ, ದಿ ಫಾಲ್ ಗಾಯ್ (ಇಂ): ರಾ.7.10ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 2	ಅಂಜಾಮ್ ವೇದಂ (ಮ): ಬೆ.11ಕ್ಕೆ, O2 (ಕ): ಮ.1.45ಕ್ಕೆ, ಉಸಿರೇ ಉಸಿರೇ (ಕ): ಸಂ.4.05ಕ್ಕೆ, ಆವೇಶಂ (ಮ): ರಾ.7.05ಕ್ಕೆ, ನಡಿಕರ್ (ಮ): ರಾ.10.05ಕ್ಕೆ.
ಸ್ಕ್ರೀನ್ 3	ಕಾಂಗರೂ (ಕ): ಬೆ.11ಕ್ಕೆ, ಬಿಲ್ಲಾ (ತ): ಮ.1.35ಕ್ಕೆ, ಅರಮನೈ 4 (ತ): ಸಂ.4.20ಕ್ಕೆ, ರಾ.10.05ಕ್ಕೆ, ಪ್ರಸನ್ನವದನಂ (ತೆ): ರಾ.7.15ಕ್ಕೆ.
ಸ್ಕ್ರೀನ್ 4	ದಿ ಫಾಲ್ ಗಾಯ್ (ಇಂ): ಬೆ.11.10ಕ್ಕೆ, ಸಂ.4.35ಕ್ಕೆ, ಸಬರಿ (ತೆ): ಮ.1.50ಕ್ಕೆ, ಮಲಯಾಳಿ ಫ್ರಂ ಇಂಡಿಯಾ (ಮ): ರಾ.7.10ಕ್ಕೆ, ಆ ಒಕ್ಕಟಿ ಅಡಕ್ಕು (ತೆ): ರಾ.10.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.25ಕ್ಕೆ, ರಾ.10ಕ್ಕೆ, ಯುವ (ಕ): ಮ.1ಕ್ಕೆ, ಸಂ.4.15ಕ್ಕೆ, O2 (ಕ): ರಾ.7.30ಕ್ಕೆ.
ಸ್ಕ್ರೀನ್ 2	ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ಬೆ.10.45ಕ್ಕೆ, ಸಂ.5.55ಕ್ಕೆ, ಮೈದಾನ್ (ಹಿಂ): ಮ.2.10ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ರಾ.9.20ಕ್ಕೆ.
ಸ್ಕ್ರೀನ್ 3	ಯುವ (ಕ): ಬೆ.10.10ಕ್ಕೆ, O2 (ಕ): ಮ.1.25ಕ್ಕೆ, ಪಾರಿಜಾತ ಪರ್ವಂ (ತೆ): ಮ.3.55ಕ್ಕೆ, ಆವೇಶಂ (ಮ): ಸಂ.6.50ಕ್ಕೆ, ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಮೈದಾನ್ (ಹಿಂ): ಬೆ.11.25ಕ್ಕೆ, ರಾ.9.50ಕ್ಕೆ, ವರ್ಷನ್‌ಗಲ್ಕು ಶೇಷಂ (ಮ): ಮ.3.10ಕ್ಕೆ, ಯುವ (ಕ): ಸಂ.6.35ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ತ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಲಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ತೆ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.35ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.10ಕ್ಕೆ, ಮ.12.30ಕ್ಕೆ, ಮ.3.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಯುವ (ಕ): ಬೆ.10.20ಕ್ಕೆ, ಬೆ.11.35ಕ್ಕೆ, ಮ.12.45ಕ್ಕೆ, ಮ.3.20ಕ್ಕೆ, ಸಂ.5.45ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.45ಕ್ಕೆ, ಮ.1.25ಕ್ಕೆ, ಸಂ.6.50ಕ್ಕೆ, ರಾ.9.30ಕ್ಕೆ, ಅವತಾರ ಪುರುಷ 2 (ಕ): ಮ.12.40ಕ್ಕೆ, ಸಂ.6.35ಕ್ಕೆ, ಮ್ಯಾಟ್ನಿ (ಕ): ಮ.1.35ಕ್ಕೆ, ಭರ್ಜರಿ ಗಂಡು (ಕ): ಮ.2.50ಕ್ಕೆ, ದಿ ಫಸ್ಟ್ ಓಮನ್ (ಇಂ): ಸಂ.4ಕ್ಕೆ, ರಾ.9ಕ್ಕೆ, ಕ್ರೂವ್ (ಹಿಂ): ಸಂ.4.05ಕ್ಕೆ, ರಾ.9.15ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಸಂ.4.30ಕ್ಕೆ, ಮಾರಿಗೋಲ್ಡ್ (ಕ): ರಾ.7.25ಕ್ಕೆ, ಆಡುಜೀವಿತಂ (ಮ): ರಾ.10.15ಕ್ಕೆ.

ಗರುಡ ಮಾಲ್,
1ನೇ ಮಹಡಿ, ಮೊ.ನಂ: 9901373210

ಯುವ (ಕ): ಬೆ.9.30ಕ್ಕೆ, ಮ.12.25ಕ್ಕೆ, ಮ.3.40ಕ್ಕೆ, ಸಂ.6.30ಕ್ಕೆ, ರಾ.10.30ಕ್ಕೆ, ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.50ಕ್ಕೆ, ಮ.12ಕ್ಕೆ, ಮ.3.20ಕ್ಕೆ, ಸಂ.6.40ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಮ.1.10ಕ್ಕೆ, ಮ.3.50ಕ್ಕೆ, ರಾ.9.45ಕ್ಕೆ, ಅವತಾರ ಪುರುಷ 2 (ಕ): ಮ.2ಕ್ಕೆ, ರಾ.7.35ಕ್ಕೆ, ಮ್ಯಾಟ್ನಿ (ಕ): ಸಂ.4.40ಕ್ಕೆ, ಆಡುಜೀವಿತಂ (ಮ): ಸಂ.6.55ಕ್ಕೆ, ರಾ.10.15ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಯುವ ಬ್ರಿಗೇಡ್‌ನಿಂದ ಬಸವೇಶ್ವರ ಉದ್ಯಾನವನ ಸ್ವಚ್ಛತೆ


ಯುವ ಬ್ರಿಗೇಡ್‌ನ ಯುವಕರು ಬಸವೇಶ್ವರ ಪಾರ್ಕ್‌ನಲ್ಲಿ ಸ್ವಚ್ಛತಾ ಕಾರ್ಯ ನಡೆಸಿದರು.

ನಂಜನಗೂಡು, ಮೇ 6– ಯುವ ಬ್ರಿಗೇಡ್ ಸದಸ್ಯರು ಪೌರಕಾರ್ಮಿಕರ ಸಹಯೋಗದೊಂದಿಗೆ ನಗರದ ಬಸವೇಶ್ವರ ಉದ್ಯಾನವನದಲ್ಲಿ ಸ್ವಚ್ಛತಾ ಕಾರ್ಯ ನಡೆಸಿದರು. ಉದ್ಯಾನವನದಲ್ಲಿದ್ದ ಕಸಕಡ್ಡಿ, ಪ್ಲಾಸ್ಟಿಕ್ ತ್ಯಾಜ್ಯ, ಗಿಡಗಂಟಿಗಳನ್ನು ತೆರವುಗೊಳಿಸಿ ಹೂ, ಹಣ್ಣಿನ ಗಿಡ ನೆಟ್ಟರು.

ಯುವ ಬ್ರಿಗೇಡ್‌ನ ಮಧು ಮಾತನಾಡಿ, ನಮ್ಮ ನೆರೆಹೊರೆಯ ಉದ್ಯಾನ ಹಾಗೂ ದೇವಾಲಯಗಳ ಸ್ವಚ್ಛತೆ ಕಾಪಾಡುವುದು ನಾಗರಿಕರಾದ ನಮ್ಮ ಆದ್ಯ ಕರ್ತವ್ಯ. ನಾವು ವಿಹರಿಸುವ ಉದ್ಯಾನವನವನ್ನು ಸ್ವಚ್ಛಗೊಳಿಸಲು ನಗರಸಭೆಯನ್ನು ಕಾಯದೆ ನಾವೇ ಬಿಡುವಿನ ವೇಳೆಯಲ್ಲಿ ಸ್ವಚ್ಛಗೊಳಿಸುವ ಮೂಲಕ ಪರಿಸರ ರಕ್ಷಣೆಗೆ ಮುಂದಾಗಬೇಕು ಎಂದರು. ಕಾರ್ಯಕ್ರಮದಲ್ಲಿ ಆನಂದ್, ಶಶಾಂಕ್, ಸುನೀಲ್, ಮನು, ತೇಜಸ್, ಸೃಜನ ಉಪಸ್ಥಿತರಿದ್ದರು.

ಮಹಿಳೆಗೆ ಬ್ಲಾಕ್ ಮೇಲ್ ಯತ್ನ; ಆಕೆಯ ಪುತ್ರಿಯಿಂದ ಸಂಬಂಧಿ ವಿರುದ್ಧ ದೂರು

ಮೈಸೂರು, ಮೇ 6(ಎಸ್‌ಪಿಎನ್)– ಮಹಿಳೆಯ ಗೌರವಕ್ಕೆ ಧಕ್ಕೆ ತರುವಂತಹ ಭಾವಚಿತ್ರ ಹಾಗೂ ವಾಯ್ಸ್ ರೆಕಾರ್ಡ್‌ಗಳನ್ನು ಸಂಬಂಧಿಕರಿಗೆ ಕಳುಹಿಸಿ ಮಾನಹಾನಿ ಮಾಡುವುದಾಗಿ ಬೆದರಿಕೆ ಹಾಕಿದ ಇಬ್ಬರ ವಿರುದ್ಧ ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಕೊಯಮತ್ತೂರಿನ ಉಮಾಪತಿ ಮತ್ತು ಮೈಸೂರಿನ ಅರವಿಂದ ನಗರದ ನಿವಾಸಿ ಶೀಲಾ ಗೋಪಾಲ್ ಬೆದರಿಕೆ ಹಾಕಿದವರು. ಉಮಾಪತಿ ನಮ್ಮ ಕುಟುಂಬದ ದೂರದ ಸಂಬಂಧಿಯಾಗಿದ್ದು, ಇವರು ನಮ್ಮ ತಾಯಿ ಮೊಬೈಲ್‌ನಲ್ಲಿ ಮಾತನಾಡಿರುವ ವಾಯ್ಸ್ ರೆಕಾರ್ಡ್ ಮತ್ತು ಅವರ ಕೆಲ ಭಾವಚಿತ್ರಗಳನ್ನು ನಮ್ಮ ತಾಯಿಯ ಅರಿವಿಗೆ ಬಾರದಂತೆ ಡೌನ್‌ಲೋಡ್ ಮಾಡಿಕೊಂಡಿದ್ದಾರೆ.

ಈ ದಾಖಲೆಗಳನ್ನಿಟ್ಟುಕೊಂಡು ನಮ್ಮ ತಾಯಿ ಬಳಿ ನಿನಗೆ ಸಂಬಂಧಿಸಿದ ಕೆಲ ಭಾವಚಿತ್ರ ಹಾಗೂ ಆಡಿಯೋಗಳಿದ್ದು, ಇದನ್ನು ನಿನ್ನ ಸಂಬಂಧಿಕರಿಗೆ ಕಳುಹಿಸುವುದಾಗಿ ಬೆದರಿಕೆ ಹಾಕಿದ್ದಾರೆ. ಇದರಿಂದ ನನ್ನ ತಾಯಿ ಆತಂಕದಲ್ಲಿದ್ದಾರೆ. ಹಾಗಾಗಿ ಇವರಿಬ್ಬರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಮಹಿಳೆಯ ಪುತ್ರಿ ಕುವೆಂಪುನಗರ ಠಾಣೆಗೆ ನೀಡಿರುವ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಹೃದಯಾಘಾತದಿಂದ ಚುನಾವಣಾ ಕರ್ತವ್ಯದಲ್ಲಿದ್ದ ಅಧಿಕಾರಿ ಸಾವು

ಬೀದರ್: ಹೃದಯಾಘಾತದಿಂದ ಚುನಾವಣಾ ಕರ್ತವ್ಯದಲ್ಲಿದ್ದ ಅಧಿಕಾರಿ ಮೃತಪಟ್ಟಿರುವ ಘಟನೆ ಜಿಲ್ಲೆಯ ಚಿಟಗುಪ್ಪಾ ತಾಲೂಕಿನ ಕೋಡಂಬಲ್ ಗ್ರಾಮದಲ್ಲಿ ನಡೆದಿದೆ.

ಆನಂದ್(31) ಮೃತ ದುರ್ದೈವಿ. ಸಹಾಯಕ ಕೃಷಿ ಅಧಿಕಾರಿಯಾಗಿದ್ದು, ಅವರು ಕೋಡಂಬಲ್ ಚೆಕ್ ಪೋಸ್ಟ್‌ನಲ್ಲಿ ಕರ್ತವ್ಯ ನಿರ್ವಹಿಸುವಾಗ ಹೃದಯಾಘಾತವಾಗಿದ್ದು, ಆಸ್ಪತ್ರೆಗೆ ಸಾಗಿಸುವಾಗ ಮಾರ್ಗಮಧ್ಯೆ ಕೊನೆಯುಸಿರೆಳೆದಿದ್ದಾರೆ. ಲೋಕಸಭೆ ಚುನಾವಣೆ ಹಿನ್ನೆಲೆ ರಾಜ್ಯದಲ್ಲಿ ನಾಳೆ ಎರಡನೇ ಹಂತದ ಮತದಾನ ನಡೆಯಲಿದೆ. ವಿವಿಧ ರಾಜ್ಯಗಳ 174 ಕ್ಷೇತ್ರಗಳಲ್ಲಿ ಬೆಳಗ್ಗೆ 7ರಿಂದ ಮತದಾನ ಪ್ರಾರಂಭವಾಗಲಿದೆ.

GSSS | GEETHA SHISHU SHIKSHANA SANGHA(R)
INSTITUTE OF ENGINEERING AND TECHNOLOGY FOR WOMEN
K.R.S. Road, Metagalli, Mysuru – 570 016
Ph: 0821-4257304 / 305 / 306 Fax: 0821-2581305

TENDER NOTIFICATION

Tenders are invited for providing **Security and House Keeping Services** on the Terms and Conditions as indicated in the Tender Document.
Interested firms/agencies having experience and all statutory clearances may submit their quotations **on or before 14.05.2024.** Tender form may be collected from the institute on all working days on payment of Rs. 1,000/-.
Sd/-
Management

Walk-in Interview for
AXIS BANK
- Interview Date: 8-05-2024 | Time: 10 a.m.
- Venue: Basudev Somani College Vishwamanava Double Road, Kuvempu Nagara, Mysuru
- Contact: 7845760154
- Any Graduate can Apply!
- Receive FREE training by TVSTS.
- An opportunity to join Axis Bank* (Terms & Conditions Apply)
- Age : Below 28yrs
- Fresher
- Work location: Mysuru

Enroll Today!
- Mandatory Documents: Educational documents, Aadhaar & PAN

ASA program, trained by TVSTS is your ticket to success
Registration Link: https://tinyurl.com/AxisKAL1
AXIS BANK
TVS Training & Services

ADMISSION OPEN
BECOME A TEACHER
Online Course available
20 YEARS CELEBRATION ANNIVERSARY
JOIN DIPLOMA IN MONTESSORI/ PRIMARY TEACHER TRAINING
FOR SSLC, PUC OR ANY DEGREE CANDIDATES
IMKTA Since 2003
IMKTA TEACHER TRAINING PROGRAMS INDIA MYSORE
Alpha International School
Manandavadi Road, Near Ring Road Signal Junction, Srirampura, Mysore
WWW.IMKTA.IN 7829937469

neem BOND PLATINUM® ISI
PLYWOOD & DOORS
@ FACTORY DEPOT RATES
10 YEARS WARRANTY*
9845426862, 9901291267

DTCP SITES FOR SALE
DTCP Sites
With RERA
Near Jayapura,
H.D. Kote Road, Mysore.
9590491194,9606783264

ಈ ಕೆಳಕಂಡ ಆಸ್ತಿಗಳು ಮಾರಾಟಕ್ಕೆ ಇವೆ

ಎಂ.ಆರ್.ನಂ.	ಸರ್ವೆ ನಂ./ಹಿಸ್ಸಾ	ಎಕರೆ/ಗುಂ.	ಖಾತೆದಾರರ ಹೆಸರು	ಗ್ರಾಮ	ಹೋಬಳಿ	ಸಿ.ಡಿ.ಎಸ್
MR-2/87-88 ಪೌತಿ	77/1	0.24½	ಸಿ. ಲೀಲಾವತಿ ಕೋಂ ಕುನ್ನಯ್ಯ	ಹಂಗರಹಳ್ಳಿ	ಅರಕೆರೆ	ನಾಲ ಜಮೀನು
MR H13/ 2021-2022 18-11-2021 ವಿಭಾಗ	280/4	0.09	ಕುನ್ನಯ್ಯ ಬಿನ್ ಸಿದ್ದಯ್ಯ	ವಡಿಯಾಂಡಹಳ್ಳಿ	ಅರಕೆರೆ	ನಾಲ ಜಮೀನು
MR H17/ 21-22 14-06-2022 ವಿಭಾಗ	42/7	0.12	ಕುನ್ನಯ್ಯ ಬಿನ್ ಸಿದ್ದಯ್ಯ	ಗೊಬ್ಬರಗಾಲ	ಅರಕೆರೆ	ಪಿ.ಸಿ. ನಾಲ ಜಮೀನು
MR H-40 2021-2022 18-11-2021 ವಿಭಾಗ	32/5	0.16	ಕುನ್ನಯ್ಯ ಬಿನ್ ಸಿದ್ದಯ್ಯ	ಅರಕೆರೆ	ಅರಕೆರೆ	ಮಳೆ ಆಶ್ರಯ ಜಮೀನು

ಸದರಿ ಸ್ವತ್ತಿನ ಸಂಖ್ಯೆ	ನಿವೇಶನ	ಗ್ರಾಮ / ಗ್ರಾ.ಪಂ.	ಅಳತೆ		
ಗ್ರಾ.ಪಂ. ದಾಖಲೆ ಪ್ರಕಾರ 1633/3111A	ಖಾಲಿ ನಿವೇಶನ	ಅರಕೆರೆ	ಪೂ.ಪ: 54 ಅಡಿ	ಉ.ದ.: 29½ ಅಡಿ	ಪೂರ್ವಕ್ಕೆ ಮೈಸೂರು ಮಂಡ್ಯ ರಸ್ತೆ
887/1 / 1398A	ಖಾಲಿ ನಿವೇಶನ	ಅರಕೆರೆ	ಪೂ.ಪ: 12½ ಅಡಿ	ಉ.ದ.: 25 ಅಡಿ	ದಕ್ಷಿಣಕ್ಕೆ ರಸ್ತೆ
1391/881/2A	ವಾಸದ ಮನೆ	ಅರಕೆರೆ	ಪೂ.ಪ: 19 ಅಡಿ	ಉ.ದ.: 27 ಅಡಿ	ದಕ್ಷಿಣಕ್ಕೆ ರಸ್ತೆ

ಈ ಮೇಲ್ಕಂಡ ಆಸ್ತಿಗಳು ನನ್ನ ಮತ್ತು ನನ್ನ ಧರ್ಮಪತ್ನಿಯ ಹೆಸರಿನಲ್ಲಿ ಇರುತ್ತವೆ. ಈ ಮೇಲ್ಕಂಡ ಏಳು ಆಸ್ತಿಗಳನ್ನು ಮಾರಾಟ ಮಾಡಬೇಕೆಂದು ಇಚ್ಛಿಸಿರುತ್ತೇನೆ. ಆಸಕ್ತಿಯುಳ್ಳವರು ಈ ಕೆಳಕಂಡ ವಿಳಾಸದಲ್ಲಿ ನನ್ನನ್ನು ಭೇಟಿಯಾಗಿ ವಿವರ ತಿಳಿದುಕೊಂಡು ಈ ಏಳು ಆಸ್ತಿಗಳನ್ನು ಖರೀದಿಮಾಡಬಹುದು.

ಕುನ್ನಯ್ಯ, ನಂ. 351, "ಲೀಲಾ ರೆಸಿಡೆನ್ಸಿ", ಅಶೋಕ ರಸ್ತೆ, ಸೆಂಟ್ ಫಿಲೋಮಿನಾಸ್ ಚರ್ಚ್ ಹತ್ತಿರ, ಮೈಸೂರು-570 001

Ph: 0821-2440994, 0821-4058593

6ನೇ ವರ್ಷದ ಸವಿನೆನಪು



ಶ್ರೀ ಕ್ಯಾತಪ್ಪನ ನಿಂಗಪ್ಪನವರು
ನಿಧನ: 07–05–2018
ಕೆ.ಜಿ.ಕೊಪ್ಪಲು ಜಯನಗರ

ನಿಮ್ಮ ನೆನಪು ನಮ್ಮಲ್ಲಿ ಹಸಿರಾಗಿದೆ
ಪತ್ನಿ : ಶ್ರೀಮತಿ ಬೋರಮ್ಮ
ಮಗ: ಎನ್. ಕುಮಾರ
ಸೊಸೆ : ಶ್ರೀಮತಿ ರೂಪ
ಹೆಣ್ಣು ಮಕ್ಕಳು : ಮಹಾದೇವಿ, ಪುಟ್ಟಲಕ್ಷ್ಮಿ, ಲಕ್ಷ್ಮಿ, ಶಿವಮ್ಮ ಹಾಗೂ ಮೊಮ್ಮಕ್ಕಳು

SRI RAMAKRISHNA VIDYASHALA
YADAVAGIRI, MYSURU 570 020
Phone No: 0821- 2514000 / 2417555 / 2516000
e-mail: vidyashala@gmail.com

WANTED
- Sri Ramakrishna Vidyashala, a residential school for boys is seeking male candidates for part-time study and general supervision of students on weekdays (7pm to 10.30pm), Sundays, and holidays.
- Applicants should be a resident of Mysuru and have a BA or BSc degree with a B.Ed from a recognized college, along with experience in working with students.
- Interested and eligible individuals can apply by submitting their bio-data to 'The Correspondent' via post or email.
- Shortlisted candidates will be contacted for an interview, with details provided over phone.

ಮೈಸೂರು ಮಿತ್ರ 45
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

